ಕೊಡಗು ಸಂಗಾತಿ

ಫೆಬ್ರವರಿ 1 ರಿಂದ 29, 2004 ಪಾಕ್ಷಿಕ ಪತ್ರಿಕೆ (ಪೊನ್ನಿ 18-30, ಮಾಯಿ 1-16)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ RNI No. : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಲಿ ಪ್ರಕಟಿತ

KA / SK / MYS / 88 / 2003-05, ಸಂಪುಟ : 7 ಸಂಚಿಕೆ : 21-22 ಪುಟಗಳು : 24 ಬೆಲೆ : 12-00 ರೂ.



: ಲೇಖನ ಒಳಪುಟದಲ್ಲಿ

ಪಶ್ಚಿಮಘಟ್ಟ ಪ್ರದೇಶ ಕರಾವಳಿ ತೀರದ ಬಾಲ ಪ್ರತಿಭೆ

ಕು॥ ಮೂಲೆಮಜಲು ಸಹನಾ ಅಶೋಕ್ ಕುಮಾರ್

ಸಂಗಾತಿ ಓದುಗರಿಗೆಲ್ಲಾರಿಗೂ ಮಹಾಶಿವರಾತ್ರಿಯ ಶುಭಾಶಯಗಳು

ಕೊಡಗು ಗೌಡ ಸಮಾಜ (ರಿ.) ಮಡಿಕೇರಿ

ಗೌಡ ಸಮುದಾಯ ಭವನ, ಅಪ್ಪಯ್ಯಗೌಡ ದಾರಿ, ಮಡಿಕೇರಿ

ಅಭಿನಂದನೆ

ದಿನಾಂಕ 25-12-2003 ಸುಳ್ಯದಲ್ಲಿ ಜರುಗಿದ ಡಾ|| ಕುರುಂಜಿ ವೆಂಕಟ್ರಮಣ ಗೌಡರ 75 ನೇ ವರ್ಷದ ಹುಟ್ಟುಹಬ್ಬದ ವರ್ಧಂತಿ ಉತ್ಸವಕ್ಕೆ ಕೊಡಗಿನಿಂದಲೂ ಹೊರಗಿನಿಂದಲೂ ಸಾವಿರಾರು ಮಂದಿ ಅಭಿಮಾನಿಗಳಾಗಿ ಅತ್ಯುತ್ಸಹದಿಂದ ತೆರಳಿದ್ದೀರಿ. ಕೊಡಗು ಗೌಡ ಸಮಾಜದ ಸದಸ್ಯರು, ಕೊಡಗು ಗೌಡ ವಿದ್ಯಾ ಸಂಘದ ಸದಸ್ಯರು, ಕೊಡಗು ಗೌಡ ಮಹಿಳಾ ಒಕ್ಕೂಟದ ಸದಸ್ಯರು, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಸದಸ್ಯರು, ಕೊಡಗು ಗೌಡ ಮಾಜಿ ನೌಕರರ ಸಂಘದ ಸದಸ್ಯರು ಹಾಗೂ ಬೆಂಗಳೂರು, ಮೈಸೂರು, ಪಿರಿಯಾಪಟ್ಟಣ, ಹಾಸನ, ಸೋಮವಾರಪೇಟೆ, ಸುಂಟಿಕೊಪ್ಪ, ಮುರ್ನಾಡು, ಪಾರಣೆ, ಮರಗೋಡು, ವೀರಾಜಪೇಟೆ, ಚೇರಂಬಾಣೆ, ಭಾಗಮಂಡಲ ಸಮಾಜಗಳ ಸದಸ್ಯರು ಅಲ್ಲದೆ ಗೌಡ ಜನಾಂಗದ ಹಿರಿಯರು, ಕಿರಿಯರು, ಹಿತೈಷಿಗಳು, ಅಭಿಮಾನಿಗಳು ಸಾಗರೋಪಾದಿಯಲ್ಲಿಯೂ ಸೈನ್ಯೋಪಾದಿಯಲ್ಲಿಯೂ ತನು, ಮನ, ಧನ, ನೀಡಿ ಮಡಿಕೇರಿಯಿಂದ ಜೊತೆಯಾಗಿ ಹೊರಟು ಮೆರವಣಿಗೆಯಲ್ಲಿ ಸುಳ್ಯಕ್ಕೆ ತೆರಳಿ ಡಾ|| ಕುರುಂಜಿ ವೆಂಕಟ್ರಮಣಗೌಡರಿಗೆ ಅಭಿನಂದನೆ ಸಲ್ಲಿಸಿ, ಬಾಂಧವ್ಯ ದಿನಾಚರಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಿದ ಸರ್ವರಿಗೂ ಕೊಡಗು ಗೌಡ ಸಮಾಜದ ಕಾರ್ಯಕಾರಿ ಮಂಡಳಿ ಹಾಗೂ ನನ್ನ ವೈಯಕ್ತಿಕ ಹೃತ್ಪೂರ್ವಕ ವಂದನೆಗಳು. ಇನ್ನು ಮುಂದಕ್ಕೂ ಸಹ ಇದೇ ರೀತಿಯ ಸಹಕಾರವನ್ನೂ ನಿರೀಕ್ಷಿಸುವ,

-ಇಂತೀ ನಿಮ್ಮ ಸೇವಾಕಾಂಕ್ಷಿ
ಶ್ರೀ ಪೈಕೇರ ಅನಂತರಾಮ್, ಅಧ್ಯಕ್ಷರು,
ಕೊಡಗು ಗೌಡ ಸಮಾಜ (ರಿ.) ಮಡಿಕೇರಿ

ದೂರವಾಣಿ : 229906
ಪೋಸ್ಟಲ್ ಕೋಡ್ : 571201

ನಿವೇದನೆ

ಕೊಡಗು ಸಂಗಾತಿ ಪತ್ರಿಕೆಯನ್ನು ತರಿಸುತ್ತಿದ್ದು, ಹಣ ನೀಡದೆ ಬಾಕಿ ಇರಿಸಿಕೊಂಡ ಎಲ್ಲಾ ಸಂಗಾತಿ ಓದುಗರು ದಯವಿಟ್ಟು ಕೂಡಲೆ ಮೈಸೂರು ಕಛೇರಿಗೆ MO/DD/ನಗದು ಮೂಲಕ (ಚೆಕ್ ಸ್ಥಳೀಯ) ನೀಡುವುದು. ಸಂಗಾತಿಯ ಮಡಿಕೇರಿ ಶಾಖೆಯು ವಾರಗಳ ಸೋಮವಾರ ಮತ್ತು ಶುಕ್ರವಾರಗಳ ಬೆಳಿಗ್ಗೆ 10ಗಂಟೆಯಿಂದ ಮಧ್ಯಾಹ್ನ 1ಗಂಟೆ ತನಕ ತೆರೆದಿರುತ್ತದೆ. ದಯವಿಟ್ಟು ಸರ್ವರು ಈ ನಿಟ್ಟಿನಲ್ಲಿ ಸಹಕರಿಸುವುದು. ಲೇಖನ, ಬರಹ, ಕತೆ, ಕವನಗಳನ್ನು ಇಲ್ಲಿ ನೀಡಬಹುದು. ವಧುವರರ ಅನ್ವೇಷಣೆ ಕೇಂದ್ರವು ಸಹ ಇರುವುದು. ಬೈತಡ್ಕ ಜಾನಕಿ ಬೆಳ್ಯಪ್ಪನವರು ಇಲ್ಲಿ ಕಾರ್ಯನಿರ್ವಹಿಸುತ್ತಿರುವರು. ದಯವಿಟ್ಟು ಪತ್ರಿಕಾಭಿವೃದ್ಧಿ ದೃಷ್ಟಿಯಿಂದಲೂ ಜನಾಂಗದಭಿವೃದ್ಧಿ ದೃಷ್ಟಿಯಿಂದಲೂ ತಪ್ಪದೆ ಹಣ ನೀಡಿ ಸಹಕರಿಸುವುದು. ಪತ್ರಿಕೆಯೇ ಜನಾಂಗದ ಬೆನ್ನೆಲುಬು ಎಂಬುದನ್ನು ಮರೆಯದಿರಿ. ಸಂಪರ್ಕಿಸಿ.

ಮಡಿಕೇರಿ : 228047, ಮೈಸೂರು : 2404290



ಕರ್ನಾಟಕ ರಾಜ್ಯ ತಾಲ್ಲೂಕು ಪ್ರಾಥಮಿಕ ಶಾಲಾ ಸಂಘದ ಉಪಾಧ್ಯಕ್ಷೆಯಾಗಿ ಪಿ. ಯು. ಬೋಜಮ್ಮ ಆಯ್ಕೆ

ಕೊಡಗು ಜಿಲ್ಲಾ ಸೋಮವಾರಪೇಟೆ ತಾಲ್ಲೂಕಿನ ಪ್ರಾಥಮಿಕ ಶಾಲಾ ಸಂಘದ ಉಪಾಧ್ಯಕ್ಷೆಯಾಗಿ ಪಳಂಗೋಟು ಉತ್ತಯ್ಯ ಬೋಜಮ್ಮನವರು ಇತ್ತೀಚೆಗೆ ಆಯ್ಕೆ ಆಗಿರುತ್ತಾರೆ. ಬೋಜಮ್ಮನವರು ಸೋಮವಾರಪೇಟೆ ತಾಲ್ಲೂಕಿನ ಗಣನೂರು ಗ್ರಾಮದ ಪಳಂಗೋಟು ಮುತ್ತಮ್ಮ ಮತ್ತು ಉತ್ತಯ್ಯನವರ ತೃತೀಯ ಪುತ್ರಿಯಾಗಿದ್ದಾರೆ. ಪ್ರಸ್ತುತ ಶಿಕ್ಷಕಿಯಾಗಿ ಕೂಡಿಗೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವರು. ಇವರು 2003-2004 ನೇ ಸಾಲಿನ ಕರ್ನಾಟಕ ರಾಜ್ಯ ತಾಲ್ಲೂಕು ಪ್ರಾಥಮಿಕ ಶಾಲಾ ಸಂಘದ ಉಪಾಧ್ಯಕ್ಷೆಯಲ್ಲದೆ ಜಿಲ್ಲಾ ಸಂಘದ ನಿರ್ದೇಶಕಿಯಾಗಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬೋಜಮ್ಮನವರಿಗೆ ಈರ್ವರು ಪುತ್ರರಿದ್ದು ಪ್ರಥಮ ಪುತ್ರ ಡಿಪ್ಲೋಮಾ ಮುಗಿಸಿದ್ದರೆ, ಕಿರಿಯ ಪುತ್ರ 7 ನೇ ತರಗತಿಯಲ್ಲಿ ಓದುತ್ತಿರುವನು. ಪತಿ ಬೈಮನ ಪೊನ್ನಪ್ಪನವರು ಕುಶಾಲನಗರ ಹಾರಂಗಿ ಡ್ಯಾಂ ಡಿವಿಜನ್‌ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವರು.

2004, ಫೆಬ್ರವರಿ 1 ರಿಂದ 29ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. ಫೋನ್: **0821/2404290**
	ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್‌ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94483-90855**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ : ಚಿಹ್ನೆ, ಹಸೆಮಣೆ ಪುಸ್ತಕ / ಚಾಂಪಾ ಶುಭಾಶಯ ಕಾರ್ಡ್ಸ್ / ಕುರುಂಜಿಯವರ ಕ್ಯಾಸೆಟ್ಸ್, ಅಮರಶ್ರೀ ಸ್ಮರಣ ಸಂಚಿಕೆ ಇತ್ಯಾದಿ ಲಭ್ಯ.	ಕೊಡಗು ಸಂಗಾತಿ C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ಬೈತಡ್ಕ ಜಾವಕಿ ಬೆಳ್ಯಪ್ಪ ಫೋನ್ : 228047 ಪಾಂಡನ ರತಿ ಚಂದ್ರಶೇಖರ್ ಫೋನ್ : **228380**
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/256591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/273370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ. ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ),

ಕೊಡಗು ಸಂಗಾತಿಯನ್ನು ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಲು ಮರೆಯದಿರಿ.

ಸಂಪಾದಕೀಯ : ಗೌಡ ಸಮುದಾಯಕ್ಕೆ ಒಂದು ಮಠದ ಅವಶ್ಯಕತೆ ಇದೆಯೇ ?

ಭಾರತ ದೇಶವು ಆದಿ ಪುರಾತನ ಕಾಲದಿಂದ ವಿಭಿನ್ನ ಸಂಸ್ಕೃತಿ, ಭಾಷೆ, ಜಾತಿ ಮತಗಳ ಬೀಡಾಗಿದ್ದು ದೇಶದ ಐಕ್ಯತೆಯನ್ನು ಸಾಧಿಸಿಕೊಂಡು ಪ್ರಗತಿ ಪಥದಲ್ಲಿ ಮುನ್ನುಗ್ಗು ತ್ತಿರುವ ದೇಶವಾಗಿದೆ. ಭಾರತ ದೇಶಕ್ಕೆ ಪುರಾಣಗಳ ಪೂರ್ವಕ್ಕೆ ಲೆಕ್ಕಹಾಕಿದರೂ ಹತ್ತಿಪ್ಪತ್ತು ಸಾವಿರ ವರ್ಷಗಳ ಚರಿತ್ರೆ ಯಿರುವಂತಹ ದೇಶವಾಗಿದೆ. ರಾಮಾಯಣ ಮಹಾಭಾರತ ದಂತಹ ಪುಣ್ಯ ಸ್ಥಳಗಳ ಸ್ಥಳವಾಗಿದೆ. ಋಷಿ ಮುನಿಗಳ ತಪೋಭೂಮಿಯಾಗಿದೆ. ಬುದ್ಧ, ಜೈನ, ಬಸವಣ್ಣ ಕುವೆಂಪುರಂತಹ ವಿಶ್ವಮಾನವರ ಬೀಡಾಗಿದೆ. ಸುಂದರ ನಾಡಾಗಿ ಶಾಂತಿಯ ನೆಲೆಯಾಗಿದೆ. ಇಂತಹ ಸನಾತನ ಧರ್ಮಗಳ ನೆಲೆಯಲ್ಲಿ ಹಲವಾರು ಜಾತಿ ಪಂಗಡಗಳಿದ್ದು ಅದರಲ್ಲಿ ಗೌಡ ಜಾತಿಯವರು ಒಂದು. ಇವರದು ಬಹು ಪುರಾತನ ಹಾಗೂ ಭೂಮಿಯಷ್ಟೆ ಹಳೆಯದಾದ ಶ್ರೀಮಂತಿಕೆವುಳ್ಳ ಸಂಸ್ಕೃತಿಯಾಗಿದೆ.

ಭಾರತದಲ್ಲಿ ಸುಮಾರು ನಾಲ್ಕೈದು ಸಾವಿರದಷ್ಟು ಜಾತಿ ಪಂಗಡಗಳು ಇದ್ದು ಹತ್ತೆನ್ನೆರಡು ಮತಗಳು ಹಲವು ಪಂಗಡಗಳು ಇರುವುದಲ್ಲದೆ ಶ್ರೇಷ್ಟವಾದ ಹಿಂದೂ ಧರ್ಮವೊಂದಿದೆ. ಹಿಂದೂ ಧರ್ಮವು ವಿಶಾಲವಾದ ಧರ್ಮವಾದ್ದರಿಂದ ಬಹು ವಿಶಾಲ ಸಿರಿವಂತಿಕೆಯ ಹೃದಯವನ್ನು ಕಾಣಬಹುದು. ಉಳಿದವುಗಳು ಮತ ಪ್ರಚಾರ ಮಾಡುವಂತವುಗಳು. ಇನ್ನೂ ಕೆಲವು ಪಂಥಗಳಾಗಿ ಇರುವಂತಹವುಗಳನ್ನು ನಾವಿಂದು ಕಾಣುತ್ತಿದ್ದೇವೆ.

ಇತ್ತೀಚೆಗೆ ಬಹುತೇಕ ಜಾತಿ ಮತಗಳಲ್ಲಿ ಗುರು ಮಠ ಗಳಿವೆ, ಮಠಾಧೀಶ್ವರರಿದ್ದಾರೆ. ಒಕ್ಕಲಿಗ ಸಮುದಾಯ ದಲ್ಲಿಯೂ ಆದಿ ಚುಂಚನಗಿರಿ ಮಠವಿದೆ. ಅದೀಗ ಸಂಪೂರ್ಣ ಶಿಸ್ತು ಬದ್ಧವಾದ ಮಠವಾಗಿ ಮಠಗಳಲ್ಲಿಯೇ ಅತ್ಯುತ್ತಮ ಕಾಯಕವನ್ನು ನಿರ್ವಹಿಸುವ ಮಠವಾಗಿದೆ. ಚುಂಚನಗಿರಿ ಮಹಾಸ್ವಾಮಿಯವರ ಗೋಶಾಲೆ ಕಾರ್ಯಗಳು, ವನರಕ್ಷಣೆ ಯಂತಹ ಶ್ರೇಷ್ಠ ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವುದು ಸಂತಸಕರ ಬೆಳವಣಿಗೆಯೂ ಹೌದಾಗಿದೆ.

ಆದರೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷೆ ಮಾತನಾಡುವ ಗೌಡರಲ್ಲಿ ಈ ತನಕ ನಿಗದಿಯಾದ ಯಾವುದೇ ಒಂದು ಮಠ ಮತ್ತು ಮಠಾಧೀಶ್ವರುಗಳು ಇರುವುದಿಲ್ಲ. ಒಕ್ಕಲಿಗ ಸಮುದಾಯಕ್ಕೂ ಗೌಡ ಜನಾಂಗಕ್ಕೂ ಸಂಬಂಧ ಇತ್ತೀಚೆಗೆ ಏರ್ಪಡುತ್ತಿದೆ ನಿಜ. ಒಕ್ಕಲಿಗರಿಗೂ ಗೌಡರಿಗೂ ಸಂಬಂಧಗಳು ಆಗಿದೆ, ಆಗುತ್ತಾ ಇದೆ. ಸ್ವಾಮಿಗಳನ್ನು ಕರೆಸಿ ಹಲವಾರು ಸನ್ಮಾನ ದುಮ್ಮಾನಗಳನ್ನು ಮಾಡುತ್ತಿರುತ್ತಾರೆ. 1985ರ ಸುಳ್ಯ ಸಮ್ಮೇಳನದಲ್ಲಿ ಗೌಡರು ಒಕ್ಕಲಿಗ ಸಮುದಾಯದಲ್ಲಿ ಒಂದೆಂದು ಜಾಹೀರುಗೊಳಿಸಿದೆ. ಅಲ್ಲಿಂದಿಲ್ಲಿಗೆ ಹಲವಾರು ಸಭೆ ಸಮಾರಂಭಗಳಿಗೂ, ಖಾಸಗಿಯಾಗಿಯೂ ಸ್ವಾಮೀಜಿಯವರನ್ನು ಕರೆಸಿ ಆಶೀರ್ವಚನ ಪಡೆಯಲಾಗಿದೆ.

ಆದರೆ, ಅದೇಕೊ ಕೆಳಹಂತದ ಮಧ್ಯಮ ವರ್ಗದ ಜನರಿಗೆ ಸರಿ ಹಿಡಿಸಲಿಲ್ಲ. ಯಾಕೆ? ಏನು ಕಾರಣವೇನಿರಬಹುದು? ಎಂಬಿತ್ಯಾದಿ ಪ್ರಶ್ನೆಗಳು ಚಿಂತನಶೀಲರವರ ಕಾಡುತ್ತಿರುವುದು ಸಹಜವಾಗಿದೆ. ಕಾರಣ ಕೊಡಗಿನಲ್ಲಿ ಸ್ವಾಮೀಜಿಯವರ ಪಾದ ಸ್ಪರ್ಶವು ಹಳ್ಳಿಗಳ ಮೂಲೆ ಮೂಲೆಗೆ ಹೋಗದಿರುವುದೇ ಎಂದು ತಿಳಿಯಬೇಕಾಗಿದೆ. ಆದ್ದರಿಂದ, ಗೌಡರು, ಒಕ್ಕಲಿಗ ಪಂಗಡಗಳಲ್ಲಿ ಒಂದೆಂದೂ ಪರಿಗಣಿಸಿಕೊಂಡಿದ್ದರೆ ಚುಂಚನಗಿರಿ ಮಠದ ಆಶ್ರಯದಲ್ಲಿ ಕೊಡಗಿನಲ್ಲಿ ಪ್ರತ್ಯೇಕ ಮಠದ ಅವಶ್ಯಕತೆ ಇದೆ. ಅದಕ್ಕಾಗಿ ಕಾರ್ಯಕ್ರಮ ನಡೆಯಬೇಕು. ಇಲ್ಲವಾದರೆ ಪ್ರತ್ಯೇಕವಾಗಿ ಸ್ವಾಮೀಜಿಯವರ ನೇತೃತ್ವದಲ್ಲಿ "ಅರೆಭಾಷಿಕ" ಗೌಡರಿಗೆ ಪ್ರತ್ಯೇಕ ಗುರುಮಠದ ಅವಶ್ಯಕತೆ ಈಗಿನ ಪರಿಸ್ಥಿತಿಯಲ್ಲಿ ಬೇಕಾಗಿದೆ. ಈ ನಿಟ್ಟಿನಲ್ಲಿ ಗೌಡ ಸಮಾಜಗಳು ಎಚ್ಚೆತ್ತು ಕಾರ್ಯ ನಿರ್ವಹಿಸಿದರೆ ನಾಡಿಗೆ ಒಳ್ಳೆಯದು.

ಒಂದು ಜಾತಿಯ ಅಭಿವೃದ್ಧಿಯೇ ಒಂದು ದೇಶದ ಪ್ರಗತಿಯೆನ್ನುವ ಶ್ಲೋಕದಲ್ಲಿ ಪೂರ್ಣ ನಂಬಿಕೆಯಿರುವ ಸಂಗಾತಿಗೆ ಆಗಲೆ ನೆಮ್ಮದಿ. ಪ್ರತಿಯೊಬ್ಬರು ನಿಷ್ಠಾವಂತರಾಗಿ ತ್ಯಾಗದ ಮನೋಭಾವದ ದೃಢ ಚಿತ್ತದಿಂದ ಐಕ್ಯತೆಯಿಂದ ಮುನ್ನಡೆಯಾದರೆ 2020 ರ ಹೊತ್ತಿಗೆ ಅಭಿವೃದ್ಧಿಯ ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಬೆರೆಯಲು ತನ್ನತನ ಸಂತಿಕೆಯನ್ನು ಉಳಿಸಿಕೊಳ್ಳಲು ಇಂದಿನಿಂದಲೇ ಈಗಿನಿಂದಲೇ ಸಜ್ಜಾಗಬೇಕು.

ಮಠಾಧೀಶ್ವರರು ಯಾಕೆ ಬೇಕು ?

ಒಂದು ಗುರುಮಠವೆಂಬ ಕೇಂದ್ರಬಿಂದು ಇದ್ದಲ್ಲಿ ಕೆಲವು ದಿನಗಳಾದರೂ ಅಲ್ಲಿಗೆ ಎಲ್ಲಾ ಗ್ರಾಮಗಳಿಂದ ಜನರು ಬಂದು ಭೇಟಿ ನೀಡುತ್ತಾರೆ. ಹಲವರ ಪರಿಚಯವಾಗುತ್ತದೆ. ಅಲ್ಲಿ ಬಡವ ಶ್ರೀಮಂತವೆಂಬ ವಿಂಗಡಣೆಯಿಲ್ಲ. ಎಲ್ಲರೂ ಸ್ವಾಮೀಜಿ ಯವರಲ್ಲಿ ತಲೆಬಾಗಬೇಕು. ಅವರ ಪ್ರವಚನಗಳನ್ನೂ ಕೇಳಬೇಕು. ಸಮಾನರು ಎಂಬ "ಸ್ತುಪ್ತ" ಜ್ಞಾನದ ಅರಿವಾಗುತ್ತದೆ. ಒಂದು ಗ್ರಾಮದಲ್ಲಿ ಅಥವಾ ಕುಟುಂಬದಲ್ಲಿ ನಡೆಯುವ ಜಗಳ, ವ್ಯಾಜ್ಯಗಳ, ಕಕ್ಷಿಗಳ ತೀರ್ಮಾನಗಳಿಗೆ ಅಸ್ಪದವಿದೆ. ಪೋಲೀಸ್ ಕಛೇರಿ, ಕೋರ್ಟುಗಳ ಮೆಟ್ಟಲು ಹತ್ತಬೇಕಾಗಿರುವುದಿಲ್ಲ. ಸಾಲ ಸೋಲ ಮಾಡಿ ಕೋರ್ಟಿನ ಮೆಟ್ಟಲು ಹತ್ತುವುದು ತಡೆಯಾದೀತು. ಇಂತಹ ಹಲವಾರು ಕಾರಣಗಳಿಗೆ ಪರ್ಯಾಯವೆಂದರೆ ಗುರುಗಳ ಅವಶ್ಯಕತೆ.

ಕೊಡಗಿನಲ್ಲಿ ಹಲವಾರು ಸ್ಥಳಗಳು ಇಂತಹ ವಾತವರಣಕ್ಕೆ ಸರಿಯಾಗುವ ಪ್ರಶಾಂತವಾದ ಸ್ಥಳಗಳಿವೆ. ಅಂತವುಗಳನ್ನು ಆಯ್ಕೆ ಮಾಡಿ ನಂತರ ಚುಂಚನಗಿರಿ ಮಠದಲ್ಲಿ ವೇದಶಾಸ್ತ್ರಗಳನ್ನು ಪಡೆದ "ವಟು"ವನ್ನು ಆರಿಸಿ ಆ ಮೂಲಕ ಮುಂದುವರಿಯುವುದು. ಸೂಕ್ತ. ಗೌಡ ಸಮುದಾಯದ ಎಲ್ಲಾ ಸಂಘ ಸಂಸ್ಥೆಗಳು, ಸಮಾಜಗಳು ಈ ಕೂಡಲೇ ಎಚ್ಚರ ವಹಿಸಿ ಕಾರ್ಯಗತಗೊಳಿಸಿದರೆ ನಾಡಿಗೆ ಹಿತವೆಂಬುದು ಸಂಗಾತಿಯ ಬಯಕೆಯಾಗಿದೆ.

ಚಿಂತನೆ ಕಾರ್ಯಗತ ಆಗಬೇಕು, ಕಾರ್ಯಕ್ಕೆ ಒಂದು ಗುರಿಬೇಕು, ಗುರಿಗೆ ಒಂದು ಗುರು ಬೇಕು.

ಸಂಗೀತ ಸಾಧನೆಯತ್ತ ಮೂಲೆಮಜಲು ಸಹನಾ ಅಶೋಕ್ ಕುಮಾರ್



"ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದುನಾ ಹಾಡಿದರು ಅಂದಿನಂತೆಯೆ
ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ ?"

ಎಂದು ಜಿ. ಎಸ್. ಶಿವರುದ್ರಪ್ಪನವರು ಬರೆದ ಭಾವ ಗೀತೆಯನ್ನು ಕೇಳುತ್ತಿದ್ದಂತೆ ಈ ಪುಟಾಣಿ ಹಾಡು ಹಕ್ಕಿಯ ನೆನಪಾಗುತ್ತದೆ. ಕೇವಲ ತನ್ನ ಒಂಭತ್ತನೆಯ ವಯಸ್ಸಿಗೇ ತನ್ನ ಹಾಡು, ಕಲೆ, ಕುಣಿತ, ಹವ್ಯಾಸಗಳಿಂದ ಶೈಕ್ಷಣಿಕ ಹಾಗೂ ಸಾರ್ವಜನಿಕ ರಂಗದಲ್ಲಿ ಗುರುತಿಸಿಕೊಂಡ ಕು. ಸಹನಾ ದಟ್ಟ ಹಸಿರಾವರ್ತಿಸಿದ ಸುಬ್ರಹ್ಮಣ್ಯದ ಪುಟ್ಟ ಕೋಗಿಲೆಯೆಂದರೆ ತಪ್ಪಾಗಲಾರದು.

ತೊದಲು ನುಡಿಯಿಂದ ಮಾತಿನೆಡೆಗೆ ಹೊರಟ ಶಾಲಾ ಸಂದರ್ಭದಲ್ಲಿ ಹಾಡಿಗೆ ದೊರೆತ ಬಹುಮಾನ ಈಕೆಯನ್ನು ಸಂಗೀತವೇ ಸುತ್ತ ಆವರಿಸಿಕೊಂಡಿತು. ಒಂದನೇ ತರಗತಿಯಲ್ಲಿ ತನ್ನ ಸ್ವರ, ತಾಳ, ಲಯಗಳನ್ನು ಹಾಡಿನಲ್ಲಿ ಸಾರ್ವಜನಿಕ ರೆದುರಿಟ್ಟ ಈಕೆ ಶಾಲೆ ಪುಟಾಣಿ ಹಾಡುವವಳಾಗಿ ಮೂಡಿ ಬಂದಳು. ಮೂರನೆಯ ತರಗತಿಗೆ ಸೇರ್ಪಡೆಗೊಂಡಾಗ ತನ್ನಲ್ಲಡಗಿದ ಸುಪ್ತ ಪ್ರತಿಭೆಯನ್ನು ಹೊರ ಸೂಸಲು ಪ್ರಯತ್ನಿಸಿ, ಕುಂಚ, ಬಣ್ಣಗಳನ್ನು ಕೈ ಗೆತ್ತಿಕೊಂಡು ರಾಜ್ಯ ಮಟ್ಟದ ಅಂಚೆ-ಕುಂಚ ಸ್ಪರ್ಧೆಯಲ್ಲಿ ಬಹುಮಾನವನ್ನು ಗಳಿಸಿಕೊಂಡಾಗ ಈಕೆಯ ಮನದಲ್ಲಿ ನವಿಲೊಂದು ನಾಟ್ಯವಾಡುವ ದೃಶ್ಯವನ್ನು ಗ್ರಹಿಸಿಕೊಂಡಳೋ ಏನೋ? ಅಂದು ನಡೆದ ರಾಷ್ಟ್ರೀಯ ನವಿಲುಗರಿ ಚಿತ್ರ ರಚನಾ ಸ್ಪರ್ಧೆಯಲ್ಲಿ ಶಾಲಾ ಮಟ್ಟದಲ್ಲಿ ಪ್ರಥಮ ಬಹುಮಾನದೊಂದಿಗೆ, ಜಿಲ್ಲಾ ಮಟ್ಟದಲ್ಲಿ ತೃತೀಯ ರ್‍ಯಾಂಕ್ ಗಳಿಸಿ ಕುಂಚಗಳ ನಂಟಿಗೆ ಅಂಟಿಕೊಂಡು ಈಗ ಚಿತ್ರಕಲೆಯನ್ನು ಅಭ್ಯಸಿಸುತ್ತಿದ್ದಾಳೆ.

ಪರಿಸರದ ಸಂಘ-ಸಂಸ್ಥೆಗಳ ಹೆಚ್ಚಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಅತ್ಯಂತ ಕ್ರಿಯಾಶೀಲೆ ಯಾಗಿ ಬೆಳೆಯುತ್ತಿರುವ ಈಕೆ ಸೃಜನಾತ್ಮಕ, ರಚನಾತ್ಮಕ ಚಟುವಟಿಕೆಯಲ್ಲೂ ಮುಂದಿದ್ದಾಳೆ. ಅಂಚೆ ಚೀಟಿ ಸಂಗ್ರಹ, ನಾಣ್ಯ ಸಂಗ್ರಹ, ಚಿತ್ರಕಲೆ ಮುಂತಾದ ವಿಶೇಷ ಹವ್ಯಾಸ ಬೆಳೆಸಿಕೊಂಡ ಈಕೆಯದು ಅಗಾಧ ಸ್ಮರಣಶಕ್ತಿ. ಸಂಗೀತ ಅಭಿನಯಗಳಲ್ಲಿ ಉತ್ಕೃಷ್ಟ ಮಟ್ಟದ ಪ್ರತಿಭೆಯನ್ನು ಹೊರಸೂಸುತ್ತಿರುವ ಕು. ಸಹನಾ ಪ್ರಸ್ತುತ ಬೆಳ್ಳಾರೆಯ ಜ್ಞಾನಗಂಗಾ ಪಬ್ಲಿಕ್ ಸ್ಕೂಲ್‌ನಲ್ಲಿ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಶಾಲಾ ಚಟುವಟಿಕೆ, ಪಠ್ಯ ಚಟುವಟಿಕೆಯಲ್ಲೂ, ತರಗತಿಯಲ್ಲೂ, ಮುಂಚೂಣಿಯಲ್ಲಿ ರುವಳು. ನಾಟ್ಯ ಕಲಿಸಿ ಕಾಲಿಗೆ ಗೆಜ್ಜೆ ಕಟ್ಟಿ ಯಕ್ಷಗಾನದಲ್ಲಿ ರಂಗಕ್ಕೆ ತಂದ ಶ್ರೀ ಮಲೆಯಾಳ ಗೋಪಾಲ ಕೃಷ್ಣ ಭಟ್‌ರವರನ್ನು ಈಕೆ ಹೆಮ್ಮೆಯಿಂದ ಸ್ಮರಿಸುತ್ತಾಳೆ. ಸುಳ್ಯದ ಭಾವನಾ ತಂಡದ ಸದಸ್ಯೆಯಾದ ಸಹನಾ ಕೆ. ಆರ್. ಗೋಪಾಲಕೃಷ್ಣ ಅವರಲ್ಲಿ ಸುಗಮ ಸಂಗೀತ ಅಭ್ಯಸಿಸುತ್ತಿದ್ದಾಳೆ. 6 ವರ್ಷದ ತಂಗಿ ಶ್ರೇಯಸ್, 1 ನೇ ತರಗತಿ, ಕುಮಾರಸ್ವಾಮಿ ಪ್ರಾಥಮಿಕ ಶಾಲೆ ಸುಬ್ರಮಣ್ಯದಲ್ಲಿ ಓದುತ್ತಿದ್ದಾಳೆ. ಹರಿಹರ ಪಲ್ಲತ್ತಡ್ಕ ಕೂಜುಗೋಡು ಪಟೇಲ್ ನಾಗಪ್ಪಗೌಡರ ಮೊಮ್ಮಗಳೇ ಈ ಬಾಲ್ಯ ಪ್ರತಿಭೆ.

ಶ್ರೀ ಧ.ಮ. ಶಿಕ್ಷಣ ಸಂಸ್ಥೆಯಿಂದ ನಡೆಸಲ್ಪಡುವ ಮಧ್ಯಮಸ್ತರ ತರಬೇತಿ ಕೇಂದ್ರ, ಉಜಿರೆ (ಎಂ. ಎಲ್. ಟಿ. ಸಿ.) ಇದರ ಪ್ರಾಂಶುಪಾಲರಾದ ಮೂಲೆಮಜಲು ಅಶೋಕ್ ಕುಮಾರ್ ಹಾಗೂ ಸುಬ್ರಹ್ಮಣ್ಯದ ಕೆ. ಎಸ್. ಎಸ್. ಕಾಲೇಜಿನ ಗ್ರಂಥ ಪಾಲಕಿ ಶ್ರೀಮತಿ ಸುನಿತಾರವರ 10 ನೇ ವರುಷದ ಪುತ್ರಿಯಾದ ಕುಮಾರಿ ಸಹನಾ ಹಲವು ಸಾಧನೆಗಳ ಶಿಖರಗಳನ್ನೇರಿ ಯಶಸ್ವಿಯಾಗಲೆಂದು ಈ ಪುಟ್ಟ ಕೋಗಿಲೆಗೆ ಹಾರೈಕೆಗಳು.

***ಬಾಲ ಪ್ರತಿಭೆ ಸಹನಾಗೆ ಸಿಕ್ಕಿದ ಪ್ರಶಸ್ತಿಗಳ ವಿವರ*:-**

1. ಭುವನಸಿರಿ ಕಲಾ ಸಂಸ್ಥೆ ಮತ್ತು ಸುನ್ನರ ಕಲಾವೃಂದ ಬೆಂಗಳೂರು ಇವರು ನಡೆಸಿದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ (6-4-2003) ಭಾವಗೀತೆಯಲ್ಲಿ ಪ್ರಥಮ, ಏಕಪಾತ್ರಾಭಿನಯದಲ್ಲಿ ತೃತೀಯ, ಭಕ್ತಿಗೀತೆಯಲ್ಲಿ ಪ್ರೋತ್ಸಾಹಕ, ಜನಪದ ಗೀತೆಯಲ್ಲಿ ಪ್ರೋತ್ಸಾಹಕ ಬಹುಮಾನ ಪಡೆದಿರುವಳು.

2. ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು ಇವರು ನಡೆಸಿದ ರಾಜ್ಯ ಮಟ್ಟದ ಪ್ರತಿಭಾ ಶ್ರೀ "2002ರ ಸ್ಪರ್ಧೆಯಲ್ಲಿ ಜನಪದ ಗೀತೆಯಲ್ಲಿ ಪ್ರಥಮ ರಂಗಗೀತೆಯಲ್ಲಿ ಪ್ರಥಮ ಸ್ಥಾನ ಪಡೆದಿರುವಳು.

3. ಸುಮಧುರ ಸಂಗೀತ ವಿದ್ಯಾಲಯ ಬೆಂಗಳೂರು ಇವರು ನಡೆಸಿದ ರಾಜ್ಯ ಮಟ್ಟದ ಗೀತ ಗಾಯನ ಸ್ಪರ್ಧೆಯಲ್ಲಿ ದೇವರ ನಾಮದಲ್ಲಿ ಸಮಧಾನಕರ ಬಹುಮಾನ (15-12-2003) 8ನೆ ನವೆಂಬರ್ 2003 ನೇ ಶನಿವಾರ ನಡೆದ ಗೀತ ಗಾಯನ ಸ್ಪರ್ಧೆಯ ದೇವರ ನಾಮದಲ್ಲಿ ಪ್ರಥಮ ಜನಪದದಲ್ಲಿ ಪ್ರಥಮ ಮತ್ತು ಭಾವಗೀತೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿರುವಳು.

4.ಸಂಗೀತ ಗಂಗಾ ಬೆಂಗಳೂರು ಇವರು 2003 ರಲ್ಲಿ ದಿ. ಜಿ. ವಿ. ಅತ್ರಿಯರವರ ಸ್ಮರಣಾರ್ಥ ನಡೆದ ರಾಜ್ಯ ಮಟ್ಟದ ಗೀತ ಗಾಯನ ಸ್ಪರ್ಧೆಯಲ್ಲಿ ಜಿ. ವಿ. ಅತ್ರಿ ಗೀತೆಗಳ ವಿಭಾಗದಲ್ಲಿ ದ್ವಿತೀಯ, ದೇಶಭಕ್ತಿಗೀತೆಯಲ್ಲಿ ಸಮಾಧಾನಕರ, ಜನಪದ ಗೀತೆಯಲ್ಲಿ ಸಮಾಧಾನಕರ ಮತ್ತು ಭಾವಗೀತೆಯಲ್ಲಿ ಅಭಿನಂದನಾ ಪ್ರಶಸ್ತಿಯನ್ನುಪಡೆದಿರುವಳು.

5. "ಪ್ರತಿಭೋತ್ಸವ -7" ಹೊಂಬಾಳೆ ಬೆಂಗಳೂರು ಇವರು ನಡೆಸಿದ ರಾಜ್ಯ ಮಟ್ಟದ ಸುಗಮ ಸಂಗೀತದ ವಚನ ಗಾಯನ

ಜ್ಞಾಪಕ ಶಕ್ತಿಯೊಂದು ಚಿರಂತನ ಕೃಷಿಯ ಫಲವೇ ಆಗಿದೆ.

ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದಿರುವಳು (25-5-2003)

6. ಶಾಂತಿವನ ಟ್ರಸ್ಟ್ ಧರ್ಮಸ್ಥಳ ಇವರು ನಡೆಸಿದ ರಾಜ್ಯ ಮಟ್ಟದ ಅಂಚೆ ಕುಂಚ ಸ್ಪರ್ಧೆಯಲ್ಲಿ ಪ್ರೋತ್ಸಾಹಕರ ಬಹುಮಾನ ಪಡೆದಿರುವಳು.

7.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ, ಇವರು 2002-2003 ನೆಯ ಸಾಲಿನ ಬಾಲ ಪ್ರತಿಭೆ ಪುರಸ್ಕಾರಕ್ಕಾಗಿ ಏರ್ಪಡಿಸಿದ್ದ ಮೈಸೂರು ವಿಭಾಗ ಮಟ್ಟದ ಸುಗಮ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿದ್ದಳು.

8. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳೂರು ಇವರು 27-10-2002 ರಂದು ಬಾಲ ಪ್ರತಿಭೆ ಪುರಸ್ಕಾರಕ್ಕಾಗಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಬಾಲ ಪ್ರತಿಭೆ ಸ್ಪರ್ಧೆಯಲ್ಲಿ ಸುಗಮ ಸಂಗೀತ ವಿಭಾಗದ ಭಾವಗೀತೆಯಲ್ಲಿ ಪ್ರಥಮ ಸ್ಥಾನ ಗಳಿಸಿದಳು.

9. ಕಲಾ ಸಾಗರ ಸಂಗೀತ ನೃತ್ಯ ನಾಟಕ ಅಕಾಡೆಮಿ ಮಡಿಕೇರಿ ಇವರು 2003 ರಲ್ಲಿ ನಡೆಸಿದ ಜಿಲ್ಲಾ ಮಟ್ಟದ ಜಾನಪದ ಗೀತೆಯಲ್ಲಿ ಪ್ರಥಮ, ಜನಪದ ನೃತ್ಯದಲ್ಲಿ ದ್ವಿತೀಯ ಸ್ಥಾನ ಪಡೆದಳು.

10.ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆ ಮಡಿಕೇರಿ ಇವರು 2003-04 ರ ಸುವರ್ಣ ವರ್ಷಾಚರಣೆ ಸಂಬಂಧ ನಡೆಸಿದ ದೇಶಭಕ್ತಿ ಗೀತೆಯಲ್ಲಿ ಪ್ರಥಮ, ಕಥೆ ಹೇಳುವ ಸ್ಪರ್ಧೆಯಲ್ಲಿ ನಡೆಸಿದ ದೇಶಭಕ್ತಿ ಗೀತೆಯಲ್ಲಿ ಪ್ರಥಮ, ಕಥೆ ಹೇಳುವ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಳು.

11.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳೂರು ಇವರು 2003 ರಲ್ಲಿ ಜರುಗಿಸಿದ ಬಾಲ ಪ್ರತಿಭೆ ಸ್ಪರ್ಧೆಯಲ್ಲಿ ಜನಪದ ವಿಭಾಗದಲ್ಲಿ ಭಾಗವಹಿಸಿದ್ದಳು.

12.ಅಖಿಲ ಭಾರತ 71 ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮೂಡುಬಿದಿರೆ ಪ್ರಯುಕ್ತ ವಲಯ ಮಟ್ಟದಲ್ಲಿ ಏರ್ಪಡಿಸಿದ ಭಾವಗೀತೆ ಸ್ಪರ್ಧೇಯಲ್ಲಿಪ್ರಥಮ ಸ್ಥಾನ ಪಡೆದಿರುವಳು. ಜೊತೆಗೆ ಜಾನಪದ ಗೀತೆಯಲ್ಲಿ ಪ್ರಥಮ ಸ್ಥಾನಪಡೆದಳು.

13.ರಾಷ್ಟ್ರೀಯ ನವಿಲುಗರಿ ಚಿತ್ರ ರಚನಾ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಳು.

14. ಅಂತರಾಷ್ಟ್ರೀಯ ಚಿಂತನ ವಿಜ್ಞಾನ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ (ದರ್ಜೆ)ಶಾಲಾಮಟ್ಟದಲ್ಲಿಪಡೆದಳು.

15.ಶಾಂತಿವನ ಟ್ರಸ್ಟ್, ಧರ್ಮಸ್ಥಳ ಇವರು 11-11-2003 ರಂದು ನಡೆಸಿದ ಸುಳ್ಯ ತಾಲ್ಲೂಕು ಮಟ್ಟದ ಪ್ರಾರ್ಥನ ಶ್ಲೋಕ ಕಂಠಪಾಠ ಸ್ಪರ್ಧೆಯಲ್ಲಿ ತೃತೀಯ ಸ್ಥಾನಪಡೆದಳು.

16.ಸಾರ್ವಜನಿಕ ಶಿಕ್ಷಣ ಇಲಾಖೆ, ಸುಳ್ಯ ತಾಲ್ಲೂಕು ಇವರು 2002 ರಲ್ಲಿ ನಡೆಸಿದ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಕನ್ನಡ ಕಂಠಪಾಠದಲ್ಲಿ ತೃತೀಯ, ಲಘು ಸಂಗೀತದಲ್ಲಿ ದ್ವಿತೀಯ ಸ್ಥಾನ ಪಡೆದಿರುವಳು.

17.ಶಿಕ್ಷಕರ ಯಕ್ಷಗಾನ ಒಕ್ಕೂಟ ಸುಳ್ಯ ತಾಲ್ಲೂಕು 'ಯಕ್ಷಗಾನ ಕಾರಂಜಿ' ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುವಳು. (24-12-2002)

18.ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕ್ಲಬ್ ಬುಲ್ ಬುಲ್ ಉತ್ಸವದಲ್ಲಿ ತಾಲ್ಲೂಕು ಮಟ್ಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಳು. (2002)

19.ಸುಬ್ರಹ್ಮಣ್ಯ ಕುಕ್ಕೇ ಶ್ರೀ ಜೂನಿಯರ್ ಚೇಂಬರ್ ಇವರು 2001 ರಂದು ನಡೆಸಿದ ಭಕ್ತಿಗೀತೆ ಸ್ಪರ್ಧೆಯಲ್ಲಿ ಪ್ರಥಮ, ಚಿತ್ರಕಲಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಳು.

20. ಕುಮಾರಸ್ವಾಮಿ ಪ್ರಾಥಮಿಕ ಶಾಲೆ ಸುಬ್ರಹ್ಮಣ್ಯ ಇವರು ಶಾಲಾ ವಾರ್ಷಿಕೋತ್ಸವದ ಪ್ರಯುಕ್ತ 2002 ರಲ್ಲಿ ನಡೆಸಿದ ಹಾಡು, ಭಾಷಣ, ನೆನಪಿನ ಶಕ್ತಿ, ಚಿತ್ರಕಲೆ, ಗೂಟಕ್ಕೆ ರಿಂಗ್ ನೆಟ್ ಸ್ಪರ್ಧೆಗಳಲ್ಲಿ ಪ್ರಥಮದಿಂದ ದ್ವಿತೀಯ ಸ್ಥಾನವನ್ನು ಪಡೆದಿರುವಳು.

21.ರಾಷ್ಟ್ರೀಯ ಬಾಲಪ್ರಜ್ಞೆಯವರು ಮಡಿಕೇರಿಯಲ್ಲಿ ನಡೆಸಿದ ರಾಜ್ಯ ಮಟ್ಟದ ದೇಶಭಕ್ತಿಗೀತೆಯಲ್ಲಿ ಪ್ರಥಮ ಸ್ಥಾನ ಪಡೆದಳು.(2003)

22. ಯುವಜನ ಸಂಯುಕ್ತ ಮಂಡಳಿ ಸುಳ್ಯ ತಾಲ್ಲೂಕು ಇವರು 2001 ರಲ್ಲಿ ನಡೆಸಿದ ದೇಶಭಕ್ತಿ ಗೀತೆಯಲ್ಲಿ ದ್ವಿತೀಯ ಸ್ಥಾನಗಳಿಸಿ ಫಲಕ ಪಡೆದಳು.

23. ಇಂಟವಾಕ್ಟ್ ಕ್ಲಬ್ ಸುಳ್ಯ, ಇವರು ನಡೆಸಿದ ತಾಲ್ಲೂಕು ಮಟ್ಟದ ಯುವ ಸಪ್ತಾಹ ಅಭಿನಯ ಗೀತೆಯಲ್ಲಿ ದ್ವಿತೀಯ ಸ್ಥಾನ ಪಡೆದು ಫಲಕವನ್ನು ಪಡೆದಳು.

24.ಸುಬ್ರಹ್ಮಣ್ಯ ಶಾರದಾಂಬ ಸಮಿತಿಯವರು 2001 ರಲ್ಲಿ ನಡೆಸಿದ ದೇವರ ನಾಮ ಮತ್ತು ಜನಪದ ಗೀತೆಯಲ್ಲಿ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಳು.

25.ಸುಬ್ರಹ್ಮಣ್ಯದ ಗಣೇಶೋತ್ಸವ ಸಮಿತಿಯವರು 2002 ರಲ್ಲಿ ನಡೆಸಿದ ಭಾಷಣ ದೇವರನಾಮ ಸ್ಪರ್ಧೆಗಳಲ್ಲಿ ದ್ವಿತೀಯ ಸ್ಥಾನ ಪಡೆದಳು.

-ಪಟ್ಟಡ ಪ್ರಭಾಕರ

ಕುಶಾಲನಗರ ಗೌಡ ಯುವಸಮಿತಿಯವರಿಂದ ರುದ್ರ ಭೂಮಿಯ ಶ್ರಮದಾನ ಶಿಬಿರ

ತಾ. 4-1-04 ನೇ ಭಾನುವಾರ ದಿವಸ ಕುಶಾಲನಗರದ ಸಂತೆಮಾಳದ ಬಳಿಯಿರುವ ಗೌಡ ಸಮಾಜದ ರುದ್ರ ಭೂಮಿಯಲ್ಲಿ ಬೆಳೆದಿದ್ದ ಗಿಡಗಂಟಿಗಳು, ಗಾಜು ಚೂರುಗಳು, ಕಲ್ಲು ಮಣ್ಣು ಇತ್ಯಾದಿ. ಅನುಪ್ರಯುಕ್ತ ವಸ್ತುಗಳನ್ನು, ಗೌಡ ಯುವಕ ಸಂಘದ ಅಧ್ಯಕ್ಷ ಪೊನ್ನಚ್ಚನ ಶ್ರೀ ಮೋಹನ್ ಮತ್ತು ಯುವಕ ತಂಡದ ಎಲ್ಲಾ ಸದಸ್ಯರುಗಳು ಹಾಗೂ ಗೌಡ ಸಮಾಜದ ಕಾರ್ಯದರ್ಶಿ ಕೊಡೆಗನ ಶ್ರೀ ರಮೇಶ್, ಅಯ್ಯಂಡ್ರ ಶ್ರೀ ಭೀಮಯ್ಯ, ಕೋಡಿ ಶ್ರೀ ಶುಭಾಶ್, ಕುಂಬು ಗೌಡನ ಸೋಮಣ್ಣ ಆಮೆ ಮನೆ ಶ್ರೀಮತಿ ಕಮಲಾಗಣಪತಿ ಮಹಿಳಾ ಸಂಘದ ಅಧ್ಯಕ್ಷೆ ಕುದುಪಜೆ ಶಾಂತಿ ಬೋಜಪ್ಪ ಮತ್ತು ಬಳಗದವಿಂದ ಶುಚಿ ಗೊಳಿಸಲಾಯಿತು.

-ಕುದುಪಜೆ ಬಸಪ್ಪ

ಕೊಡಗು ಸಂಗಾತಿ ಪತ್ರಿಕೆ
ಜನಾಂಗದ ಬೆನ್ನೆಲುಬು ಪತ್ರಿಕೆ.

ವಿಶ್ವದೆದುರು ಮಿನುಗುವ ಭಾರತ

ಆತ್ಮ ನಿಂದನೆ ಮಾಡುವುದರಲ್ಲಿ ಮತ್ತು ತಮ್ಮದೆ ಸಂಸ್ಕೃತಿಯನ್ನು ತಾತ್ಸಾರದಿಂದ ಕಾಣುವುದರಲ್ಲಿ ಭಾರತೀಯರನ್ನು ಮೀರಿಸುವವರು ಬೇರೊಬ್ಬರಿಲ್ಲ ಎಂಬುದು ಒಂದಿಷ್ಟು ಅತಿಶಯೋಕ್ತಿ ಎನಿಸಬಹುದಾದರೂ ಅದರಲ್ಲಿ ಸತ್ಯಾಂಶವೂ ಇಲ್ಲದಿಲ್ಲ. ಸ್ವಂತವನ್ನು ದ್ವೇಷಿಸುವುದೇ ಅವರ ಸ್ವಭಾವವೇನೋ ಅನ್ನಿಸುತ್ತದೆ. ಅದರಲ್ಲೂ ವಿಶೇಷವಾಗಿ ಶಿಕ್ಷಿತ ಹಿಂದುಗಳು, ಹಿಂದುತ್ವದ ಅವಹೇಳನದಲ್ಲಿ ಖುಷಿ ಪಡುತ್ತ ಅದನ್ನು ಕೀಳು ಮತ್ತು ಕಳಪೆಯಾಗಿ ಕಾಣುವುದರಲ್ಲೆ ಆನಂದ ಪಡುತ್ತಾರೆಂಬುದೇ ಅತ್ಯಂತ ಖೇದಕರ ಸಂಗತಿ. ನಮ್ಮ ಆರ್ಥಿಕ ವಿಕಾಸದ ಪ್ರಮಾಣ ಏನೂ ಉಪಯೋಗಕ್ಕೆ ಬಾರದ ಮೂರು ಶೇಕಡದ ಸಮೀಪ ತಳಾಯಿಸುತ್ತಿದ್ದಾಗ, ಓರ್ವ ಅಜ್ಞಾನಿ ಆರ್ಥಿಕ ತಜ್ಞ ಅದನ್ನು "ಹಿಂದು ವಿಕಾಸದ ವೇಗ" ಎಂದು ಲೇವಡಿ ಮಾಡಿದ್ದೂ ಉಂಟು. ನಮ್ಮ ಉದ್ಯಮಿಗಳನ್ನು ಅವರ ಸಹಾಸಕ್ಕೋ ಅಥವಾ ಅದರ ಅಭಾವಕ್ಕೋ ಹೀಗಳೆಯುವುದರಲ್ಲೂ ಅವರು ಚಪ್ಪರಿಸಿ ಆನಂದ ಪಡುತ್ತಿದ್ದುದನ್ನು ಆಗ ಕಾಣಬಹುದಾಗಿತ್ತು.

ಆದರೆ ಕಾಲಬದಲಾಗುತ್ತಿದೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ (ರಾ.ಪ್ರ.ರಂ. / NDA) ದ ಸರಕಾರ ತನ್ನ ಅವಧಿ ಮುಗಿಯುವ ಹಂತಕ್ಕೆ ತಲಪುತ್ತಿರುವಾಗ ಜನರಲ್ಲಿನ ಉತ್ಸಾಹ ಏರುಮುಖ ದಲ್ಲಿರುವುದು ಗೋಚರಿಸುತ್ತದೆ. ಇತ್ತೀಚೆಗೆ ಸರಕಾರದ ವತಿಯಿಂದ ಒಂದು ಜಾಹೀರಾತು ಪ್ರಮುಖ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಯಿತು. "ನಮ್ಮ ದೇಶ ಸಮೃದ್ಧ ಗೊಳ್ಳುತ್ತಿದೆ. ನಮ್ಮ ಬದುಕು ಬದಲಾಗುತ್ತಿದೆ. ನಮ್ಮ ಭವಿಷ್ಯ ಭರವಸೆಯಿಂದ ತುಂಬಿದೆ. ಇದಕ್ಕಿಂತಲೂ ಹೆಚ್ಚು ಮಿನುಗಲು ನಿಮಗೆ ಹಿಂದೆ ಎಂದೂ ಅವಕಾಶ ದೊರೆತೇ ಇರಲಿಲ್ಲ" ಎಂಬ ಮಾತುಗಳು ಅದರಲ್ಲಿದ್ದವು. ಆದರೆ ಆ ಜಾಹಿರಾತಿನಲ್ಲಿ ಉಲ್ಲೇಖನೀಯವೆನಿಸುವ ಇನ್ನೂ ಹಲವಾರು ಸಂಗತಿಗಳೂ ಇದ್ದವು. "ಭಾರತದಾದ್ಯಂತ ನಿಮಗೀಗ ಹೊಸ ಜಾಗೃತಿಯ ಅನುಭವ ವಾಗುತ್ತಿದೆ. ಆರ್ಥಿಕತೆ ಈಗ ಮೇಲ್ಮುಖವಾಗಿದೆ. ಉದ್ಯಮಗಳು ಹುರುಪು ತಾಳಿವೆ. ಹೆಚ್ಚಿನ ಸಮೃದ್ಧಿಯ ಹೆಬ್ಬಾಗಿಲಿನಲ್ಲಿ ನಾವೀಗ ನಿಂತಿದ್ದೇವೆ. ಬೆಲೆಗಳಲ್ಲಿ ಸ್ಥಿರತೆಯಿದೆ. ರಸ್ತೆಗಳು ಹೆಚ್ಚಾಗುತ್ತಿವೆ. ರಾಜಮಾರ್ಗಗಳು ಆಧುನಿಕಗೊಳ್ಳುತ್ತಿವೆ..." ಇತ್ಯಾದಿ ಅದರಲ್ಲಿವೆ. ಒಟ್ಟಿನಲ್ಲಿ ನಮ್ಮ ಪ್ರಗತಿಯನ್ನು "ಮಿನುಗುವ ಭಾರತ" ಎಂಬ ಪದಗುಚ್ಛದಲ್ಲಿ ಆ ಜಾಹೀರಾತಿನಲ್ಲಿ ವ್ಯಕ್ತಪಡಿಸಲಾಗಿದೆ.

ಇದಕ್ಕಿಂತ ಮಿಗಿಲಾದ ವಾಸ್ತವಿಕತೆ ಬೇರೇನಿದೆ? ಸ್ವಾತಂತ್ರ್ಯ ಗಳಿಸಿ ಅರ್ಧಶತಮಾನ ಕಳೆದರೂ ನಾವಿನ್ನೂ ಸಾಮ್ರಾಜ್ಯವಾದದ ನೆರಳಿನಲ್ಲೆ ಇದ್ದೆವು. ಈಗ ಕೊನೆಗೂ ಅದರಿಂದ ಹೊರಗೆ ಬಂದೆವು. ಒಂದು ಜನಾಂಗವಾಗಿ ನಾವು ಆತ್ಮ ವಿಶ್ವಾಸವನ್ನೇ ಕಳೆದುಕೊಂಡಿದ್ದೆವು. ಹಲವಾರು ವರ್ಷಗಟ್ಟಲೆ, ನಮಗೆ ಮಾರ್ಗ ದರ್ಶಕರಾಗಿ ಮತ್ತು ನಿರ್ವಾಹಕರಾಗಿಯೂ ಇರುತ್ತಿದ್ದವರು ಬಿಳಿಯರೇ. ನಮಗೆ ಅದು ರೂಢಿಯೇ ಆಗಿತ್ತು. ಇದೀಗ ನಾವು ಸ್ವಾವಲಂಬಿಗಳಾಗುತ್ತಿದ್ದೇವೆ. ಈ ವಿವರಗಳನ್ನು Common Cause ಎಂಬ ನಿಯತಕಾಲಿಕದ ವಿಶೇಷಾಂಕದಲ್ಲಿ ಹಿರಿಯ ಸಾಮಾಜಿಕ ಕಾರ್ಯಕರ್ತರಾಗಿರವ ಹೆಚ್. ಡಿ. ಶೌರಿ ಅವರು ತುಂಬಾ ಸೊಗಸಾಗಿ ತಿಳಿಸಿದ್ದಾರೆ. ಅವುಗಳನ್ನು ಓದುತ್ತಿದ್ದಾಗ, ನಾವು ಭಾರತೀಯರಾಗಿರುವುದೇ ಹೆಮ್ಮೆಯ ಸಂಗತಿ ಎಂದು ಯಾರಿಗೂ ಅನಿಸದೆ ಇರದು.

ನಿಜಕ್ಕೂ ಭಾರತದ ಬಗ್ಗೆ ಅಂತಹ ವಿಶೇಷತೆಗಳೇನಿವೆ? ಈ ಕೆಳಗಿನ ಸಂಗತಿಗಳನ್ನು ಗಮನಿಸಿ. ನಮ್ಮಲ್ಲಿ ಹದಿನೆಂಟು ಪ್ರಮುಖ ಭಾಷೆಗಳಿವೆ. ಜತೆಯಲ್ಲಿ ಇನ್ನೂ ೧೬೦೦ ರಷ್ಟು ಇತರ ಭಾಷೆಗಳು ಮತ್ತು ನುಡಿಗಳಿವೆ. ನಮ್ಮ ಸಮಾಜವು ೬೪೦೦ ರಷ್ಟು ಜಾತಿ ಮತ್ತು ಉಪಜಾತಿಗಳಲ್ಲಿ ಹಂಚಿಹೋಗಿದೆ. ನಮ್ಮ ೨೮ ರಾಜ್ಯಗಳಲ್ಲಿ ೫೨ ಪ್ರಮುಕವಾದಿ ಸಮುದಾಯಗಳು ಮತ್ತು ಜನಾಂಗೀಯ ಗುಂಪುಗಳಿವೆ. ಅಷ್ಟಾದರೂ ನಮ್ಮದು ಒಂದೇ ದೇಶವಾಗಿದೆ. ವಿಶ್ವದಲ್ಲೆ ಅತಿ ದೊಡ್ಡದಾದ ಕಾರ್ಯಗತ ಪ್ರಜಾ ಪ್ರಭುತ್ವ ನಮ್ಮದು. ಕಳೆದ ಚುನಾವಣೆಯಲ್ಲಿ ತಮ್ಮ ಪ್ರತಿನಿಧಿಗಳ ಆಯ್ಕೆಗಾಗಿ ೬೧.೯ ಕೋಟಿ ಮತದಾರರು ಪಾಲ್ಗೊಂಡರು. ಈ ಸಂಖ್ಯೆ ಅಮೆರಿಕದ ಸಂಯುಕ್ತ ರಾಜ್ಯಗಳ (U.S.A.) ಒಟ್ಟು ಜನಸಂಖ್ಯೆಯ ೨.೫ ಪಟ್ಟು ಅಷ್ಟಾಗುತ್ತದೆ.

ನಮ್ಮ ದೇಶದಲ್ಲಿ ವಿವಿಧ ಭಾಷೆಗಳಲ್ಲಿ ೫೦೦೦ ದೈನಿಕಗಳು, ೧೬,೦೦೦ ಸಾಪ್ತಾಹಿಕಗಳು ಮತ್ತು ೬೦೦೦ಕ್ಕಿಂತ ಹೆಚ್ಚು ಪಾಕ್ಷಿಕಗಳಿವೆ. ಇಲ್ಲಿರುವಷ್ಟು ವೈಚಾರಿಕ ಮತ್ತು ಕೃತಿ ಸ್ವಾತಂತ್ರ್ಯ ತಮಗೂ ಇದೆ ಎಂದು ಹೇಳುವಂತಹ ಸಾಹಸ ಮಾಡಬಹುದಾದ ದೇಶಗಳು ಹೆಚ್ಚಿಗೆ ಇರಲಾರವು.

ನಮ್ಮ ರೈಲ್ವೆ ವ್ಯವಸ್ಥೆ ೧,೦೦,೦೦೦ ಕಿ. ಮೀ. ವ್ಯಾಪಕ ವಾಗಿದ್ದು ತನ್ನ ೬೦೦ ನಿಲ್ದಾಣಗಳು ಮತ್ತು ೧೧,೦೦೦ದಷ್ಟು ಪ್ರಯಾಣಿಕ ಮತ್ತು ಗೂಡ್ಸ್ ರೈಲುಗಳಿಂದ ಕೂಡಿ ಪ್ರತಿನಿತ್ಯ ಹತ್ತು ಲಕ್ಷದಷ್ಟು ಪ್ರಯಾಣಿಕರನ್ನು ಹೊತ್ತು ಓಡುತ್ತಿವೆ. ಅಮೆರಿಕವನ್ನು ಹೊರತುಪಡಿಸಿದಲ್ಲಿ ನಮ್ಮ ಕಾಲೇಜ್‌ಗಳಿಂದ ಪ್ರತಿವರ್ಷ ಹೊರಬೀಳುವ ಪದವೀಧರರು ಪ್ರಪಂಚದ ಇನ್ನಾವ ದೇಶದಲ್ಲೂ ಇಲ್ಲ. ಈಗ ಭಾರತದಲ್ಲಿ ಪ್ರತಿವರ್ಷ ೬೫,೦೦೦ ದಷ್ಟು ಮಾಹಿತಿ ತಂತ್ರಜ್ಞಾನದ ಇಂಜಿನಿಯರ್‌ಗಳು ಮತ್ತು ಇಪ್ಪತ್ತು ಲಕ್ಷದಷ್ಟು ಇಂಗ್ಲಿಷ್ ಭಾಷಾಜ್ಞಾನವುಳ್ಳ ಪದವೀಧರರು ತಯಾರಾಗುತ್ತಿದ್ದಾರೆ. ಕೇವಲ ೪೫೦ ಮಿಲಿಯನ್ ಡಾಲರ್ ಗಳಷ್ಟು ಮಾತ್ರ ಆರ್ಥಿಕ ನೆರವು ಪಡೆದು ನಾವು ಸ್ವಪ್ರಯತ್ನ ದಿಂದಲೇ ಕ್ಷಿಪಣಿಗಳನ್ನು ಯೋಜಿಸಿ, ವಿಕಾಸಗೊಳಿಸಿ, ಪ್ರತ್ಯಕ್ಷ ರಚಿಸಿಯೂ ಸಹ ಉಡಾಯಿಸಿದ್ದೇವೆ. ಅವುಗಳ ಪೈಕಿ ೨೩ ಈಗಲೂ ಸಹ ಅಂತರಿಕ್ಷದಲ್ಲಿ ಸುತ್ತುತ್ತಲೇ ಇವೆ.

ಕಳೆದ ಐದು ವರ್ಷಗಳಲ್ಲಿ ನೂರರಷ್ಟು ಪ್ರಮುಖ ಯುರೋಪಿಯನ್ ಅಮೇರಿಕನ್ ಮತ್ತು ಜಪಾನಿ ಕಂಪೆನಿಗಳು ತಮ್ಮ ಸಂಶೋಧನಾ ರಚನಾ ಮತ್ತು ವಿಕಾಸ ಪ್ರಯೋಗಾಲಯ

2020 ರ ಇಸವಿಯಲ್ಲಿ ಗೌಡರು ಪ್ರಗತಿಯೊಂದಿಗೆ ಮುಖ್ಯವಾಹಿನಿಗೆ ಸೇರ್ಪಡೆಯಾಗಬೇಕು.

ಗಳನ್ನು ಭಾರತದಲ್ಲಿ ಸ್ಥಾಪಿಸಿವೆ. ವಿಶ್ವದಲ್ಲಿ ಮಧ್ಯಮ ಹಾಗೂ ಭಾರೀ ಗಾತ್ರದ ವಾಣಿಜ್ಯ ವಾನಹಗಳನ್ನು ತಯಾರಿಸುವುದರಲ್ಲಿ ನಾವು ಆರನೇ ದೊಡ್ಡ ದೇಶವೆನಿಸಿಕೊಂಡಿದ್ದೇವೆ. ನಮ್ಮ ದೇಶದ ಉದ್ದಗಲಕ್ಕೂ ಪ್ರತಿನಿತ್ಯ ೨೨ ಲಕ್ಷದಷ್ಟು ಬಸ್ ಮತ್ತು ಟ್ರಕ್‌ಗಳು ಓಡುತ್ತಿವೆ. ನಾವೀಗ ವಿಶ್ವದ ಆಟೋಮೊಬೈಲ್ ತಯಾರಕರ ಗುಂಪಿನಲ್ಲಿ ಸೇರಿದ್ದೇವೆ. ನಮ್ಮಲ್ಲಿ ತಯಾರಾಗಿರುವ ಕಾರ್‌ಗಳು ಈಗ ನಿಯಮಿತವಾಗಿ ಇಂಡೋನೇಷ್ಯಾ ಅಲ್ಜಿರಿಯಾ, ಬಾಂಗ್ಲಾದೇಶ, ಕೊಲಂಬಿಯಾ, ಬ್ರೆಜಿಲ್, ಶ್ರೀಲಂಕಾ, ಮ್ಯಾಕ್ಸಿಕೊ ಮತ್ತು ಚೀನಾಕ್ಕೂ ಸಹ ರವಾನೆಯಾಗುತ್ತಿವೆ. ವಿಶ್ವದ ಆಟೋಮೊಬೈಲ್ ತಯಾರಕರು ಈಗ ಭಾರತದ ಕಂಪೆನಿಗಳಿಂದ ತಮಗೆ ಬೇಕಾದ ಬಿಡಿ ಭಾಗಗಳನ್ನು ಖರೀದಿಸುತ್ತಿದ್ದಾರೆ. ಕಳೆದ ವರ್ಷ ಆ ರೀತಿಯಲ್ಲಿ ರಫ್ತಾಗಿರುವ ಆಟೋ ಬಿಡಿ ಭಾಗಗಳು ೫೭೫ ಮಿಲಿಯ ಡಾಲರ್‌ಗಳ ಬೆಲೆ ಬಾಳುವಷ್ಟು ಈ ವರ್ಷ ಅದು ೧.೫ ಬಿಲಿಯನ್ ಡಾಲರ್‌ಗಳ ಸಮೀಪದಲ್ಲಿದೆ. ಕೆಲವೇ ಸೈಕಲ್‌ಗಳ ತಯಾರಿಕೆಯಿಂದ ಆರಂಭವಾದ ಲೂಧಿಯಾನಾದ ಕಂಪೆನಿಯೊಂದು, ಈಗ ವಿಶ್ವದಲ್ಲೇ ಮೋಟಾರ್ ಬೈಕ್ ಉತ್ಪಾದನೆಯ ಅತಿದೊಡ್ಡ ಕಂಪೆನಿಯಾಗಿ ಬೆಳೆದು ನಿಂತಿದೆ. ಅದರ ವರ್ಷಾವಧಿ ಉತ್ಪಾದನೆ ೧೭ ಲಕ್ಷ ವಾಹನಗಳು.

ಔಷಧಿ ತಯಾರಿಕೆಯ ರಂಗಕ್ಕೆ ಬಂದಲ್ಲಿ ಈಗ ಅದು ೬.೫ ಬಿಲಿಯನ್ ಡಾಲರ್‌ಗಳಷ್ಟು ಇದ್ದು, ವರ್ಷದಿಂದ ವರ್ಷಕ್ಕೆ ಶೇ. ೮ ರಿಂದ ೧೦ ರಷ್ಟು ಬೆಳೆಯುತ್ತಿದೆ. ಗಾತ್ರದ ನಿಟ್ಟಿನಲ್ಲಿಹೇಳುವುದಾದಲ್ಲಿ ವಿಶ್ವದಲ್ಲಿ ನಾವು ನಾಲ್ಕನೇ ಅತಿ ದೊಡ್ಡ ತಯಾರಕರ ಸ್ಥಾನದಲ್ಲಿದ್ದೇವೆ. ನಮ್ಮ ವರ್ಷಾವಧಿ ಔಷಧಿಗಳ ರಫ್ತು ೨ ಬಿಲಿಯನ್ ಡಾಲರ್‌ಗಳನ್ನು ದಾಟಿದೆ. ಭಾರತವು ಸ್ವತಂತ್ರವಾದಾಗ ಇದು ಕನಸು ಮನಸಿನಲ್ಲೂ, ಆಕಲ್ಪನೀಯವಾಗಿತ್ತು.

ಸೂಪರ್ ಕಂಪ್ಯೂಟರ್‌ಗಳನ್ನು ಸ್ವತಃ ತಯಾರಿಸುವ ದೇಶಗಳ ಪೈಕಿ ಭಾರತವೀಗ ಮೂರನೆಯದು. ಅಮೆರಿಕ ಮತ್ತು ಜಪಾನ್ ಇವು ಇನ್ನೆರಡು ದೇಶಗಳಾಗಿವೆ. ನಾವು ತಯಾರಿಸುವ ಪರಮ ಸೂಪರ್ ಕಂಪ್ಯೂಟರ್‌ಗಳು ಅಮೆರಿಕದ ತಂತ್ರಜ್ಞರು ಸಹ ಅಸೂಯೆಪಡುವಷ್ಟು ಉತ್ಕೃಷ್ಟವೆನಿಸಿಕೊಂಡಿವೆ. ಅರುವತ್ತರ ದಶಕದಲ್ಲಿ ಆಹಾರ ಮತ್ತು ಆರ್ಥಿಕ ನೆರವಿಗಾಗಿ ಭಿಕ್ಷಾಪಾತ್ರೆ ಸಹಿತ ವಿಶ್ವದಾದ್ಯಂತ ಓಡಾಡುತ್ತಿದ್ದೆವು. ಈಗ ನಾವೇ ಅಂತರಾಷ್ಟ್ರೀಯ ವಿತ್ತ ಕೋಶಕ್ಕೆ (IMF) ೩೦೦ ಮಿಲಿಯ ಡಾಲರ್‌ಗಳ ಸಾಲ ನೀಡಿರುವುದಲ್ಲದೆ ೧೧ ಅಭಿವೃದ್ಧಿ ಶೀಲ ದೇಶಗಳಿಗೆ ಆರ್ಥಿಕ ಸಹಾಯ ಒದಗಿಸುತ್ತಿದ್ದೇವೆ. ಒಂದು ಕಾಲದಲ್ಲಿ ನಮ್ಮವರ ಹಸಿದ ಹೊಟ್ಟೆ ತುಂಬಿಸುವ ಸಲುವಾಗಿ ನಾವು ಗೋಧಿ ಅಮದು ಮಾಡುತ್ತಿದ್ದಲ್ಲಿ ಇಂದು ನಾವೇ ಆಹಾರ ಧಾನಗಳನ್ನು ರಫ್ತು ಮಾಡುತ್ತಿದ್ದೇವೆ ಹಾಗೂ ನಮ್ಮ ಉಗ್ರಾಹಣಗಳು ಈಗ ತುಂಬಿ ತುಳುಕುತ್ತಿವೆ. ಶಿಕ್ಷಣದ ಕ್ಷೇತ್ರದಲ್ಲಿ ೧೯೫೦-೫೧ರಲ್ಲಿ ನಮ್ಮಲ್ಲಿದ್ದ ೧೩,೫೯೬ ಉನ್ನತ ಪ್ರಾಥಮಿಕ ಶಾಲೆಗಳು ಈಗ ೧,೯೫,೦೦೦ ರಷ್ಟಾಗಿವೆ. ಹೈಯರ್ ಸೆಕೆಂಡರಿ ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳು ೧೯೫೦-೫೧ರಲ್ಲಿ ೭೪೧೬ ಇದ್ದಲ್ಲಿ ಈಗ ೨೦೦೩ ರಲ್ಲಿ ಅವು ೧,೦೭,೫೦೦ ಕ್ಕೆ ತಲಪಿವೆ. ನಮ್ಮ ಜನಸಂಖ್ಯೆ ಕಳೆದ ಐವತ್ತು ವರ್ಷಗಳಲ್ಲಿ ಮೂರು ಪಟ್ಟುಗಿಂತಲೂ ಹೆಚ್ಚಿರುವುದು ನಿಜವಾದರೂ, ಶಾಲಾ-ಕಾಲೇಜುಗಳ ಸ್ಥಾಪನೆಯಲ್ಲಿ ಭಾರತವು ತನ್ನದೇ ಈ ದಾಖಲೆಯನ್ನೂ ದಾಟಿ ಮುಂದೆ ಸಾಗಿದೆ. ಇವೆಲ್ಲದರ ನಡುವೆ ಸಂಪತ್ತು ಸಹ ಹೆಚ್ಚುತ್ತಲೇ ಇದೆ. ವಿಶ್ವ ಸಂಪತ್ತು ವರದಿ (World Wealth Report) ಯಂತೆ ಭಾರತದಲ್ಲಿ ಈಗ ಒಂದು ಮಿಲಿಯ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಸಂಪತ್ತುಳ್ಳ ವ್ಯಕ್ತಿಗಳು ೫೦,೦೦೦ ಕ್ಕಿಂತ ಹೆಚ್ಚು ಇದ್ದಾರೆ. ಇನ್ನೂ ವಿಶೇಷ ಹೇಳುವುದಾದಲ್ಲಿ ಅಮೆರಿಕಾವೊಂದರಲ್ಲೆ ಭಾರತ ಮೂಲದ ೨,೦೦,೦೦೦ ಮಂದಿ ಮಿಲಿಯಾಧಿಪತಿಯಾಗಿದ್ದಾರೆ. ಅದರರ್ಥ ಅಮೆರಿಕದಲ್ಲಿರುವ ಭಾರತೀಯರಲ್ಲಿ ಪ್ರತಿ ಒಂಭತ್ತರಲ್ಲಿ ಓರ್ವ ಮಿಲಿಯಾಧಿಪತಿಯಾಗಿದ್ದಾನೆ. ಇದನ್ನು ನಂಬುವುದು ಕಠಿಣವೆನಿಸುತ್ತದೆಯೇ? ಮಾಹಿತಿ ತಂತ್ರಜ್ಞಾನದ ರಂಗದಲ್ಲಿ ಭಾರತವು ಅತಿ ವೇಗವಾಗಿ ವೃಶ್ಚಿಕ ಶಕ್ತಿಯಾಗುವತ್ತ ಧಾವಿಸುತ್ತಿದೆ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ತಾಂತ್ರಿಕ ಕೌಶಲ್ಯ ಉತ್ಪಾದಿಸುವಂತಹ ಅತಿ ದೊಡ್ಡ ದೇಶಗಳಲ್ಲಿ ನಾವು ಒಂದಾಗಿದ್ದೇವೆ. ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿ, ಸಾಫ್ಟ್‌ವೇರ್ ವಿಭಾಗವೊಂದರಲ್ಲೇ ನಮ್ಮ ಆದಾಯವು ೧೯೮೮-೮೯ ರಲ್ಲಿ ೫೦ ಮಿಲಿಯನ್ ಡಾಲರ್‌ಗಳಿದ್ದುದು ಈಗ ಹದಿನೈದು ವರ್ಷಗಳಲ್ಲಿ ಹತ್ತು ಪಟ್ಟಿಗಿಂತಲೂ ಹೆಚ್ಚಿ ೬.೫ ಬಿಲಿಯನ್ ಡಾಲರ್‌ಗಳಷ್ಟಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ ಭಾರತವು ಮಾಹಿತಿ ತಂತ್ರಜ್ಞಾನದ ಬೃಹತ್ ಶಕ್ತಿಯಾಗಿ ಮೂಡಿ ಬರಲಿರುವುದು ಖಂಡಿತ. ಸಾಫ್ಟ್‌ವೇರ್ ಉದ್ಯಮದ ವರ್ಷಾವಧಿ ಬೆಳವಣಿಗೆಯ ವೇಗವೇ ಶೇ. ೫೦ ರಷ್ಟು. ಅದೊಂದು ವಿಶೇಷ ದಾಖಲೆಯೇ. ಒಂದು ಕಾಲದಲ್ಲಿ ಚೀನಾದ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಭಾರತಕ್ಕೆ ಭೀತಿಯಿತ್ತು. ಆದರೆ ಈಗ ಚೀನಾಕ್ಕೂ ಭಾರತವನ್ನು ಹಿಂದಿಕ್ಕಬಲ್ಲ ಸಾಮರ್ಥ್ಯವಿಲ್ಲ. ಭಾರತ ಮತ್ತು ಭಾರತೀಯರೆಲ್ಲರೂ ಈಗ ಆತ್ಮ ವಿಶ್ವಾಸ ಭರಿತರಾಗಿದ್ದಾರೆ. ಹದಿನಾರನೆ ಶತಮಾನದವರೆಗೆ ತನ್ನದಾಗಿದ್ದ ಸ್ಥಾನವನ್ನು ಪುನಃ ಗಳಿಸುವತ್ತ ಈಗ ಇನ್ನೊಮ್ಮೆ ಅವರು ಹೆಜ್ಜೆಯಿರಿಸುತ್ತಿದ್ದಾರೆ. ಈ ಪ್ರಗತಿಯೆಲ್ಲ ಹೆಚ್ಚಿನ ಸಾಧನೆಯಾದುದು ಕಳೆದ ಐದು ವರ್ಷಗಳಲ್ಲಿ, ಅಂದರೆ ರಾಪ್ರರಂ ಸರಕಾರದ ಆಳ್ವಿಕೆಯ ಈ ಕಾಲಾವಧಿಯಲ್ಲೆ. ಇನ್ನೂ ಹೇಳುವುದೇ ಆದಲ್ಲಿ, ಇದು ಸಹ ಈಗ ಆರಂಭ ಮಾತ್ರ.

ಜಗತ್ತಿನ ಯಾವುದೇ ಶಕ್ತಿ ಅಡ್ಡ ಬಂದರೂ, ಭಾರತವನ್ನೀಗ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬರಲಿರುವ ಹದಿನೈದು ವರ್ಷಗಳಲ್ಲಿ ಭಾರತವು ಸ್ವಸಾಮರ್ಥ್ಯದಿಂದ ಪರಮಶಕ್ತಿಯಾಗಿ ಅಲ್ಲದಿದ್ದಲ್ಲಿ, ಕನಿಷ್ಠ ಪಕ್ಷ ವಿಶ್ವದ ಒಂದು ಬೃಹತ್ ಶಕ್ತಿಯಾಗಿ ಮೈಕೊಡವಿ ನಿಂತಲ್ಲಿ ಆಶ್ಚರ್ಯ ಪಡಬೇಕಾದುದೇನೂ ಇಲ್ಲ. ಸಮಯ ಕಳೆದಂತೆ ಭಾರತವು ಇನ್ನಷ್ಟು ಉಜ್ವಲವಾಗಿ ಮಿನುಗಲಿದೆ. ಜಗತ್ತಿನ ಶಕ್ತಿಗಳೇ ಇದನ್ನು ಗಮನದಲ್ಲಿಡಿ. ಕೃಪೆ : ಎಂ.ವಿ. ಕಾಮತ್

ನಾಟಿ ಓಟದಲ್ಲಿ "ಎಲೆದ್ಕೆ" ಸಿಕ್ಕಿದರೂ ಪರವಾಗಿಲ್ಲ, ನಿಲ್ಲದೆ ಕರೆ ಹತ್ತಬೇಕು.

ಜನನ ಮತ್ತು ಮೃತ್ಯು

ಜನ್ಮಕ್ಕೆ ಕಾರಣ ಕರ್ಮ. ಧರ್ಮವೇ ಪ್ರಥಮ. ಪುರುಷಾರ್ಥ. ಮಾನವನಿಗೆ ಮಾನವತ್ವವೇ ಧರ್ಮ. ಇದು ನಮ್ಮ ಬದುಕಿನ ಗೂಡಾರ್ಥ. ಜನ್ಮ ವೆತ್ತಿದ ಮೇಲೆ ಜೀವಿಸಬೇಕು. ನಂತರ ಸಾಯಲೇ ಬೇಕು. ನಾವು ಒಳ್ಳೆಯದು ಅಲ್ಲ, ಕೆಟ್ಟದೂ ಅಲ್ಲ. ಪರಿಹಾರವಿಲ್ಲದ ಸಮಸ್ಯೆ ಅದನ್ನು ನಾವು ಸ್ವಾಗತಿಸ ಲೇಬೇಕು. ಜೀವನದಲ್ಲಿ ನಾವು ವಿಫಲರಾದವೆಂದು ಚಿಂತಿಸ ಲೇಬಾರದು. ಮುಂದೆ ನಾನೇನು ಮಾಡಬೇಕು ಎಂಬ ಯೋಚನೆ ಯಲ್ಲಿರಬೇಕು. ಯೋಚನೆಯೊಂದಿದ್ದರೆ ಸಾಲದು. ಯೋಚನೆಗೆ ಕಾರ್ಯವಿರಬೇಕು. ಕಾರ್ಯಕ್ಕೆ ಗುರಿ ಇರಬೇಕು. ಗುರಿಗೆ ಒಬ್ಬ ಗುರುಬೇಕು. ಜಗತ್ತಿಗೊಬ್ಬನೇ ಗುರು, ಅವನೇ ಪರಮಾತ್ಮ.

ದೇಹವೆಂಬುದು ಅಶಾಶ್ವತ. ಆತ್ಮ ಎಂಬುದು ಶಾಶ್ವತ, ಬಾಳಿ ಬದುಕಿ, ಬದುಕಿ ಬಳಲಿ, ಬೀಳಲಿರುವುದೇ ದೇಹ. ದೇಹ ಪರಿವರ್ತನೆಗೊಳ್ಳುತ್ತಿರುತ್ತದೆ. ಬಾಲ್ಯ, ಯೌವ್ವನ, ಮುಪ್ಪು, ಸಾವು, ಸಾಯುವುದು ಹುಟ್ಟಲಿಕ್ಕೆ, ಹುಟ್ಟುವುದು ಸಾಯಲಿಕ್ಕೆ. "ಪುನರಪಿ ಜನನಂ, ಪುನರಪಿ ಮರಣಂ" ಇದು ದೈವಾಧೀನ. ಸಾವು ಒಬ್ಬೊಬ್ಬರಿಗೆ ಒಂದೊಂದು ಅನುಭವ. ನನ್ನ ಬಾಲ್ಯ ಹಳ್ಳಿಯಲ್ಲಿ. ತುಂಬಿದ ಸಂಸಾರ. ಆಗ ನಾನೊಬ್ಬನೇ ಸಂಸಾರಕ್ಕೆ ಮಗು. ನನ್ನ ಅಜ್ಜನ ತಾಯಿ ನಾನು ಕರೆಯುತ್ತಿದ್ದುದು ಅಜ್ಜಿ ತಾಯಿ. ಸೊಂಟ ಬಗ್ಗಿ ಕೋಲೂರಿಕೊಂಡು ನಡಿಗೆ. ನನ್ನನ್ನು ಅಪ್ಪಿ ಹಿಡಿದು ಮುದ್ದಿಸುತ್ತಿದ್ದರು. ಅಜ್ಜಿ ಕೈಯಿಂದ ಎಲ್ಲಿ ಜಾರಿ ಬೀಳುತ್ತದೋ ಎಂಬ ಭಯ ನನ್ನ ತಾಯಿಗೆ. ಒಂದು ದಿನ ಅಜ್ಜಿ ತಾಯಿ ಸತ್ತುಹೋದಳು. ಕ್ರಿಯೆಗಳನ್ನು ನೋಡಿ ನಾನು ಕೇಳಿದೆ. ಅಜ್ಜಿ ತಾಯಿಗೇನಾಯಿತು. ಏಕೆ ಅಲಂಕಾರ? ನಿನ್ನ ಅಜ್ಜಿ ತಾಯಿಯನ್ನು ದೇವರು ಕರೆದುಕೊಂಡು ಹೋದರು ಎಂದು ಉತ್ತರ ಸಿಕ್ಕಿತು. ನಾನೇನೋ ಪ್ರಶ್ನೆ ಕೇಳಿದೆ. ಅದಕ್ಕೆ ಉತ್ತರವಾಗಿ ನನ್ನನ್ನು ಎಲ್ಲಿಗೋ ಕಳುಹಿಸಿ, ಅಜ್ಜಿ ತಾಯಿಯ ಉತ್ತರ ಕ್ರಿಯೆ ನೋಡದಂತಾಯಿತು. ಕೊಡವ ಭಾಷೆಯಲ್ಲಿ ತಾಯಿ ಎಂದರೆ ಅಜ್ಜಿ. ಅವ್ವಯ್ಯ ಎಂದರೆ ತಾಯಿ. ಅಜ್ಜಿ ತಾಯಿಯ ಮರಣದ ನಂತರ ಕೆಲವು ವರ್ಷಗಳಲ್ಲಿ ನನ್ನ ತಂದೆಯ ತಾಯಿ ಎಂದರೆ ನನ್ನ ಅಜ್ಜಿ ತೀರಿಕೊಂಡರು. ನನ್ನ ತಂದೆಯ ದುಃಖವನ್ನು ಕಂಡೆನು. ಹಳ್ಳಿಯ ಮನೆಯಲ್ಲಿ ನೆರೆದ ಜನಸ್ತೋಮ ಅಲ್ಲಿಯವರೆಗೆ ನಾನು ಕಂಡಿರಲಿಲ್ಲ. ಅದರಲ್ಲಿ ನಾನು ತಿಳಿದದ್ದು ಸತ್ತವರು ಬರುವುದಿಲ್ಲ. ಅಂತ್ಯ ಸಂಸ್ಕಾರ ಹೇಗಾಯಿತೆಂದು ತಿಳಿಯಲಿಲ್ಲ.

ಇದಾಗಿ ಕೆಲವು ವರ್ಷದಲ್ಲಿ ನನ್ನ ಮಾತೋಶ್ರೀಯವರ ಸಾವು. ಆಗ ನನಗೆ ಪ್ರಾಯ 11 ವರ್ಷ. ಹಾಸ್ಟಲ್‌ನಲ್ಲಿದ್ದರಿಂದ ನನ್ನ ತಾಯಿಯ ಸಾವು ಕಾಣಲೇ ಇಲ್ಲ. ಹಾಗಾಗಿ ಸಾವು ಎಂಬುದು ಮನುಷ್ಯರಿಗೆ ಬರಲೇಬಾರದು. ಸಾವಿಗೆ ದೇವರು ಕಾರಣವಾದರೆ, ಅಂತಾ ದೇವರು ಇರಲೇಬಾರದು ಎಂಬ ಭಾವನೆ ಬಂತು. ತಾಯಿಯ ಸಾವು ಮಕ್ಕಳಿಗೆ ತುಂಬಲಾಗದ ಹಾನಿ. ತಾಯಿಯನ್ನು ಕಳೆದುಕೊಂಡ ಮಕ್ಕಳು ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ನಂತರ ಕಂಡ ಸಾವು ನನ್ನ ಅಜ್ಜನದು (ಅಬ್ಬ ಎಂದು ಕರೆಯುತ್ತಿದ್ದೆ) ಅದನ್ನು ಪ್ರಾಣ ಹೋಗುವಲ್ಲಿಂದ ಮಣ್ಣು ಮಾಡುವವರೆಗೆ ನೋಡಿದೆ. ವಯಸ್ಸಾಗಿ ಅವರು ಪಟ್ಟ ಕಷ್ಟ ನೋಡುವಾಗ ತನ್ನ ಕೆಲಸವನ್ನು ತಾನು ಮಾಡಿಕೊಳ್ಳಲು ಆಗದವ ಸಾಯಲೇಬೇಕು ಎಂಬ ಸಿದ್ಧಾಂತಕ್ಕೆ ಬಂದೆ. ದೇವರು ಇರಬೇಕು. ಸಾವು ನೋಡಲೇಬೇಕು ಎಂದಾಯಿತು. ನಂತರ ಕಂಡ ಸಾವು ನನ್ನ ತಂದೆಯದು. ನನಗೆ ಮದುವೆಯಾಗಿ ನೌಕರಿಯಲ್ಲಿದ್ದವನು. ಈ ಸಾವಿನಿಂದ ಕಿರಿಯರು ಹಿರಿಯರಿಗೆ ಮಾಡಬೇಕಾದ ಕೃತಜ್ಞತೆ ಕರ್ತವ್ಯವನ್ನು ಕಲಿತೆ.ಇಷ್ಟೆಲ್ಲಾ ಆದ ಮೇಲೆ ನಾನುಕಂಡ ಸಾವು ನನ್ನ ಗೃಹಲಕ್ಷ್ಮಿಯದು. ಈ ಸಾವು ನನಗೆ ವೈರಾಗ್ಯವನ್ನು ಕಲಿಸಿತು. ಎಲ್ಲಾ ಸಾವಿಗಿಂತಲೂ ಅಘಾತವಾದದ್ದು ನನ್ನ ತಾಯಿಯ ಮತ್ತು ಗೃಹಲಕ್ಷ್ಮಿಯ ಸಾವು. ಗೃಹ ಲಕ್ಷ್ಮಿಯನ್ನೇ ಕಳಕೊಂಡ ಮೇಲೆ ಜೀವನ ಏತಕ್ಕೆ? ನನ್ನ ಗೃಹಲಕ್ಷ್ಮಿ (ಹೆಂಡತಿ) ಸುಮಂಗಲಿಯಾಗಿ ಸತ್ತದ್ದು ನನಗೆ ಸ್ವಲ್ಪ ನೆಮ್ಮದಿ. ಪ್ರತಿಯೊಂದು ಸಾವು ನಮಗೆ ಒಂದೊಂದು ಪಾಠ ಕಲಿಸುತ್ತದೆ. ಆದ್ದರಿಂದ ನಾವು ಜೀವಂತವಾಗಿರುವಾಗ ಮದುವೆಗಳಿಗೆ ಹೋಗದಿದ್ದರೂ ಪರವಾಗಿಲ್ಲ. ಸಾವಿಗೆ ಖಂಡಿತಾ ಹೋಗಬೇಕು. ಸ್ವಂತವೇ ಇರಲಿ, ನೆಂಟರೇ ಇರಲಿ ಸಾವಿಗೆ ಹೋಗಬೇಕು. ಸಾವು ದೇವರು ಕೊಟ್ಟ ಒಂದು ವರ. ಸಾವು ಮಾನವನ ಸಂಕಟಹರಣ. ಸಾವು ನಮ್ಮ ಜನ್ಮ ಸಿದ್ಧ ಹಕ್ಕು. ಒಬ್ಬೊಬ್ಬರಿಗೆ ಸಾವು ಬಯಸಿದ ಕೊಡುಗೆ, ಜೀವನದಲ್ಲಿ ಬಳಲಿ ಬೆಂಡಾದವರಿಗೆ ಪರಿಹಾರ. ಹಿಂಸೆಗೊಳಪಟ್ಟವರಿಗೆ ಆಶ್ರಯದಾತ. ಮೂರ್ಖರಿಗೆ ಒಂದು ಪಾಠ. ಭೋಗವಿಲಾಸಿಗೆ ಅದರುವಿಕೆ. ಯಾತ್ರಾರ್ಥಿಗೆ ಮೈಲುಗಲ್ಲು. ಹೇಡಿಗೆ ಒಂದು ಶಿಕ್ಷೆ. ಸ್ವಾಮಿ ನಿಷ್ಠೆಯವರಿಗೆ ಸ್ವರ್ಗ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ವಿಧದಲ್ಲಿ ಪರಿಹಾರ, ಸಾವಿನಿಂದ ದೊರಕುತ್ತದೆ.

ಗುಲಾಮಗಿರಿಯಲ್ಲಿ ಬಾಳಿದವರಲ್ಲಿ ಕಂಡು ಬರುವ ವಿಶಿಷ್ಠ ಚಟ ಯಾವುದೆಂದರೆ ತಮಗಿಂತ ಮೇಲಿನವರಲ್ಲಿ ದೈನ್ಯ;ತಮಗಿಂತ ಕೆಳಗಿನವರಲ್ಲಿ ದರ್ಪ. ನಾವು ನಮ್ಮ ಇಂದ್ರಿಯಗಳ ಗುಲಾಮರಾಗಬಾರದು. ದೇವರಲ್ಲಿ ದೈನ್ಯಭಾವನೆಯಿಂದಿರಬೇಕು. ಇದಕ್ಕೆ ದಾರಿ?ದಾರಿ...ಪ್ರೀತಿ ಒಂದೇ. ನಾವು ಬದುಕಬೇಕು. ನಾಶವಾಗಬಾರದು. ತಿಳಿದುಕೊಳ್ಳಬೇಕು, ಅಜ್ಞಾನಿಯಾಗಬಾರದು. ಆನಂದಿಸಬೇಕು, ದುಃಖಿಸಬಾರದು. ಇದೇ ನಮ್ಮ ಜೀವನದ ಆಸೆ. ಜೀವನದಲ್ಲಿ ಶತ್ರುಗಳು ಮಿತ್ರರು ಇದ್ದೇ ಇರುತ್ತಾರೆ. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ ನಮಗೆ ಶತ್ರುಗಳು. ವಿಶ್ವಾಸ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮ ನಮ್ಮ ಮಿತ್ರರು. ಇದಕ್ಕೆಲ್ಲಾ ಆತ್ಮವಿಶ್ವಾಸ ಮುಖ್ಯ. ಆತ್ಮಹತ್ಯೆ ಸಾವಲ್ಲ. ಅದೊಂದು ಶಿಕ್ಷೆ. ಪರಮಾತ್ಮ ಸರ್ವ ಚಿಂತೆ ನಿವಾರಿಣಿ. ಆದ್ದರಿಂದ ಸಾವಿಗೆ

8 ನೇ ಪುಟಕ್ಕೆ

ಕುಶಾಲನಗರ ಗೌಡ ಬಂಧುಗಳಿಂದ ಅದ್ದೂರಿಯ ಸಂತೋಷ ಕೂಟ.

28-12-2003 ರ ಭಾನುವಾರ ಕುಶಾಲನಗರ ಪಟ್ಟಣ ಮಿತಿಯ ಗೌಡ ಸಮುದಾಯದವರು ಕೈಲ್ ಮುಹೂರ್ತ ಮತ್ತು ಹುತ್ತರಿ ಪ್ರಯುಕ್ತ ಪ್ರತಿವರ್ಷಆಚರಿಸುವಂತೆ ಈ ವರ್ಷವು ಬಹಳ ಅದ್ದೂರಿಯಿಂದ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೋರನ ಪೂಣಚ್ಚನವರು ಅಲಂಕರಿಸಿದ್ದು, ದೀಪ ಬೆಳಗುವುದರೊಂದಿಗೆ ಕುದುಪಜೆ ಡಾ. ಮನೋಜ್ ಬೋಜಪ್ಪ (ಅಮೆರಿಕಾ) ಸಮಾರಂಭವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ತೆಕ್ಕಡ ವಿಜಯಕುಮಾರ್, ಕೇಚಪ್ಪನ ಶ್ರೀ ಮೋಹನ್ ಅಲಂಕಳಿಯನ ಶ್ರೀಮತಿ ಉಮಾದೇವಿ ಮತ್ತು ವೇದಿಕೆಯಲ್ಲಿ ಕಾರ್ಯದರ್ಶಿ ಕೊಡಗನ ರಮೇಶರವರು ಉಪಸ್ಥಿತರಿದ್ದರು.

ಕು. ಸೂದನ ಮಾನಸ ಪೂಣಚ್ಚರವರ ಪ್ರಾರ್ಥನೆ ಮತ್ತು ಪೊನ್ನಚ್ಚನ ಮೋಹನ್‌ರವರ ಸ್ವಾಗತ ಭಾಷಣದೊಂದಿಗೆ ಆರಂಭಗೊಂಡ ಸಮಾರಂಭದಲ್ಲಿ ಗೌಡ ಸಮಾಜದ ಕಾರ್ಯದರ್ಶಿ ಕೊಡಗನ ರಮೇಶರವರು ಪ್ರಾಸ್ತವಿಕ ಭಾಷಣ ಮಾಡಿದರು.

ಸನ್ಮಾನ : ಕೋರನ ಪೂಣಚ್ಚ, ಕುದುಪಜೆ ಶ್ರೀಮತಿ ಶಾಂತಿ ಬೋಜಪ್ಪ, ಕುಲ್ಲಚೆಟ್ಟೀರ ಗಂಗಮ್ಮ ಮುತ್ತಣ್ಣ, ಕಾನೆಹಿತ್ಲು ನಂಜಪ್ಪ, ಪೊನ್ನೆಟ್ಟಿ ಶ್ರೀಮತಿ ಅಕ್ಕಮ್ಮ ಇವರುಗಳನ್ನು ಸಂಘದ ವತಿಯಿಂದ ಶಾಲು ಹೊದಿಸಿ ಫಲ ತಾಂಬೂಲಗಳೊಂದಿಗೆ ಸನ್ಮಾನಿಸಲಾಯಿತು.

ಅಧ್ಯಕ್ಷರ ಭಾಷಣ : ಗೌಡ ಸಮಾಜದ ಅಧ್ಯಕ್ಷ ಶ್ರೀ ಕೋರನ ಪೂಣಚ್ಚನವರು ಮಾತನಾಡುತ್ತಾ ನಮ್ಮಗೌಡ ಜನಾಂಗವು ಎಲ್ಲರೊಡನೆ ಪಕ್ಷಬೇಧವಿಲ್ಲದೆ ಎಲ್ಲಾ ಕಾರ್ಯಕ್ರಮಗಳಲ್ಲಿ ಒಗ್ಗಟ್ಟಿನಿಂದ ಭಾಗವಹಿಸಿಕೊಂಡು, ಬಾಂಧವ್ಯವನ್ನು ಉಳಿಸಿಕೊಂಡು, ರಾಜಕೀಯವಿಲ್ಲದೆ ಸಹಬಾಳ್ವೆ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡು ಬರಬೇಕು. ಸಂಸಾರ ಮತ್ತು ಸಮಾಜದಲ್ಲಿ ಹೆಂಗಸರ ಪಾತ್ರ ಮುಖ್ಯವಾದದು. ಮನೆಯ ಸಣ್ಣ ಮಕ್ಕಳಿಂದ ಹಿಡಿದು ಕೆಲವು ಜವಾಬ್ದಾರಿಗಳಿಗೆ ಹೆಂಗಸರು ಕಾರಣ. ಅವರಿಂದಲೇ ಅದರ ಫಲಿತಾಂಶ ಹೊರ ಬರುವುದು. ತಾನು ಈವರೆಗೆ ಮನಪೂರ್ವಕವಾಗಿ ಸಮಾಜದಲ್ಲಿ ಕೆಲಸ ಮಾಡಿದ್ದೇನೆ. ಮುಂದೆಯೂ ಅಭಿವೃದ್ಧಿಯ ಬಗ್ಗೆ ಶ್ರಮಿಸುತ್ತೇನೆ ಎಂದು ಆಶ್ವಾಸನೆಯಿತ್ತರು.

ತಮಗೆ ಸಿಕ್ಕಿದ ಅವಕಾಶದಲ್ಲಿ ಪಟ್ಟಡ ಪ್ರಭಾಕರರವರು ಕೊಡಗು ಸಂಗಾತಿ ನಡೆದು ಬಂದ ದಾರಿ, ಬರಹಗಾರರ ಅವಶ್ಯಕತೆ, ಜನಾಂಗದ ಏಳಿಗೆಯ ಬಗ್ಗೆ, ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಸಂಶೋಧನೆಯ ಅವಶ್ಯಕತೆ, ಪತ್ರಿಕೋದ್ಯಮದ ಅನುಭವ, ಕುರುಂಜಿ ವೆಂಕಟ್ರಮಣಗೌಡರ 75ನೇ ಜನ್ಮೋತ್ಸವದ ಕುರಿತು ಮತ್ತು ಮುಂದಿನ ಅಭಿವೃದ್ಧಿಯ ಬಗ್ಗೆ ಬಹು ಚುಟುಕ್ಕಾಗಿ ಮಾತನಾಡಿದರು.

ಮಧ್ಯಾಹ್ನ ಸಾಮೂಹಿಕ ಭೋಜನದ ನಂತರ ಅಂದಾಜು 1000 ಕ್ಕೂ ಹೆಚ್ಚು ಜನ ಸಮೂಹವಿದ್ದ ಈ ಸುಂದರ ಸಮಾರಂಭದಲ್ಲಿ ಸಂಗೀತ, ನೃತ್ಯ, ವಿವಿಧ ವಿನೋದಾವಳಿಗಳ ಉತ್ತಮ ಪ್ರದರ್ಶನಗಳನ್ನು ಪ್ರದರ್ಶಿಸಲಾಯಿತು ಮತ್ತು 3 ದಿವಸದಿಂದ ಆಚರಿಸಲಾದ ಚಟುವಟಿಕೆಗಳಾದ, ಆಟೋಟ ಸ್ಪರ್ಧೆ, ರಂಗೋಲಿ, ಆದರ್ಶ ದಂಪತಿಗಳ ಅಂತಾಕ್ಷರಿ, ಕೇರಂ, ಕಾರ್ಡ್ ಹೀಗೆ ಹತ್ತು ಹಲವಾರು ಸ್ಪರ್ಧೆಗಳ ವಿಜೇತರಿಗೆ ಮುಖ್ಯ ಅತಿಥಿ ಕುದುಪಜೆ ಶ್ರೀ ಮನೋಜ್ ಬೋಜಪ್ಪನವರು ಬಹುಮಾನ ವಿತರಣೆ ಮಾಡಿದರು.

ವರ್ಷದಿಂದ ವರ್ಷಕ್ಕೆ ಚಟುವಟಿಕೆ ಕಾರ್ಯಕ್ರಮಗಳಲ್ಲಿ ತುಂಬಾ ಮುಂದುವರಿದ ಬೇರೆ ಬದಲಾವಣೆಗಳು ಕಂಡು ಬರುತ್ತಿದ್ದು ಇನ್ನೂ ಆಕರ್ಷಣೀಯವಾಗಿ ನಡೆಸುವಂತೆ ಅಧ್ಯಕ್ಷ ಕೋರನ ಪೂಣಚ್ಚ, ಕಾರ್ಯದರ್ಶಿಕೊಡಗನ ಶ್ರೀ ರಮೇಶ್, ಯುವಕ ಸಂಘದ ಅಧ್ಯಕ್ಷ ಪೊನ್ನಚ್ಚನ ಮೋಹನ್, ಮಹಿಳಾ ಘಟಕದ ಅಧ್ಯಕ್ಷೆ ಕುದುಪಜೆ ಶ್ರೀಮತಿ ಶಾಂತಿ ಬೋಜಪ್ಪ ಮನಪೂರ್ವಕವಾದ ಮನವಿಯ ಭರವಸೆಗಳನ್ನಿತ್ತರು.

ಪೊನ್ನಚನ ಶ್ರೀ ಮೋಹನ್ ಮತ್ತು ಶ್ರೀಮತಿ ಕವಿತಾ ಮೋಹನ್‌ರವರ ಸ್ವಾರಸ್ಯಕರವಾದ ನಿರೂಪಣೆಯೊದಿಗೆ ಕೊಡಗನ ಶ್ರೀ ರಮೇಶ್‌ರವರು ವಂದನಾರ್ಪಣೆ ಮಾಡಿದರು.

ವರದಿ : ಪತ್ರಕರ್ತ ಕುದುಪಜೆ ಬಸಪ್ಪ

---

7 ನೇ ಪುಟದಿಂದ


ಅಂಜಬಾರದು. ಭಗವಂತನ ಚಿಂತನೆಯಿಂದ ಸ್ವಾಗತಿಸಬೇಕು. ಅದೇ ಮುಕ್ತಿ.

ನಾವು ಸತ್ತವರಿಗಾಗಿ ದುಃಖಿಸುತ್ತೇವೆ, ಅಳುತ್ತೇವೆ ಯಾತಕ್ಕಾಗಿ? ಸತ್ತವರಿಗಾಗಿ ಅಳುವವರೇ ಇಲ್ಲ. ನಮಗೆ ದುಃಖ, ಅಳು ಬರುವುದಕ್ಕೆ ಕಾರಣ ಸತ್ತವರ ದೇಹ ಇನ್ನು ಕಾಣುವುದಿಲ್ಲ. ಅವರಿಂದ ನಮಗಾಗುವ ಪ್ರಯೋಜನ ಇನ್ನಿಲ್ಲದಾಗುವುದಲ್ಲಾ ಎಂಬ ಪ್ರಾಪಂಚಿಕ ಚಿಂತನೆ ನಮ್ಮನ್ನು ಆವರಿಸುವುದು. ತಿಳುವಳಿಕೆಯಲ್ಲಿ ನಾವು ಕಳೆದುಕೊಂಡು ಬಿಟ್ಟಿರುವ ಜ್ಞಾನ ಎಲ್ಲಿದೆ? ಮಾಹಿತಿಯಲ್ಲಿ ನಾವು ಕಳೆದುಕೊಂಡಿರುವ ತಿಳುವಳಿಕೆ ಎಲ್ಲಿದೆ? ಅದು ಭಗವಂತನಲ್ಲಿದೆ. ಆದ್ದರಿಂದ ನಾವು ನಮ್ಮ ಕೈಲಾದಷ್ಟು ಸಮಾಜಕ್ಕೆ ಒಳಿತುಮಾಡಿ, ದೈವ ಚಿಂತನೆಯಿಂದ ಸಾವನ್ನು ಸ್ವಾಗತಿಸಬೇಕಲ್ಲದೆ, ಸಾವಿಗಾಗಿ ಅಂಜಬಾರದು. ಅದು ಹೇಡಿಯ ಲಕ್ಷಣ.

-ಚೇಂದ್ರಿಮಾಡ ಗ. ಮುತ್ತಪ್ಪ.

ವಿ.ಸೂ. ಕೊಡಗು ಸಂಗಾತಿ ಇಲ್ಲಿ ತನಕ ಪ್ರಕಟಿಸಿದ ಲೇಖನಗಳಲ್ಲಿ ಇದೇ ಅತ್ಯುತ್ತಮವಾದದ್ದು. - ಸಂಗಾತಿ

ಜೀರ್ಣೋದ್ಧಾರಕ್ಕಾಗಿ ಕಾಯುತ್ತಿರುವ ಹಿನ್‌ಕಲ್‌ನ ನನ್ನೇಶ್ವರ ದೇವಾಲಯ



ಪ್ರಾಚೀನ ದೇವಸ್ಥಾನಗಳ ಬೀಡು ನಮ್ಮ ಭಾರತ. ದೇಶದಲ್ಲಿ ನಾನಾ ಕಡೆ ಪ್ರಾಚೀನ ದೇವಸ್ಥಾನಗಳು ಕಂಡು ಬರುತ್ತದೆ. ಹಾಗೇ ಯಾವುದೇ ಸ್ಥಳ ಪುರಾಣವಿರದೆ, ಯಾವುದೇ ಒಂದು ಪ್ರದೇಶಗಳು ಕಂಡುಬರುವುದಿಲ್ಲ. ಒಂದೊಂದು ಹಳ್ಳಿಯು ತನ್ನ ಗತಕಾಲದ ಪುರಾಣಗಳನ್ನು ಬಿಚ್ಚಿಡುತ್ತದೆ. ರಾಜಾದಿ ರಾಜರುಗಳು ತಮ್ಮ ಹೆಸರಿನಲ್ಲಿ ಅವರ ಆರಾಧ್ಯದೈವಗಳ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು. ಚೋಳ ಸಾಮ್ರಾಜ್ಯದ ರಾಜರುಗಳ ವಿಶೇಷವೆಂದರೆ ಅವರು ಹೋದ ಹಳ್ಳಿಗಳಲ್ಲಿ ಒಂದು ರಾತ್ರಿಯಿಂದ ಬೆಳಗಿನ ಜಾವದವರೆಗೆ ಆಗುವಷ್ಟು ದೇವಸ್ಥಾನದ ಕಟ್ಟಡ ಕಾರ್ಯವನ್ನು ಮಾಡಿ ಕೋಳಿ ಕೂಗುತ್ತಿದ್ದ ಹಾಗೆ ಅಲ್ಲಿಂದ ಹೊರಡುತ್ತಿದ್ದರು. ಚೋಳರ ನಿರ್ದಶನವಾಗಿ ಒಂದು ರಾತ್ರಿಯಲ್ಲಿ ಕಟ್ಟಲ್ಪಟ್ಟಿರುವ ದೇವಸ್ಥಾನವು ನಮ್ಮ ಮೈಸೂರು ನಗರದ ಹಿನಕಲ್ ಗ್ರಾಮದಲ್ಲಿ ಅಂತಹ ಒಂದು ದೇವಸ್ಥಾನವನ್ನು ಕಾಣಬಹುದು. ದೇವಸ್ಥಾನದ ಅಕ್ಕ ಪಕ್ಕ ಇರುವ ಮನೆಗಳಲ್ಲಿ ಹೆಚ್ಚು ಈಗ ಲಿಂಗಾಯಿತ ಜನಾಂಗದವರು ಇದ್ದಾರೆ. ಅವರ ಮನೆ ದೇವರು ಶಿವ. ಲಿಂಗಾಯಿತ ಜನರು ಶಿವನನ್ನು ಪೂಜಿಸುವುದರಿಂದ ಆ ದೇವಸ್ಥಾನಕ್ಕೆ ಶಿವನ ಹೆಸರಾದ "ನನ್ನೇಶ್ವರ" ದೇವಸ್ಥಾನವೆಂದು ಕರೆಯಲ್ಪಟ್ಟಿದೆ.

ಈ ದೇವಾಲಯವು ಸುಮಾರಾಗಿ 80x100ಅಡಿಗಳ ವೀಸ್ತೀರ್ಣವಾಗಿದ್ದು, ಮುಖ ಮಂಟಪ, ಗರ್ಭಗುಡಿಗಳನ್ನು ಒಳಗೊಂಡಿದ್ದು ದೇವಾಲಯದ ಒಳಭಾಗದಲ್ಲಿ ಮೂರು ನಾಲ್ಕು ಕಲ್ಲಿನ ಕಂಬಗಳಿವೆ. ದೇವಸ್ಥಾನ ನೋಡಲೂ ಚಿಕ್ಕದಾಗಿ ಕಂಡರೂ ಸಹ ಒಂದೇ ಪೀಠದ ಮೇಲೆ ಶಿವಲಿಂಗವಿದೆ. ಅಪ್ಪ ಇದ್ದ ಜಾಗದಲ್ಲಿ ಮಗ ಇರಬೇಕಲ್ಲವೇ. ಕಲ್ಲಿನ ಗಣಪತಿಯ ದೊಡ್ಡ ಮೂರ್ತಿ ಸಹ ಇದೆ. ದೇವಸ್ಥಾನದ ಮೇಲ್ಭಾಗದಲ್ಲಿ ನಂದಿಯ ಮೂರ್ತಿ ಇದೆ. ಮುಂದೆ ಸ್ವಲ್ಪ ಮೈದಾನವಿದೆ. ಸುತ್ತ ಅರ್ಧ ಕಾಂಪೌಂಡ್ ಇದೆ. ಕಡಿಯುವ ದೊಡ್ಡ ಕಲ್ಲಿನಲ್ಲಿ ಶಿಲಾ ಶಾಸನವೊಂದಿದೆ. ಬಾವಿ ಇದೆ, ಪ್ರಾಂಗಣ ತುಂಬಾ ಚೆನ್ನಾಗಿದೆ. ನಾಲ್ಕು ಮೂಲೆಗಳಲ್ಲೂ ದೊಡ್ಡ ದೊಡ್ಡ ಕೋಣೆಗಳಿವೆ. ಪೂರ್ತಿ ಆಗದಿರಲು ಚೋಳರು ಅರ್ಧ ಕಟ್ಟಿ ಮುಗಿಸುವ ಹೊತ್ತಿಗೆ ಬೆಳಗಾದ ಕಾರಣ ಅರ್ಧದಲ್ಲಿಯೆ ನಿಂತಿದ್ದೆ. ಆ ಕೆಲಸವನ್ನು ಇಂದಿಗೂ ಪೂರ್ತಿ ಮಾಡಲು ಯಾರು ಮುಂದೆ ಬಂದಿರುವುದಿಲ್ಲ.

"ಕಾರ್ತಿಕ ಮಾಸದಲ್ಲಿ" ಇಲ್ಲಿ ವಿಶೇಷವಾದ ಪೂಜೆ ಪುರಸ್ಕಾರಗಳು ಬಹಳ ವೈಭವದಿಂದ ನೆರವೇರುತ್ತದೆ. ವಾರದಲ್ಲಿ ಒಂದೊಂದು ದೇವರ ಪೂಜೆ ಒಂದೊಂದು ದಿನ ಪೂಜಿಸುವಂತೆ ಸೋಮವಾರ ಶಿವನನ್ನು ಪೂಜಿಸುತ್ತಾರೆ. ನಾಲ್ಕು ಅಥವಾ ಐದು ವಾರಗಳಲ್ಲಿ ಸೋಮವಾರ ಮಾತ್ರ ಕಾರ್ತಿಕ ಮಾಸದಲ್ಲಿ ಉತ್ಸವ ನಡೆಯುತ್ತದೆ. ನೆನಸಿದ ಕಾರ್ಯಗಳು ಕೈಗೊಳ್ಳುತ್ತದೆ ಎಂಬ ನಂಬಿಕೆ ಜನರಲ್ಲಿ ಇದ್ದು, ಅದೇ ರೀತಿ ಕಾರ್ಯಗಳು ನೆರವೇರಿದರೆ ಉತ್ಸವ ನಡೆಸುತ್ತೇವೆ ಎಂದು ದೇವರಲ್ಲಿ ಹರಕೆ ಹೊತ್ತು ಹರಕೆ ನೆರವೇರಿಸುತ್ತಾರೆ. ಉತ್ಸವದಂದು ಶಿವನು ವಿದ್ಯುತ್ ದೀಪಾಲಂಕಾರದಿಂದ, ಹೂವಿನ ಹಾರಗಳಿಂದ ಅಲಂಕೃತಗೊಂಡ ಶಿವನನ್ನು ನೋಡಿದಷ್ಟು ಇನ್ನೂ ನೋಡುವ ಚೆಲುವನು ಚೆಲ್ಲುತ್ತದೆ. ನೂರಾರು ಭಕ್ತರುಗಳು ಭಕ್ತಿಭಾವದಿಂದ ದೇವರ ಸೇವೆಯಲ್ಲಿ ತಲ್ಲಿನರಾಗುತ್ತಾರೆ.

ಶಿವರಾತ್ರಿಯಂದು ದೊಡ್ಡ ಜಾತ್ರೆಯೆ ನಡೆಯುತ್ತದೆ. ದೇವರ ತೇರನ್ನು ಹೊತ್ತು ರಾತ್ರೆಯೆಲ್ಲಾ ಮೆರವಣಿಗೆ ನಡೆಯುತ್ತದೆ. ಶಿವನ ಭಕ್ತರುಗಳು ದೂರ ಪ್ರಯಾಣ ಮಾಡುವಾಗ ಇಲ್ಲವೇ ದೂರದ ದೇವಸ್ಥಾನಗಳಿಗೆ ಹೋಗುವ ಮುನ್ನ ಈ ದೇವಸ್ಥಾನದಲ್ಲಿ ಮೊದಲು ಪೂಜೆ ಸಲ್ಲಿಸಿ ಮುಂದಿನ ಕಾರ್ಯವನ್ನು ಮಾಡುತ್ತಾರೆ. ಬೇರೆ ಬೇರೆ ಊರುಗಳಿಂದಲೂ ಜನರು ಬರುತ್ತಾರೆ. ಇಲ್ಲಿ ಮೂರು ಹುತ್ತಗಳಿವೆ "ಶ್ರೀ ಸುಬ್ರಹ್ಮಣ್ಯ ಷೃಷ್ಠಿ'ಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ವಯಸ್ಸಾದವರು ಎಲ್ಲರೂ ಹುತ್ತಕ್ಕೆ ಹಾಲು ಹೊಯ್ದು ತಮ್ಮಲ್ಲಿರುವ ಸರ್ಪ ದೋಷಗಳು, ಕಪ್ಪು ಕಲೆಗಳನ್ನು ನಿವಾರಿಸಲು ಭಕ್ತಿಯಿಂದ ಬೇಡುವರು. ಈ ದೇವಸ್ಥಾನದ ಪಕ್ಕದಲ್ಲಿ ಒಂದು ದೇವರ ಕೆರೆಯಿದೆ. ಅಲ್ಲಿ ಗಣಪತಿ ಹಬ್ಬದಲ್ಲಿ ಗಣಪತಿಯನು ಆ ಕೆರೆಯಲ್ಲಿ ಬಿಡುವರು. ಈ ದೇವಸ್ಥಾನದಲ್ಲಿ ಐದು ತಲೆಯ ಸರ್ಪವಿದೆ ಎಂದು ಹೇಳುತ್ತಾರೆ. ಆದರೆ ಅದನ್ನು ಕಂಡವರಿಗೆ ಗೊತ್ತು. ಸ್ವಲ್ಪ ಪಕ್ಕದಲ್ಲಿಯೇ ಅರಳಿಮರವಿದೆ. ಅರಳಿಮರವನ್ನು ಬೆಳಗಿನ ಜಾವದಲ್ಲಿ ತಣ್ಣೀರಿನಿಂದ ಸ್ನಾನ ಮಾಡಿ ಅರಳಿ ಮರ ಸುತ್ತುತ್ತಾರೆ ಹೀಗೆ ಮಾಡಿದರೆ ತಾನು ಇಷ್ಟ ಪಟ್ಟ ವರನೊಂದಿಗೆ ಶೀಘ್ರ ವಿವಾಹವಾಗುತ್ತದೆ ಎಂಬ ನಂಬಿಕೆ ಜನರಲ್ಲಿ . ಆದ್ದರಿಂದ ಧನುರ್ಮಾಸದಲ್ಲಿ ಹೆಂಗಳೆಯರು ಸಂಭ್ರಮದಿಂದ ಅರಳಿ ಮರ ಸುತ್ತುತ್ತಿರುವುದನ್ನು ನಾವು ಕಾಣಬಹುದಾಗಿದೆ. ಕಾಂಪೌಂಡಿನ ಒಳಗೆ ಇರುವ ಮೈದಾನದಲ್ಲಿ ಜನರುಗಳು ಸೇರಿ ಒಂದು ಬಾವಿಯನು ತೆಗೆಸಿದ್ದಾರೆ. ಈ ಬಾವಿಯ ನೀರಿನಿಂದ ನಿತ್ಯ ಶಿವಲಿಂಗಕ್ಕೆ ಅಭಿಷೇಕ ನೆರವೇರುತ್ತದೆ. ಶಿವ ದಯೆಯಿಂದ ಅಂದಿನಿಂದ ಇಂದಿನವರೆಗೂ ಭಕ್ತರ ಸಂಕಷ್ಟಗಳನ್ನು ಪರಿಹರಿಸುತ್ತಾ ಅವರ ಇಷ್ಟಾರ್ಥಗಳನ್ನು ನೆರವೇರಿಸುತ್ತಿದೆ. ಗತಕಾಲದ ದೇವಸ್ಥಾನವಾದರು ಸುಣ್ಣ ಬಣ್ಣಗಳನ್ನು ಹಬ್ಬಗಳಲ್ಲಿ ಹೊಡೆಯುತ್ತಾರೆ ಹೊರತು, ಇನ್ನು ಯಾವುದೇ ದುರಸ್ಥಿ ಮಾಡಿಲ್ಲ. ಆದರೂ ದೇವಸ್ಥಾನ ಇತ್ತೀಚಿನ ವರ್ಷಗಳಲ್ಲಿ ಕಟ್ಟಿದ ಹಾಗೆ ಗಟ್ಟಿಯಾಗಿದೆ. ಈ ದೇವಸ್ಥಾನ ಮೊದಲ ಬಾರಿಗೆ ಚೋಳರೆ ಕಲ್ಲಿನ ದೇವಸ್ಥಾನವನ್ನು ಕಟ್ಟಿದ್ದು ಪ್ರಾಚೀನ ದೇವಾಲಯುಗಳಲ್ಲಿ ಇದು ಒಂದು ಚಿರವಾದ

10 ನೇ ಪುಟಕ್ಕೆ

ದಿಟ್ಟೆಯರ ಡಿಕ್ಕೆಡಿಸುವ ಡಿಸ್‌ಮೆನೋರಿಯಾ

ನೋವಿನ ಮುಟ್ಟು (ಡಿಸ್‌ಮೆನೋರಿಯಾ)ವೈವಿಧ್ಯಕ್ಕೆ ಹೆಸರುವಾಸಿ. ಇದರಲ್ಲಿ 5 ಪ್ರಕಾರ. 1 ಸುಳುಕಿನ ನೋವಿನ ಮುಟ್ಟು, 2. ರಕ್ತ ಕಟ್ಟುವಿಕೆಯಿಂದಾಗುವ ನೋವಿನ ಮುಟ್ಟು. 3. ಪರೆಯ ಜತೆಗೂಡಿ ಬರುವ ನೋವಿನ ಮುಟ್ಟು. 4. ಅಂಡಾಶಯದ ತೊಡಕಿನಿಂದಾಗುವ ನೋವಿನ ಮುಟ್ಟು ಹಾಗೂ 5. ಮಧ್ಯಾವದಿ ನೋವಿನ ಮುಟ್ಟು.

ಸುಳುಕಿನ ನೋವಿನ ಮುಟ್ಟು: ಇದು ಅತಿ ಸಾಮಾನ್ಯವಾಗಿ ಕಂಡುಬರುತ್ತದೆ. ನೋವಿನ ಪ್ರಾರಂಭ ಮುಟ್ಟಿನ ಪ್ರಥಮ ದಿನದಂದು ಕೆಳಹೊಟ್ಟೆಯಲ್ಲಿ ಅತಿಯಾದ ನೋವು. ನೋವು ಅಬ್ಬಬ್ಬಾ ಎಂದರೆ ಒಂದು ಘಂಟೆ ಇರುತ್ತದೆ. ವಿಚಿತ್ರವೆಂದರೆ ನೋವು ಒಂದೇ ಬಾರಿ ಬರುವುದಿಲ್ಲ. ವಾಕರಿಕೆ, ವಾಂತಿ ಜೊತೆಗೆ ಮುಟ್ಟಿನ ಕಾಲಾವಧಿ ಹೆಚ್ಚು ಕಡಿಮೆ ಆಗಬಹುದು ಅಥವಾ ಮೊದಲ ಮುಟ್ಟೇ ತಡವಾಗಿ ಆಗಬಹುದು. ಹೆಚ್ಚಿನ ಪ್ರಸಂಗಗಳಲ್ಲಿ ನೋವಿನ ಮುಟ್ಟು 15-16 ನೇ ವಯಸ್ಸಿನ ನಂತರ ಕಂಡುಬರುತ್ತದೆ. ಸುಳುಕಿನ ನೋವಿನ ಮುಟ್ಟಿಗೆ ಕಾರಣ ಹಲವಾರು. ಇಸ್ಟ್ರೋಜನ್ ಎಂಬ ಅಂತಃಸ್ರಾವದ ಸ್ರವಿಕೆಯಲ್ಲಿನ ಏರುಪೇರು, ತ್ರೊಂಬೋಲೈಸಿನ್ ಎಂಬ ಕಿಣ್ವದ ಕೊರತೆ, ಮಾನಸಿಕ ಅಸಮತೋಲನ, ಗರ್ಭಕೋಶದ ಕುತ್ತಿಗೆಯ ಅತಿಯಾದ ಸಂಕುಚನ,ಗರ್ಭಕೋಶದ ಕುಂಠಿತಗೊಂಡ ಬೆಳವಣಿಗೆ ಇತ್ಯಾದಿ.

ರಕ್ತ ಕಟ್ಟುವಿಕೆಯಿಂದಾಗುವ ನೋವಿನ ಮುಟ್ಟು : ಇಲ್ಲಿ ಹೊಟ್ಟೆನೋವು ಮುಟ್ಟಿನ 2-5 ದಿನ ಮೊದಲೇ ಕಂಡುಬರುತ್ತದೆ. ಮುಟ್ಟು ಬಂದಾಗ ನೋವು ಮಂಗಮಾಯ. ಈ ನೋವಿನ ಮುಟ್ಟಿಗೆ ಕಾರಣಗಳೆಂದರೆ, ಮಲಬದ್ಧತೆ, ಗರ್ಭಕೋಶದ ಗೆಡ್ಡೆಗಳು, ಹಿಂದಕ್ಕೆ ತಿರುಗಿದ ಗರ್ಭಕೋಶ, ಗರ್ಭಕೋಶದ ಸೋಂಕು, ಗರ್ಭನಾಳದ ಸೋಂಕು ಇತ್ಯಾದಿ.

ಈ ಹೊಟ್ಟೆ ನೋವನ್ನು ಮಲಬದ್ಧತೆಯ ನೋವೆಂದು ಅರ್ಥೈಸಿ, ಅತಿಯಾದಿ ಭೇದಿ ಔಷಧಿಗಳನ್ನು ತೆಗೆದುಕೊಂಡರೆ ನೋವಿನ ತೀವ್ರತೆ ಹೆಚ್ಚಾಗುತ್ತದೆ. ನೋವಿನ ಜೊತೆಗೆ ಸೋಂಕಿನಿಂದಾಗಿ ಬಿಳಿ ಮುಟ್ಟು ಕಂಡುಬರುವ ಸಾಧ್ಯತೆ ಇದೆ.

ಪೊರೆಯ ಜತೆಗೂಡಿ ಬರುವ ನೋವಿನ ಮುಟ್ಟು: ಇಲ್ಲಿ ಹೊಟ್ಟೆನೋವು ಸುಳುಕಿನ ನೋವಿನ ಮುಟ್ಟಿನಂತಿರುತ್ತದೆ. ಆದರೆ ನೋವಿನ ಜೊತೆಗೆ ಗರ್ಭಕೋಶದಿಂದ ಯೋನಿ ಮಾರ್ಗವಾಗಿ ಪದರ ಹೊರಬರುತ್ತದೆ. ಈ ನೋವಿನ ಮುಟ್ಟಿಗೆ ಸರಿಯಾಗಿ ಕಾರಣ ತಿಳಿದುಬಂದಿಲ್ಲ. ಆದರೂ ಇದು ರಕ್ತ ಸಂಬಂಧಿಗಳಲ್ಲಿ ಸಹಜವಾಗಿ ಕಂಡುಬರುತ್ತದೆ.

ಅಂಡಾಶಯದ ತೊಡಕಿನಿಂದಾಗುವ ನೋವಿನ ಮುಟ್ಟು : ಇಲ್ಲಿ ನೋವು ಮುಟ್ಟಿನ 2-3 ದಿನ ಮೊದಲೇ ಕಂಡುಬರುತ್ತದೆ. ಹೊಕ್ಕಳಲ್ಲಿ ಶುರುವಾದ ನೋವು ತೊಡೆ ಸಂದಿಯವರೆಗೆ ಹರಿಯುತ್ತದೆ. ಈ ನೋವಿನ ಮುಟ್ಟಿಗೆ ಕಾರಣ ಅಂಡಾಶಯದಲ್ಲಿನ ತೊಂದರೆ ಎಂದು ಕೆಲವರ ಅಭಿಪ್ರಾಯ.

ಮಧ್ಯಾವಧಿ ನೋವಿನ ಮುಟ್ಟು: ನೋವು ಎರಡು ಅನುಕ್ರಮ ಮುಟ್ಟುಗಳ ಮಧ್ಯಭಾಗದಲ್ಲಿ ಬರುತ್ತದೆ, ಸರಿ ಸುಮಾರಾಗಿ ಮುಟ್ಟಿನ 14 ನೇ ದಿನ. ನೋವಿನ ಮುಟ್ಟಿನ ಪರಿಹಾರದಲ್ಲಿ ರೋಗಿಯ ಪಾಲು ಹೆಚ್ಚಿನದು. ರೋಗಿಗೆ ಸಾಂತ್ವನ ನೀಡಬೇಕು. ಮಾನಸಿಕ ಧೈರ್ಯ ತುಂಬಬೇಕು. ಇದರಲ್ಲಿ ಕುಟುಂಬದ ಅದರಲ್ಲೂ ತಾಯಿಯ ಪಾತ್ರ ಹಿರಿದಾದುದು. ಪ್ರೋಟೀನ್ ಯುಕ್ತ ಆಹಾರ ಸೇವನೆ ಮಲಬದ್ಧತೆಯ ನಿವಾರಣೆ, ನೋವು ನಿವಾರಕ ಔಷಧಿಗಳ ಬಳಕೆ ಗರ್ಭ ನಿರೋಧಕ ಮಾತ್ರೆಗಳನ್ನು ಸಹ ನೋವಿನ ಮುಟ್ಟಿನ ನಿವಾರಣೆಗೆ ಬಳಸಬಹುದು. ಹಿತ ಮಿತ ದೈಹಿಕ ವ್ಯಾಯಾಮ ಇವೆಲ್ಲದರಿಂದ ಗುಣ ಕಾಣದಿದ್ದರೆ ಶಸ್ತ್ರ ಚಿಕಿತ್ಸೆಯಿಂದ ಪರಿಹಾರ ಸಾಧ್ಯ. ಪ್ರಾರಂಭಿಂಕ ಹಂತದಲ್ಲಿ ನೋವಿನ ಮುಟ್ಟನ್ನು ಪರಿಹರಿಸಿಕೊಳ್ಳದಿದ್ದರೆ ರೋಗ ಉಗ್ರರೂಪಿಯಾಗಿ ಪರಿಹರಿಸಲು ಕಷ್ಟವಾಗಬಹುದು.

-ಡಾ|| ಗಣೇಶ್ ವೇರ್ಣೆಕರ,

9 ನೇ ಪುಟದಿಂದ

ದೇವಾಲಯ. ಈ ಕಡೆ ಬರುವ ಸಂದರ್ಭ ಸಿಕ್ಕಿದ್ದರೆ ಈ ದೇವಾಲಯಕ್ಕೆ ಭೇಟಿ ನೀಡಲು ಮರೆಯದಿರಿ.

ಇತ್ತೀಚೆಗೆ ಮೈಸೂರಿನ ಮಹಾಜನ ಕಾಲೇಜು ಪದವಿಪೂರ್ವ ವಿದ್ಯಾರ್ಥಿಗಳಿಂದ ಶ್ರಮದಾನ ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದು.

ಸಧ್ಯಕ್ಕೆ ಹನ್ನೆರಡು ಜನ ಅರ್ಚಕರ ಸ್ವಾಧೀನವಿದ್ದು ತಮ್ಮ ಪಾಲಿನ ಪೂಜೆ ಪುನಸ್ಕಾರವನ್ನು ಮಾಡುತ್ತಿದ್ದಾರೆ. ಬಸಪ್ಪ ಮತ್ತು ಪುಟ್ಟೀರವ್ವರೆನ್ನುವ ಹಳೆ ತಲೆಮಾರಿನ ಎಂಬತ್ತುವರ್ಷದ ದಂಪತಿಗಳಿದ್ದರೆ ಉಳಿದಂತೆ ಈಗಿನ ತಲೆಮಾರಿನವರಿಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. ಹನ್ನೆರಡು ಮಂದಿಯಲ್ಲಿ ಒಬ್ಬರು ಶಿಲುಬೆಯನ್ನು ಕುತ್ತಿಗೆಯಲ್ಲಿ ಧರಿಸಿರುವುದನ್ನು ನೋಡಿದರೆ ಈ ಪುರಾತನ ದೇವಸ್ಥಾನಕ್ಕೆ ಯಾವತ್ತು ಆಪತ್ತು ಕಾದಿದೆಯೇ ಎನ್ನುವ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ ಈ ಊರಿನ ನಾಗರೀಕರು. ಇಂತಹ ಪವಿತ್ರ ದೇವಸ್ಥಾನ ಬಗ್ಗೆ ಮುಜರಾಯಿ ಇಲಾಖೆ ಇತ್ತ ಗಮನ ಹರಿಸುವರೆ? ಕಾದು ನೋಡೋಣಾ.

ಬರಹ : ತುಂತಜೆರ ದಿವ್ಯ ಉಲ್ಲಾಸ್, ಮೈಸೂರು.

ವಿ. ಸೂ. : ವಿರಾಜಪೇಟೆ ತಾಲ್ಲೂಕಿನ ಮಲೆತಿರಿಕೆ ದೇವಸ್ಥಾನವು ಇದೇ ರೀತಿಯ ಹೇಳಿಕೆ ಪಡೆದಿದೆ.

ಗೌಡ ಕುಟುಂಬಗಳ ನಡುವೆ ಕ್ರಿಕೆಟ್ ಉತ್ಸವ 'ಪೇರಿಯನ ಕಪ್'-2004 ಕ್ಕೆ ಸಿದ್ಧತೆ ಆರಂಭ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಪ್ರತಿ ವರ್ಷದಂತೆ ಈ ವರ್ಷವೂ, ಗೌಡ ಕುಟುಂಬಗಳ ನಡುವೆ ಕಿಕೆಟ್ ಉತ್ಸವ ಆಯೋಜಿಸಿದ್ದು, 'ಪೇರಿಯನ ಕಪ್'-2004 ಕ್ಕೆ ಸಿದ್ಧತೆಗಳು ಆರಂಭಗೊಂಡಿವೆ. ಕಳೆದ ವರ್ಷ ದಂಬೆಕೋಡಿ ಕಪ್ -2003ನ್ನು ಆಯೋಜಿಸಲಾಗಿತ್ತು. 130 ಗೌಡ ಕುಟುಂಬಗಳು ಆಗ ಪಾಲ್ಗೊಂಡಿದ್ದು, ಪಂದ್ಯಾವಳಿಯನ್ನು ಬಹು ವರ್ಣಮಯ ಮತ್ತುಆಕರ್ಷಕವಾಗಿ ನಡೆಸಲಾಗಿತ್ತು. ಈ ವರ್ಷವು 'ಪೇರಿಯನ ಕಪ್' ಪಂದ್ಯಾವಳಿಯನ್ನು ವರ್ಣಮಯವಾಗಿ ನಡೆಸಲು ತೀರ್ಮಾನಿಸಲಾಗಿದ್ದು ಸುಮಾರು 150 ಕ್ಕೂ ಹೆಚ್ಚು ಕುಟುಂಬಗಳ ಕ್ರಿಕೆಟ್ ತಂಡಗಳು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ.

ಮೇ ತಿಂಗಳ 2 ನೇ ತಾರೀಕಿನಿಂದ 14 ನೇ ತಾರೀಕಿನ ವರೆಗೆ ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಹಲವು ಗೌಡ ಕ್ರಿಕೆಟ್ ತಾರೆಗಳು ತಮ್ಮ ಪ್ರತಿಭೆಯನ್ನೂ ಒರೆಗೆ ಹಚ್ಚಲಿವೆ. ಪಂದ್ಯಾವಳಿಯನ್ನು ಅತ್ಯಂತ ಶಿಸ್ತು ಬದ್ಧವಾಗಿ, ಮತ್ತು ಯಶಸ್ವಿಯಾಗಿ ನಡೆಸಲು ಜನಾಂಗದ ಹಲವು ಅನುಭವಿ ಕ್ರಿಕೆಟ್ ತಜ್ಞರ ಸಲಹೆ ಪಡೆಯಲಾಗುವುದು. ಕಳೆದ ವರ್ಷದ ದಂಬೆಕೋಡಿ ಕಪ್ ಪಂದ್ಯಾವಳಿಯ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ, ಅಕಾಡೆಮಿ ಅಧ್ಯಕ್ಷರಿಂದ ವೀಳ್ಯ ಪಡೆದುಕೊಂಡಿರುವ ಪೇರಿಯನ ಕುಟುಂಬಸ್ಥರು ಈ ವರ್ಷದ ಆತಿಥ್ಯ ವಹಿಸಲಿದ್ದಾರೆ.

ಗೌಡ ಅಕಾಡೆಮಿ ನಿಧಿ ಸ್ಥಾಪನೆ : ತುಂತಜೆ ಗಣೇಶ್

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಗೌಡ ಜನಾಂಗದ ಸಂಘಟನೆ ಮತ್ತು ಸಂಸ್ಕೃತಿ ಉಳಿಸುವಲ್ಲಿ ಶಕ್ತಿ ಮೀರಿ ಶ್ರಮಿಸುತ್ತಿದೆ. ಆದರೆ ಅಕಾಡೆಮಿಗೆ ತನ್ನದೇ ಆದ ನಿಧಿ ಸ್ಥಾಪನೆಯಾಗಿಲ್ಲ. ಆದುದರಿಂದ ಪೇರಿಯನ ಕಪ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸುತ್ತಿರುವ ಸಂದರ್ಭದಲ್ಲೇ ಅಕಾಡೆಮಿ ನಿಧಿಗೆ ಹಣ ಸಂಗ್ರಹಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗುವುದು ಎಂದು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಕೊಡಗು ಸಂಗಾತಿಗೆ ತಿಳಿಸಿದ್ದಾರೆ.

ಗೌಡ ಕುಟುಂಬಗಳ ನಡುವೆ ಕ್ರಿಕೆಟ್ ಪಂದ್ಯಾವಳಿ, ಕೆಸರುಗದ್ದೆ ಕ್ರೀಡಾಕೂಟ, ಹುತ್ತರಿಹಬ್ಬ, ಕೈಲ್ ಮುಹೂರ್ತದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವ ಗೌಡ ಅಕಾಡೆಮಿ ತನ್ನ ನಿಧಿಗೆ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸದೇ ಇರುವುದನ್ನೂ ಇಲ್ಲಿ ಸ್ಮರಿಸಬಹುದು. ಇದುವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ, ಧನ ಸಹಾಯವನ್ನೂ ಪಡೆಯುವ ಬದಲು, ಬಹುಮಾನ ದಾನಿಗಳನ್ನು ಗುರುತಿಸಿ, ಅಂತಹವರನ್ನೇ ಅತಿಥಿಗಳನ್ನಾಗಿ ಆಹ್ವಾನಿಸಿ ಅವರ ಮೂಲಕ ಬಹುಮಾನ ವಿತರಣೆ ಮಾಡಿಸಲಾಗುತ್ತಿತ್ತು. ಆದರೆ ಗೌಡ ಅಕಾಡೆಮಿ ಬಲಯುತವಾಗಿ ಬೆಳೆದು, ಜನತೆಯನ್ನು ಬೆಳೆಸಬೇಕಾದರೆ ಅದಕ್ಕೆ ತನ್ನದೇ ಆದ ಆರ್ಥಿಕ ಮೂಲದ ಅವಶ್ಯಕತೆಯಿದ್ದು, ಗೌಡ ಬಂಧುಗಳು ಅಕಾಡೆಮಿ ಕರೆಗೆ ಸ್ಪಂದಿಸಬೇಕಾಗಿದೆ.

ದೂರದರ್ಶನದಲ್ಲಿ ಗೌಡರ ಕಾರ್ಯಕ್ರಮಕ್ಕೆ ತೆರೆಮರೆ ಪ್ರಯತ್ನ

ಕೊಡಗು ಗೌಡ ಜನಾಂಗ ಇತ್ತೀಚೆಗೆ ಸಾರ್ವಜನಿಕ ವೇದಿಕೆ ಆಕಾಶವಾಣಿ ಮೊದಲಾದೆಡೆ ತನ್ನ ಕಾರ್ಯಕ್ರಮಗಳನ್ನೂ ನೀಡುತ್ತಿದ್ದರೂ, ದೂರದರ್ಶನದಿಂದ ಬಹುದೂರವೇ ಉಳಿದುಕೊಂಡಿದೆ. ಆದರೂ ಕೆಲವು ಉತ್ಸಾಹಿ ಬಂಧುಗಳು ತೆರೆಮರೆಯಲ್ಲಿ ದೂರದರ್ಶನದಲ್ಲಿ ಜನಾಂಗಕ್ಕೆ ಸಂಬಂಧ ಪಟ್ಟಂತೆ ಕಾರ್ಯಕ್ರಮ ರೂಪಿಸಲು ಶ್ರಮ ವಹಿಸುತ್ತಿರುವುದು ತಿಳಿದುಬಂದಿದೆ.

ಆದರೂ ದೂರದರ್ಶನದಲ್ಲಿ ಕಾರ್ಯಕ್ರಮ ನೀಡ ಬೇಕಾದರೆ, ಅದಕ್ಕೆ ಸಾಕಷ್ಟು ಹಣಕಾಸಿನ ಅವಶ್ಯಕತೆಯಿದ್ದು, ಈ ಆರ್ಥಿಕ ಸಹಾಯವನ್ನು ಒದಗಿಸುವವರಾರು ಎನ್ನುವ ಪ್ರಶ್ನೆ ಅವರನ್ನು ಕಾಡುತ್ತಿರುವುದಾಗಿ ತಿಳಿದು ಬಂದಿದೆ. ಆದರೂ ಸಾಹಸ ಬಿಡದ ತ್ರಿವಿಕ್ರಮನಂತೆ ಪ್ರಯತ್ನ ಮುಂದುವರೆಸಿರುವ ಸಂಬಂಧಪಟ್ಟವರು ಈಗಾಗಲೇ ಹಲವಾರು ನುರಿತ ಶಿಕ್ಷಕರನ್ನು ಮತ್ತು ಕಲಾವಿದರನ್ನು ಭೇಟಿಯಾಗಿ ಚರ್ಚೆಯಲ್ಲಿ ತೊಡಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಜನಾಂಗದ ಹಲವಾರು ಪ್ರತಿಭೆಗಳು ಕಮರಿ ಹೋಗುತ್ತಿದ್ದು, ಇಂತಹ ಪ್ರತಿಭೆಗಳನ್ನು ಬಳಸಿಕೊಂಡದ್ದೇ ಆದರೆ ದೂರದರ್ಶದಲ್ಲೇನು, ಯಾವುದೇ ಸ್ತರದಲ್ಲೂ ನಮ್ಮ ಸಾಂಸ್ಕೃತಿಕ ವೈಭವವನ್ನು ಹೊರಚೆಲ್ಲಬಹುದು. ಆದರೆ ಈ ಪ್ರತಿಭೆಗಳನ್ನು ಬೆಳಕಿಗೆ ತರಲು ಆರ್ಥಿಕ ಸಹಾಯದ ಅವಶ್ಯಕತೆಯಿದ್ದು, ಕಾರ್ಯಕ್ರಮ ಯೋಜಿಸುವವರು ಗೌಡ ಸಮಾಜದತ್ತ ತಮ್ಮ ನೋಟವನ್ನು ಹರಿಸಿದ್ದಾರೆ. ಗೌಡ ಸಮಾಜ ಸ್ಪಂದಿಸಿದ್ದೇ ಆದರೆ ನಮ್ಮ ಜನಾಂಗದ ಕಾರ್ಯಕ್ರಮಗಳನ್ನೂ ದೂರದರ್ಶನದಲ್ಲಿ ನೋಡುವ ಸಮಯ ಬಹುಬೇಗ ಬರಬಹುದು

-ಪಟ್ಟಡ ಶಿವಕುಮಾರ್

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ



ಅಧ್ಯಕ್ಷರಾಗಿ ಕುಯ್ಯಮುಡಿ ಪೂರ್ಣಯ್ಯ ನೇಮಕ:

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರನ್ನಾಗಿ ಕೆ. ಕೆ. ಪೂರ್ಣಯ್ಯನವರು ನೇಮಕವಾಗಿ ದಿನಾಂಕ 19-1-2004 ರಲ್ಲಿ ಶ್ರೀಯುತರು ಅಧಿಕಾರ ಸ್ವೀಕರಿಸಿದರು.

ಹಿಂದಿನ ಅಧ್ಯಕ್ಷ ಬಿ. ಕೆ. ಕೃಷ್ಣ ಅವರ ಸ್ಥಾನದಲ್ಲಿ ಪೂರ್ಣಯ್ಯ ಅವರನ್ನೂ ನೇಮಕಗೊಳಿಸಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ವಿ. ಶ್ರೀಧರಮೂರ್ತಿ ಅವರು ಜನವರಿ 17 ರಂದು ನೇಮಕಾತಿ ಆದೇಶ ಹೊರಡಿಸಿದ್ದು, ನೂತನ ಮುಡಾ ಅಧ್ಯಕ್ಷರಾಗಿ ಜನವರಿ 19 ರ ಬೆಳಿಗ್ಗೆ 11 ಗಂಟೆಗೆ ಅಧಿಕಾರ ಸ್ವೀಕರಿಸಿದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರುವ ಪೂರ್ಣಯ್ಯನವರು ತಿಳಿಸುವಂತೆ 3 ವರ್ಷದ ಹಿಂದೆಯೇ ಅದೃಷ್ಟ ಬಂದಿದ್ದರು ಸಹ ಆಗ ಒಲಿದು ಬರಲಿಲ್ಲ. ಯಾವುದೊ ಕಾಣದ ಕೈಗಳ ಪ್ರಭಾವದಿಂದ ಕೈ ಜಾರಿತ್ತು ಎನ್ನುವ ಪೂರ್ಣಯ್ಯನವರು ಮುಂದಿನ 3 ವರ್ಷದ ಅವಧಿಗೆ ತನಗೆ ಸಿಕ್ಕಿರುವ ಈ ಸುವರ್ಣಾವಕಾಶವನ್ನು ಖಂಡಿತವಾಗಿಯೂ ನನ್ನ ಇಷ್ಟ ದೇವತೆ ಮನೆದೈವ ಕರೋಡಿ ಚೌಂಡಿಯ ಸಾಕ್ಷಿಗಾಗಿ ತೃಪ್ತಿಯ ಕೆಲಸವನ್ನು ನೀಡುತ್ತೇನೆ ಎನ್ನುವ ಭರವಸೆಯನ್ನು ಸಂಗಾತಿಗೆ ನೀಡಿರುತ್ತಾರೆ.

ಈಗಿನ ಹಾಲಿ ಸರಕಾರವೇ ಮುಂದುವರಿದಲ್ಲೂ ಐದು ವರ್ಷದ ಅವಧಿಗೂ ಇಲ್ಲವಾದರೆ ಹೊಸ ಸರಕಾರ ಬಂದಲ್ಲೂ 3 ವರ್ಷದ ಅವಧಿಗೂ ಪೂರ್ಣಯ್ಯನವರು ಅಧಿಕಾರದ ಸವಿಯನ್ನು ಸವಿಯಲಿರುವರು.

ಅಧಿಕಾರವನ್ನು ಸದುಪಯೋಗ ಪಡಿಸಿಕೊಂಡು ನಗರದ ಜನರ ಸಮಸ್ಯೆಗೆ ಸ್ಪಂದಿಸಿ, ಜನರಿಗೆ ಸುಲಭ ದರದಲ್ಲಿ ನಿವೇಶನ ಸಿಗುವ ನಿಟ್ಟಿನಲ್ಲಿಯೂ, ಮಾಜಿ ಅಧ್ಯಕ್ಷರ ಒಳ್ಳೆಯ ಕೆಲಸವನ್ನೂ ಮುಂದುವರಿಸುವ ಭರವಸೆಯನ್ನೂ ನೀಡಿರುವ ಶ್ರೀಯುತರ ಅಭಿಪ್ರಾಯ ಶ್ಲಾಘನೀಯವಾಗಿದೆ.

-ಸಂಗಾತಿ

ನಿಧನ

ಕುಶಾಲನಗರ ಕೊಪ್ಪ ನಿವಾಸಿ ಕುಯ್ಯಮುಡಿ ಸುಬ್ರಾಯನವರು ದಿನಾಂಕ 4-1-2004 ನೇ ಭಾನುವಾರ ದಿವಸ ವೈಕುಂಠವಾಸಿಯಾದರು. ಇವರಿಗೆ 74 ವರ್ಷ ಪ್ರಾಯವಾಗಿತ್ತು. ಮೃತರು ಎರಡು ಗಂಡು ಮಕ್ಕಳು ಓರ್ವ ಪುತ್ರಿಯನ್ನಲ್ಲದೇ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ದಿನಾಂಕ 14-1-2004 ರಂದು ಕುಶಾಲನಗರ ಗೌಡ ಸಮಾಜದಲ್ಲಿ ನೆರವೇರಿತು.

ವರದಿ : ಡಾ. ವಿಶ್ವನಾಥ್, ಮೈಸೂರು.

ಕುವೆಂಪುಗೆ ಭಾರತರತ್ನ: ಆಗ್ರಹ

ರಾಷ್ಟ್ರಕವಿ ಕುವೆಂಪುಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಬೇಕು. ಶಿವಮೊಗ್ಗ ಜಿಲ್ಲೆಗೆ ಕುವೆಂಪು ಹೆಸರಿಡಬೇಕು ಎಂದು ಒತ್ತಾಯಿಸಿ ರಾಜ್ಯ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟವು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿತು.ಧರಣಿ ಉದ್ಘಾಟಿಸಿ, ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರಕಾರ ಸ್ಪಂದಿಸಿ ಸಂಘದ ಬೇಡಿಕೆ ಈಡೇರಿಸದಿದ್ದರೆ ರಾಜ್ಯವ್ಯಾಪ್ತಿ ಹೋರಾಟ ಮಾಡುವುದಾಗಿ ಒಕ್ಕೂಟ ಅಧ್ಯಕ್ಷ ಕೆ. ಪ್ರಭಾಕರ ರೆಡ್ಡಿ ಎಚ್ಚರಿಕೆ ನೀಡಿದರು.

ಕುವೆಂಪು ಅಂಚೆ ಚೀಟಿ ಬಿಡುಗಡೆ ಮಾಡಬೇಕು. ಅವರ ಪ್ರತಿಮೆಯನ್ನು ರಾಜ್ಯ ಎಲ್ಲ ಜಿಲ್ಲೆಗಳಲ್ಲಿ ಸ್ಥಾಪಿಸಬೇಕು. ವಿಶ್ವ ಮಾನವ ಸಂದೇಶವನ್ನು ಇತರ ಭಾಷೆಗಳಿಗೆ ತರ್ಜುಮೆ ಮಾಡಬೇಕು ಮತ್ತು ಭಾರತ ಜನನಿಯ ತನುಜಾತೆಯನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯಗೊಳಿಸುವಂತೆ ಆಗ್ರಹಿಸಿದರು.

ಕುರುಂಜಿಗೆ ಫ್ಲೋರಿಡಾ ವಿವಿಯ ಡಾಕ್ಟರೇಟ್

ಸುಳ್ಯದ ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ ಸ್ಥಾಪಕಾಧ್ಯಕ್ಷ ಕುರುಂಜಿ ವೆಂಕಟ್ರಮಣ ಗೌಡರಿಗೆ ಫ್ಲೋರಿಡಾ ವಿಶ್ವ ವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿದೆ.

ಸುಳ್ಯ, ಬೆಂಗಳೂರು, ಡಿಲ್ಲಿಯಲ್ಲಿ ವೈದ್ಯಕೀಯ ತಾಂತ್ರಿಕ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಈ ಗೌರವ ಡಾಕ್ಟರೇಟನ್ನು ನೀಡಿದೆ. ಕುರುಂಜಿಯವರಿಗೆ ಈಗಾಗಲೇ ಗ್ಲೋರಿ ಆಫ್ ಇಂಡಿಯಾ, ರಾಜೀವಗಾಂಧಿ ರಾಷ್ಟ್ರೀಯ ಏಕತಾ ಪ್ರಶಸ್ತಿ ಸಹಿತ 50 ಕ್ಕಿಂತಲೂ ಹೆಚ್ಚು ಪ್ರಶಸ್ತಿ ಲಭಿಸಿವೆ.

ಗಂಗರ ತಾಮ್ರ ಶಾಸನ ಸಂಶೋಧನೆ

ತಲಕಾಡು ಗಂಗ ರಾಜರಿಗೆ ಸೇರಿದ ತಾಮ್ರಪತ್ರ ಶಾಸನ ತುಂಬಲ ಗ್ರಾಮದಲ್ಲಿ ಲಭಿಸಿದೆ. ಕ್ರಿ. ಪೂ. 444 ರ ಕಾಲದ್ದೆಂದು ಹೇಳಲಾಗಿದೆ. ಗಂಗರ ಕೊಂಗುಣಿ ವರ್ಮ, ಮಾಧವವರ್ಮ ಮತ್ತು ಹರಿವರ್ಮ ರಾಜರನ್ನು ಕುರಿತು ಹೇಳುತ್ತದೆ.

ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಶಾಸನ ಭಾಷೆ ಇದೆ. ಯುದ್ಧದಲ್ಲಿ ಮಡಿದ ಯೋಧನಿಗೆ ಸಲ್ಲಿಸಿದ ಕಾಣಿಕೆಯೂ ಆಗಿದೆ. ಮಾನಸ ಗಂಗೋತ್ರಿ ಪ್ರಾಚೀನ ಇತಿಹಾಸ ಮತ್ತು ಪ್ರಾಚ್ಯ ವಸ್ತು ವಿಭಾಗದ ಪ್ರವಾಚಕ ಡಾ. ಎನ್. ಹಾವಲಯ್ಯ ಹಾಗೂ ಸಂಶೋಧಕರಾದ ಎಚ್. ಎಂ. ನಾಗರಾಜರಾವ್, ಕೃಷ್ಣಪ್ಪ ಮತ್ತಿತರರು ನಡೆಸಿದ ಸಂಶೋಧನೆಯಲ್ಲಿ ಈ ಶಾಸನ ಲಭಿಸಿದೆ.

ಹೊಸ ಅವಕಾಶಗಳಿಗೆ ಹೋರಾಡುವಾಗ ಇರುವ ಅವಕಾಶಗಳ ಬಗೆಗೆ ಕುರುಡಾಗಬಾರದು

ಮೂಡಾ ಅಧ್ಯಕ್ಷರಾಗಿ ಕುಯ್ಯುಮುಡಿ ಪೂರ್ಣಯ್ಯ : ಗೌಡ ಜನಾಂಗದ ಓಲೈಕೆಯಲ್ಲಿ ಕಾಂಗ್ರೆಸ್ ಪಕ್ಷ

ಕುಯ್ಯುಮುಡಿ ಪೂರ್ಣಯ್ಯನವರು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ ಅವರಿಗೆ ಈ ಅಧಿಕಾರ ಸಂದಿರುವುದು ಕಾಂಗ್ರೆಸ್ ಪಕ್ಷಕ್ಕೆ ಸ್ವಲ್ಪ ಮಟ್ಟಿನ ಲಾಭ ತಂದುಕೊಡುವ ನಿರೀಕ್ಷೆಯಿದೆ. ಹಾಗೆ ನೋಡಿದರೆ ಚುನಾವಣೆಗೂ ಮೂಡಾ ಅಧ್ಯಕ್ಷರ ನೇಮಕಕ್ಕೂ ಯಾವುದೇ ಸಂಬಂಧವಿಲ್ಲ. ಪೂರ್ಣಯ್ಯನವರು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಅವರಿಗೆ ಈ ಹಿಂದೆಯೇ ಹುದ್ದೆ ಲಭ್ಯವಾಗಬೇಕಿತ್ತೆಂದು ಸ್ವತಃ ಅವರೇ ಅಭಿಪ್ರಾಯ ಪಟ್ಟಿದ್ದಾರೆ. ಅಂಬೆಕಲ್ಲು ಕುಶಾಲಪ್ಪ, ಬೊಳ್ಳಂಡ ಪೆಮ್ಮಯ್ಯ ಮತ್ತು ಕುಯ್ಯಮುಡಿ ಪೂರ್ಣಯ್ಯನವರು ಮಡಿಕೇರಿ ನಗರದಲ್ಲಿ ಕಾಂಗ್ರೆಸ್ ಪಕ್ಷದ ಆಧಾರ ಸ್ತಂಭಗಳಂತಿರುವ ತ್ರಿಮೂರ್ತಿಗಳು. ಇದನ್ನು ಗುರುತಿಸಿಯೇ ಕುಶಾಲಪ್ಪನವರನ್ನೂ ಮಡಿಕೇರಿ ನಗರ ಸಭೆಗೆ ನಾಮಕರಣ ಮಾಡಿರುವ ಕಾಂಗ್ರೆಸ್, ಪೆಮ್ಮಯ್ಯನವರನ್ನೂ ತಾಲ್ಲೂಕು ಆಶ್ರಯ ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತ್ತು. ಪೂರ್ಣಯ್ಯನವರನ್ನೂ ಕೊಡಗು ದೇವಾಲಯಗಳ ನಿಧಿ ಸ್ಥಾಪನಾ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತಾದರೂ ಅದು ಅವರಿಗೆ ತೃಪ್ತಿ ನೀಡಿರಲಿಲ್ಲ. ಈಗ ಮುಡಾ ಅಧ್ಯಕ್ಷರಾಗಿ ನೇಮಕ ಗೊಂಡಿರುವುದು ಅವರಿಗೆ ಸಂತಸ ತಂದೆದೆ. ಮೂರು ವರ್ಷದ ಕೆಲಸಗಳನ್ನು ಮೂರು ತಿಂಗಳಲ್ಲಿ ಮಾಡಿ ಮುಗಿಸುತ್ತೇನೆಂದು ಸ್ವತಃ ಅವರೇ ಉತ್ಸಾಹದಿಂದ ಹೇಳಿ ಕೊಂಡಿದ್ದಾರೆ.

ಕೊಡಗು, ಕಾಂಗ್ರೆಸ್‌ನ ಭದ್ರಕೋಟೆ. 1994 ರ ವಿಧಾನ ಸಭಾ ಚುನಾವಣೆಯಲ್ಲಿ ದಂಬೆಕೋಡಿ ಮಾದಪ್ಪನವರ ನೇತೃತ್ವದಲ್ಲಿ ಈ ಭದ್ರಕೋಟೆಯನ್ನು ಬಿ. ಜೆ. ಪಿ. ನುಚ್ಚು ನೂರು ಮಾಡಿತ್ತು. ಆದರೆ 1999 ರ ವಿಧಾನ ಸಭಾ ಚುನಾವಣೆ ನಡೆದಾಗ ಮಾದಪ್ಪನವರು ಬಿ.ಜೆ.ಪಿ.ಯಿಂದ ಹೊರಗಿದ್ದರು. ಪರಿಣಾಮವಾಗಿ ಸೋಮವಾರಪೇಟೆ ಹೊರತುಪಡಿಸಿ ಉಳಿದೆಡೆ ಮತ್ತೆ ಕಾಂಗ್ರೇಸ್ ಲಯ ಕಂಡುಕೊಂಡಿತ್ತು. ಮೊನ್ನೆ ವಿಧಾನ ಪರಿಷತ್ ಚುನಾವಣೆವರೆಗೆ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಾಗಿತ್ತು. ಆದರೆ ವಿಧಾನಪರಿಷತ್ ಚುನಾವಣೆಯಲ್ಲಿ ಕೊಡವ ಜನಾಂಗಕ್ಕೆ ಸೇರಿದ ಮಿಟ್ಟು ಚೆಂಗಪ್ಪ ಮತ್ತು ಅರುಣ್ ಮಾಚಯ್ಯ ಸ್ಪರ್ಧಿಸ ಬಯಸಿದ್ದರೂ. ಕಾಂಗ್ರೆಸ್ ಮಧ್ಯ ದೊರೆ ಟಿ. ಜಾನ್‌ಗೆ ಟಿಕೆಟ್ ನೀಡಿತ್ತು. ಇದರಿಂದ ಅಸಮಾಧಾನಗೊಂಡ ಅರುಣ್ ಮಾಚಯ್ಯ ಬಂಡಾಯವಾಗಿ ಸ್ಪರ್ಧಿಸಿ, ಗೆದ್ದು ಬಂದು ಕಾಂಗ್ರೆಸ್‌ಗೆ ತೀವ್ರ ಮುಖಭಂಗ ಮಾಡಿದ್ದರು.

ವಿಧಾನ ಪರಿಷತ್ ಫಲಿತಾಂಶದ ನಂತರ ಕೊಡಗಿನಲ್ಲಿ ಕಾಂಗ್ರೆಸ್‌ಗೆ ಮುಖ ಭಂಗವಾಗಿದ್ದರೆ ಚುನಾವಣೆಗೆ ಮೊದಲು ಕೊಡವ ಜನಾಂಗದವರಿಗೆ ಪಕ್ಷದ ಟಿಕೆಟ್ ನೀಡದೆ ಕೊಡವರಿಗೆ ಕಾಂಗ್ರೆಸ್ ಮುಖಭಂಗ ಮಾಡಿತ್ತು. ಫಲಿತಾಂಶ ಬಂದ ಬಳಿಕ, ಜಿಲ್ಲೆಯ ಉಸ್ತುವಾರಿಕೆಯನ್ನೂ ಎಂ. ಎಂ. ನಾಣಯ್ಯನವರಿಂದ ಕಿತ್ತು ಸುಮಾವಸಂತರವರಿಗೆ ನೀಡುವ ಮೂಲಕ, ಕೊಡವರಿಗೆ ಗಾಯದ ಮೇಲೆ ಬರೆ ಎಳೆಯುವ ಕೆಲಸವನ್ನು ಮಾಡಿದೆ. ಇದು ಸಹಜವಾಗಿಯೇ ಕೊಡವರಲ್ಲಿ ಕಾಂಗ್ರೆಸ್ ಪಕ್ಷದ ಬಗೆಗೆ ಅಸಮಾಧಾನವನ್ನೂ ಮೂಡಿಸಬಹುದು.

ಆದರೆ ಇದೇ ವೇಳೆಯಲ್ಲಿ ಕಾಂಗ್ರೆಸ್ ಪಕ್ಷ ಗೌಡ ಜನಾಂಗವನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡಿದೆ. ಮಡಿಕೇರಿ ತಾಲ್ಲೂಕಿನಲ್ಲಿ ಗೌಡ ಜನಾಂಗದ ಬಳಿ ಅಧಿಕ ಮತಗಳಿವೆ. ಗೌಡ ಜನಾಂಗವನ್ನು ಇಲ್ಲಿ ಓಲೈಸಿದರೆ ಆ ಪಕ್ಷಕ್ಕೆ ಲಾಭವಾಗುವುದು ಖಂಡಿತ. ವಿರಾಜಪೇಟೆಯಲ್ಲಿ ಕೊಡವ ಜನಾಂಗದ ಮತಗಳು ಅಧಿಕವಾಗಿದ್ದರೂ ಅದು ಮೀಸಲು ಕ್ಷೇತ್ರ. ಆದುದರಿಂದ ಸುಮಾವಸಂತರವರಿಗೆ ಹೆಚ್ಚು ಅಧಿಕಾರ ನೀಡಿ, ಅವರನ್ನು ಬಲಯುತಗೊಳಿಸಿ, ಆ ಕ್ಷೇತ್ರವನ್ನು ಬಗಲಿಗೆ ಹಾಕಿಕೊಳ್ಳುವ ಲೆಕ್ಕಾಚಾರವನ್ನು ಕಾಂಗ್ರೆಸ್ ಹಾಕಿಕೊಂಡಿರಬಹುದು. ಈಗ ಮಡಿಕೇರಿಯ ಪ್ರಥಮ ನಗರ ಸಭಾಧ್ಯಕ್ಷರಾಗಿ ಕೂಡಕಂಡಿ ಕಾವೇರಮ್ಮ ಸೋಮಣ್ಣ, ನಗರಾಭಿವೃದ್ಧಿ ಅಧ್ಯಕ್ಷರಾಗಿ ಕುಯ್ಯಮುಡಿ ಪೂರ್ಣಯ್ಯನವರು ಕಾರ್ಯನಿರ್ವಹಿಸುತ್ತಿದ್ದು, ಇಬ್ಬರೂ ಪ್ರಭಾವೀ ಗೌಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇಬ್ಬರೂ ಸಹ ಗೌಡ ಸಂಘಟನೆಗಳಲ್ಲಿ ದುಡಿದವರು. ಕುಯ್ಯಮುಡಿ ಪೂರ್ಣಯ್ಯನವರು ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರೆ, ಕಾವೇರಮ್ಮ ಸೋಮಣ್ಣನವರು ಖಜಾಂಚಿಯಾಗಿ ಕಾರ್ಯ ನಿರ್ವಹಿಸಿದ್ದರು. ಆದರೆ ಇವರು ಗ್ರಾಮೀಣ ಮತದಾರರ ಮೇಲೆ ಯಾವ ರೀತಿಯ ಪ್ರಭಾವ ಬೀರಬಲ್ಲರು? ಎಂಬ ಪ್ರಶ್ನೆಗೆ ಚುನಾವಣೆಯೇ ಉತ್ತರ ನೀಡಬೇಕು.

ಕಾಂಗ್ರೇಸ್ ಪಕ್ಷದಲ್ಲಿ ಚಟುವಟಿಕೆ ಬಿರುಸುಗೊಳ್ಳುತ್ತಿರುವಂತೆ ಬಿ. ಜೆ. ಪಿ.ಯಲ್ಲಿಯೂ ಚಟುವಟಿಕೆಗಳು ಬಿರುಸುಗೊಳ್ಳುತ್ತಿವೆ. ದೇಶಾದ್ಯಂತ ಪ್ರಸಕ್ತ ಎನ್.ಡಿ. ಎ. ಅಲೆಯಿದ್ದು, ಸಂಸತ್ತಿಗೆ ಹೆಚ್ಚಿನ ಸಂಖ್ಯೆಯ ಬಿ. ಜೆ. ಪಿ. ಸದಸ್ಯರು ಆಯ್ಕೆಯಾಗುವ ಸಂಭವವಿದೆ. ಕೊಡಗು, ಮಂಗಳೂರು ಲೋಕಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಆಯ್ಕೆಯಾಗಿರುವ ವಿ. ಧನಂಜಯಕುಮಾರ್, ಸಾಕಷ್ಟು ಕೆಲಸಗಳನ್ನು ಮಾಡಿದ್ದರೂ ವರ್ಷದಿಂದ ವರ್ಷಕ್ಕೆ ತಮ್ಮ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾ ಸಾಗಿದ್ದಾರೆ. ಈ ಬಾರಿ ಪುತ್ತೂರು ಶಾಸಕ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಸದಾನಂದ ಗೌಡರಿಗೆ ಟಿಕೇಟ್ ನೀಡಬೇಕೆಂಬ ಬಯಕೆ ಸ್ವತಃ ಬಿ. ಜೆ. ಪಿ. ಕಾರ್ಯಕರ್ತರಲ್ಲಿರುವುದರಿಂದ ಧನಂಜಯಕುಮಾರ್ ಪುನಾರಾಯ್ಕೆ ಬಯಸಿದರೆ, ಅವರಿಗೆ ಗೆಲುವು ಕಷ್ಟವಾಗಬಹುದು. ಕೇಂದ್ರ ಸರಕಾರದ ಉತ್ತಮ ಕೆಲಸಗಳು ತಮಗೆ ವರದಾನವಾಗಬಹುದು ಎಂಬ ನಿರೀಕ್ಷೆಯಲ್ಲಿ ಕೊಡಗು ಬಿ. ಜೆ. ಪಿ. ಯಿದೆ.

ಜಾ. ಜನತಾದಳ, ಎ. ಬಿ. ಪಿ. ಜೆ. ಡಿ., ಜನತಾಪಕ್ಷ ಕನ್ನಡನಾಡುಪಕ್ಷ, ಬಿ. ಎಸ್. ಪಿ. ಪಕ್ಷಗಳು ಕೊಡಗಿನಲ್ಲಿ ನೆಲೆಕಂಡುಕೊಳ್ಳಲು ಪ್ರಯತ್ನಿಸುತ್ತಿವೆ. ಕರ್ನಾಟಕದಲ್ಲಿ ಜನತಾದಳ ಪಕ್ಷ ಆಡಳಿತದಲ್ಲಿದ್ದಾಗ ಮಾಡಿದ ಜನಪರ ಕೆಲಸಗಳು ಇನ್ನೂ ಜನರ ಮನಸ್ಸಿನಿಂದ ಮಾಸಿಲ್ಲ. ಮತ್ತೊಮ್ಮೆ ಕರ್ನಾಟಕದಲ್ಲಿ ಜನತಾ ಪರಿವಾರಕ್ಕೆ ಅವಕಾಶ ನೀಡಬೇಕೆಂಬ ಕಾತರದಲ್ಲಿ ಮತದಾರನಿದ್ದರೆ, ಅದನ್ನು ಸದುಪಯೋಗ ಪಡಿಸಿಕೊಳ್ಳುವ ಆತುರ ಜನತಾ ಪರಿವಾರದ ನಾಯಕರಲ್ಲಿ ಕಾಣದಿರುವುದು ಕಾಂಗ್ರೆಸ್ ಮತ್ತು ಬಿ. ಜೆ. ಪಿ. ಗಳಿಗೆ ವರದಾನವಾಗಬಹುದು.

- ಪಟ್ಟಡ ಶಿವಕುಮಾರ್

ಆಧಾರವೇ ಇಲ್ಲದಿದ್ದರೆ ಸಿದ್ಧಾಂತದ ಮಂಡನೆ ಹೇಗೆ ಸಾಧ್ಯ.

ಪತ್ರ ವಿಭಾಗ : ಪತ್ರ :1

ಮಾನ್ಯರೇ,

ನಮ್ಮೆಲ್ಲರ ಕೊಡಗು ಸಂಗಾತಿ ಪತ್ರಿಕೆ ನಿಜವಾಗಿಯೂ ಗೌಡ ಜನಾಂಗದ ವಿಶೇಷತೆಯನ್ನು ನಾಡಿನ ಜನತೆಗೆ ತಿಳಿಸಿ ಹೇಳುತ್ತದೆ. ಇತ್ತೀಚಿನ ದಿನಗಳಿಂದ ಕೊಡಗು ಸಂಗಾತಿ ಚೊಕ್ಕನಾಗಿ, ಸುಂದರವಾಗಿ ಮೂಡಿಬರುತ್ತಿದೆ. ನೀವು ಸುಳ್ಯದ 'ಅಮರಶಿಲ್ಪಿ' ಕುರುಂಜಿ ಶ್ರೀ ವೆಂಕಟ್ರಮಣ ಗೌಡರ ಸಾಧನೆಯ ಬಗ್ಗೆ ತುಂಬಾ ಚೆನ್ನಾಗಿ ಪ್ರಕಟಿಸಿದ್ದೀರಿ. ನಿಜಕ್ಕೂ ಅವರು ಒಬ್ಬ ಮಹಾನ್ ವ್ಯಕ್ತಿ ಹೌದು. ಇನ್ನು ಮುಂದೆಯೂ ಸಹ ನಮ್ಮ-ನಿಮ್ಮ ಕೊಡಗು ಸಂಗಾತಿ ಇನ್ನಷ್ಟು ಹೆಚ್ಚಿನ ವಿಷಯಗಳೊಂದಿಗೆ ಚೆನ್ನಾಗಿ ಮೂಡಿ ಬರಲಿ ಎಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ವೀಣಾ ಕುದುಕುಳಿ, ಕರಿಕೆ

ಪತ್ರ :2

Dear Prabhakar,

Wish you, your family and Sangathi Balaga a very happy Sankranthi. At any cost do not stop " Sangathi and don't take bad name like "Gowda Dwani" we are with you.

Nangaru A. Appaji, Ganganagar, Bangalore

ಪತ್ರ -3

ಪ್ರೀತಿಯ ಸಂಪಾದಕರಿಗೆ,

ಕೊಡಗು ಸಂಗಾತಿ ಜನವರಿ 1 ರಿಂದ 31, 2004.

ಪುಟ 11 ಕೊಡಗು ಗೌಡ ಸಮಾಜ, ಈ ಬರಹ ಬಹಳ ಚೆನ್ನಾಗಿದೆ. ಅದರಲ್ಲಿ ವಿ. ಸೂ. ಮಹತ್ವದ್ದು. ಇಂತಾ ವಿಚಾರ ಬರೆಯುವಾಗ ಅದಕ್ಕೆ ಒಂದು ವಿಶೇಷತೆ ಬೇಕು. ಕೈಲು ಪೊಲ್ದು ಎಂದರೆ ಆಯುಧ ಪೂಜೆ, ಕಾವೇರಿ ಚಂಗ್ರಾದಿ ಎಂದರೆ ತೀರ್ಥ ಪೂಜೆ,ಪುತ್ತರಿ (ಹುತ್ತರಿ ಅಲ್ಲ) ಅಂದರೆ ಧಾನ್ಯ ಲಕ್ಷ್ಮಿ ಪೂಜೆ, ಇದನ್ನು ಪ್ರೀಯಾಂಬಲ್ ನಲ್ಲಿ ಸೂಕ್ಷ್ಮವಾಗಿ ಮಕ್ಕಳಿಗೆ ತಿಳಿಯುವ ಹಾಗೆ ವರ್ಣಿಸಬೇಕು. ಈ ಲೇಖನದಲ್ಲಿ ನೀವು ಮಾಡಿದ ಕಾರ್ಯಮಾತ್ರ ಇದೆ. ಅದನ್ನು ಮಾಡುವುದರ ವಿಶೇಷತೆ ಏನು? ಎಂಬುದಿಲ್ಲ. ನನ್ನ ಸ್ವಂತ ಬುದ್ಧಿ.

2. ಬಾರಿಸು ಗೌಡ ಡಿಂಡಿಮುವ ಪಟ್ಟಡ ಶಿವಕುಮಾರ್‌ರವರಿಗೆ ನನ್ನ ಅನಂತಾಶೀರ್ವಾದಗಳು. 5 ನೇ ಪ್ಯಾರಾದಲ್ಲಿ ಕೊಡಗು, ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಕೊಡವ ಮತ್ತು ಗೌಡ ಜನಾಂಗದವರು ಸಂಘಟಿತರಾಗಿ ದುಡಿಯಲೇ ಬೇಕು. ಇದನ್ನು ನಾನು ಬಹಳ ಸರ್ತಿಬೆಳಕಿಗೆ ತಂದಿದ್ದೇನೆ. ಕೊಡವ ಮತ್ತು ಗೌಡ ಎಂಬ ಬೇಧ ಏಕೆ? ನನ್ನ ಮಟ್ಟಿಗೆ ಕೊಡವ ಗೌಡ ಒಂದೇ ಜಾತಿ, ಒಂದೇ ಸಂಸ್ಕೃತಿ, ಒಂದೇ ಪರಂಪರೆ. ಆಚರಣೆಯಲ್ಲಿ ಹಣದ ವಿಚಾರದಲ್ಲಿ ಹೆಚ್ಚು ಕಡಿಮೆ ಇರಬಹುದು. ಅಂದ ಮಾತ್ರಕ್ಕೆ ನಾವೇಕೆ ಬೇರೆ ಬೇರೆ ಜಾತಿಯವರಾಗಬೇಕು. ಪ್ರಯತ್ನವಿದ್ದರೆ ಎಂದಾದರೊಮ್ಮೆ ಫಲಸಿಕ್ಕೇ ಸಿಕ್ಕುತ್ತೆ ಎಂಬುದಾಗಿಯೂ ಬರೆದಿರುವಿರಿ.

ಕೊಡವ ಗೌಡರು ಏಕೆ ಒಂದಾಗಬಾರದು ಸಮಾಜ ಏಕೆ ಚಿಂತಿಸಿ, ಪ್ರಯತ್ನ ಮಾಡಬಾರದು.

ಕೊಡವರು ಮತ್ತು ಕೊಡವ ಗೌಡರು ಹೀಗೆ ಒಬ್ಬರನ್ನೊಬ್ಬರು ಸಂಶಯಿಸಿದರೆ ಕೊಡಗು ಕೇರಳವಾಗಲು ಹೆಚ್ಚು ಸಮಯ ಬೇಕಿಲ್ಲ.

ಇದು ನನ್ನ ಅನಿಸಿಕೆ, ತಪ್ಪಿದ್ದರೆ ಕ್ಷಮಿಸಿ, ಆದರೆ ನಾವು ಒಂದೇ ಜನಾಂಗವಾಗುವ ಹಾಗೆ ಎರಡು ಕಡೆಯವರೂ ವೇದಿಕೆಗೆ ಮನಸ್ಸು ಮಾಡಲಿ.

-ಚೇಂದ್ರಿಮಾಡ ಗ. ಮುತ್ತಪ್ಪ
ಕುಶಾಲನಗರ

ಪತ್ರ :4

ಪ್ರೀತಿಯ ಶೀಲಾಮಣಿ ಅಕ್ಕಯ್ಯನವರಿಗೆ,

ಬಹಳ ದಿನಗಳ ನಂತರ ಪತ್ರ ಬರೆಯುತ್ತಿರುವೆನು. ನನ್ನ ಎಡಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ತಾ. 20-11-03 ರಲ್ಲಿ ರೇಸ್ ಕೋರ್ಸ್‌ಕಣ್ಣಾಸ್ಪತ್ರೆಯಲ್ಲಿ ಸಾಂಗವಾಗಿ ಜರುಗಿತು. ಈಗ ಐಡ್ರಾಪ್‌ನಲ್ಲಿ ಸುಧಾರಿಸಿಕೊಳ್ಳುತ್ತಿದ್ದೇನೆ. ಈ ತಿಂಗಳ 31-1-04 ರಲ್ಲಿ ಕಣ್ಣಿನ ತಪಾಸಣೆ ಇದೆ. ಆರೋಗ್ಯವಾಗಿರುವೆನು. ಬರವಣಿಗೆ ಬಿಟ್ಟಿಲ್ಲ. ಹೆಚ್ಚಾಗಿ ಬರಿಯುತಲೂ ಇಲ್ಲ. ವಿಷಯ

ಜನವರಿ 1 ರಿಂದ 31,2004 ಪಾಕ್ಷಿಕ ಪತ್ರಿಕೆ ಕೈ ಸೇರಿತು. ಡಾ. ಕುರುಂಜಿ ವೆಂಕಟ್ರಮಣರ 75 ನೇ ಹುಟ್ಟು ಹಬ್ಬಕ್ಕೆ ಮೀಸಲಾದ ಪತ್ರಿಕೆ ಗಣ್ಯವಾಗಿದೆ. ಬಹಳ ದೊಡ್ಡ ತಪ್ಪೊಂದು ನೀವು ಮಾಡಿರುವಿರಿ. ಮನುಷ್ಯ ಜೀವನದಲ್ಲಿರುವಾಗ ಆಚರಿಸುವ ಹುಟ್ಟು ಹಬ್ಬ ವರ್ಧಂತಿ. ಮನುಷ್ಯ ಸತ್ತನಂತರ ಮಾಡುವ ಹುಟ್ಟು ಹಬ್ಬ ಜಯಂತಿ.

ಜನವರಿ ತಿಂಗಳ ಪತ್ರಿಕೆಯ ಪುಟ 6 ರಲ್ಲಿ ಡಾ. ಕುರುಂಜಿ ವೆಂಕಟ್ರಮಣ ಗೌಡರ ಜನ್ಮ ಜಯಂತಿಯ ವಜ್ರ ಮಹೋತ್ಸವ ಎಂದು ಬರೆದಿರುವಿರಿ. ಇದು ಅಕ್ಷಮ್ಯ. ಅದು ಗೌಡರ 75 ನೇ ವರ್ಧಂತಿ ಮಹೋತ್ಸವವಾಗಬೇಕು.

ನಿಮ್ಮನ್ನು ತಿದ್ದುವ ಶಕ್ತಿ ನನಗಿಲ್ಲ ಬದುಕಿರುವ ಗಣ್ಯರ ಹುಟ್ಟು ಹಬ್ಬವನ್ನು ಜಯಂತಿ ಮಾಡಬೇಡಿ.

ಇಂತೀ ನಿಮ್ಮ ಹಿತೈಷಿ
-ಚೆಂದ್ರೀಮಾಡ ಗ. ಮುತ್ತಪ್ಪ

ವಿ. ಸೂ. : ವಂದನೆಗಳು, ಪ್ರಮಾದಕ್ಕೆ ವಿಷಾದಿಸುತ್ತೇವೆ. ತಿದ್ದುಪಡಿ ಹಾಕಲಾಗಿದೆ.

ಸಂಗಾತಿ

ಭೀಷ್ಮನ ಶಪತ

ಯಮುನಾ ನದಿ ತೀರಲಿ ಮೀನುಗಾರರ್ ವಾಸ ಮಾಡ್‌ತಿದ್ದೊ. ಅವರ ಮುಖ್ಯಸ್ಥನ ಮಗಳ್, ಒಬ್ಬ ಸನ್ಯಾಸಿನ ವರದಿಂದಾಗಿ ಸುವಾಸನೆ ವಸ್ತ್‌ನ ಕೊಟ್ಟ್ ಅದ್ ಅಲ್ಲಿನ ಕಾಡ್‌ಲೆಲ್ಲ ಘಮಘಮತಂತೇಳಿ ಗಮನ ಬಾತಿತ್ತ್. ಒಂದು ದಿನ ಸಂತನು ಆ ತೀರಕ್ಕಾಗಿ ಓಡಾಡಿಕಾಕನ ಬಹಳ ದೂರಂದೇ ಈ ಘಮ ಘಮ ಸುವಾಸನೆ ಬರ್‌ತಿದ್ದ ಕಡೆಗೆ ಹೋಗಿ ನೋಡ್ಕನ ಅಲ್ಲಿ ದೇವಕನ್ಯೆಯ ಹಂಗೆ ಒಬ್ಳು ಪೊರ್ಳ್‌ನ ಗೂಡೆನ ಕಂಡ್ ಸಂತನುಗೆ ಆ ಗೂಡೆನ ಮೇಲೆ ಮನ್ಸಾಗಿ ಅವ್ಳುನ್ನ ತಾನ್ ಮದುವೆ ಆಕುತ ಕೇಳ್‌ಕಾಕನ ಅವ್ಳು ಅವಳ ಅಪ್ಪನ ಕೇಳೊಕುತ್ತೇಳ್ತ್. ಹಂಗೆ ಸಂತನು ಆ ಗೂಡೆನ ಅಪ್ಪ ಮೀನ್ ಹಿಡಿವರ ಮುಖ್ಯಸ್ಥನ ಹತ್ರ ಹೋಗಿ ತನ್ನ ಇಷ್ಟನ ಹೇಳ್‌ಕನ ಆ ಮುಖ್ಯಸ್ಥ ತನ್ನ ಮಗ್ಳ ಮದುವೆ ಆದರೆ ಅವಳಿಗೆ ಹುಟ್ಟಿದ ಮಂಙನೆ ನಿನ್ನ ನಂತರ ರಾಜ ಆಕು. ಹಂಗಿದ್ದರೆ ಮಾತ್ರ ನೀನ್ ನನ್ನ ಮಗಳ್ನ ಮದುವೆ ಆತ್‌ತ್ತೇಳ್ತ್. ಈ ಮಾತ್‌ನ ಕೇಳಿ ಸಂತನು ಅರಮನೆಗೆ ಹೋಗಿ ಒಬ್ಬನೇ ಬೇಜಾರಲಿ ಕುದ್ದ್‌ರ್‌ಕಾಕನ ಅಲ್ಲಿಗೆ ದೇವರತ ಬಂದ್ ಅಪ್ಪ ಏನ್ ಕಾರಣಂದ ಮುಖ ಬಾಡಿಸಿಕಂಡ್ ಕುದ್ದದ್‌ತೇಳಿ ಕೇಳ್‌ಕನ ಸಂತನು ನಡ್ದ ವಿಷಯನ ಹೇಳ್‌ಕನ ದೇವರತ ತಾನೇ ಈ ವಿಷಯನ ಆ ಗೂಡೆನ ಅಪ್ಪನ ಹತ್ರ ಮಾತಾಡಿ ಸರಿ ಮಾಡ್ನೆತ್ತೇಳಿ ಯಮುನಾ ನದಿ ದಂಡೆಗೆ ಹೋಗಿ ಆ ಗೂಡೆನ ಅಪ್ಪನ ಹತ್ರ ಮಾತಾಡ್ತ್. ಆಗ ಗೂಡೆನ ಅಪ್ಪನ ಸಂತನುಗೆ ಹೇಳ್ದ ಮಾತ್‌ನೇ ಹೇಳ್ತ್ ದೇವರತ ಗೂಡೆನ ಅಪ್ಪ ಹೇಳ್ದಂಗೆ ಆಗಲಿ. ನಾನ್ ಮದುವೆ ಆದುಲೆ. ಹಂಗೂ ಹಸ್ತಿನಾಪುರ ರಾಜ್ಯದ ರಾಜ ನಾನ್ ಆದುಲೇತ ಶಪಥ ಮಾಡ್ತ್ ದೇವರತ. ಈ ರೀತಿ ಹೇಳ್ಕನ ದೇವತೆಗ ಅವನ ಮ್ಯಾಲೆ ಹೂಮಳೆ ಸುರ್ಸಿ ಅವನ್ನ ಭೀಷ್ಮ ಎಂದ್ ಕರ್‌ದೊ. ಅಂದ್‌ದ ಅಂವಂಗೆ ಭೀಷ್ಮನ ಹೆಸರೇ ಮುಂದೊರ್ತ್.

ಭೀಷ್ಮತ್ತೇಳ್ರೆ ಒಬ್ಬ ಒಂದು ಅತೀ ಕಷ್ಟದ ಶಪತ ಮಾಡಿ ಅದರ್ನ ಪೂರೈಸಿದಕ್ಕೆ ಭೀಷ್ಮತ ಹೇಳುವೆ. ಆ ರೀತಿ ಶಪಥ ಮಾಡಿ ಸತ್ಯವತಿನ ಕರ್‌ಕಂಡ್ ಹಸ್ತಿನಾಪುರಕ್ಕೆ ಹೋತ್.

ಅಂಬಾ - ಭೀಷ್ಮ

ಸತ್ಯವತಿ ಮಂಙ್ನ ಚಿತ್ರಾಂಗದ ಯುದ್ಧಲಿ ಸತ್ತನಂತರ ಇಂವಂಗೆ ಮಕ್ಕಳಾತ್‌ಲೆ, ಇನ್ನೊಬ್ಬ ಮಂಙ್ನ ವಿಚಿತ್ರಮೀರ್ಯನೇ ಆ ರಾಜ್ಯದ ಮುಂದಿನ ರಾಜನಾಕುತ. ಆದ್ರೆ ಅಂವ ಇನ್ನೂ ವಯಸ್ಸಿಗೆ ಬಾರದ್ದರಿಂದ ಭೀಷ್ಮನೇ ವಿಚಿತ್ರ ವೀರ್ಯನ ಪರವಾಗಿ ರಾಜ್ಯಭಾರ ವಹಿಸಿಕಂಡತ್.

ವಿಚಿತ್ರ ವೀರ್ಯ ವಯಸ್ಸಿಗೆ ಬಾಕಾಕನ ಭೀಷ್ಮ ಆ ಹೈದಂಗೆ ಹೆಂಣ್ ಹುಡಿಕಿಕೆ ಶುರುಮಾಡ್ತ್. ಕಾಶಿ ರಾಜಂಗೆ ಒಬ್ಬುಳು ಮಗಳು ಇತ್ತ್. ಆ ರಾಜ ಅಂವನ ಮಗಳಿಗಾಗಿ ಸ್ವಯಂವರ ಏರ್ಪಡಿಸಿತ್ತ್. ಎಲ್ಲಾ ರಾಜಂಗೂ ತಿಳ್ಸಿತ್. ಆಗ ಅಲ್ಲಿಗೆ ವಂಗ, ಅಂಗ, ಕೋಸಲ ಪುಂಡ-ಗಉಡ ಕಳಿಂಗ ಮತ್ತೆ ಹಲವಾರ್ ದೇಶದ ರಾಜಕುಮಾರರೂ ಬಂದಿದ್ದೊ. ರಾಜನ ಮಗಳು ಬಾರೀ ಪೊರ್ಳುನ ಹೆಣ್ಣ್. ಹಂಗಾಗಿ ಇಷ್ಟ್ ಜನ ರಾಜಕುಮಾರರ್ ಬಂದಿದ್ದೊ.

ಬಂದ ರಾಜಕುಮಾರರ್ ಭೀಷ್ಮನ ಕಂಡ್ ಭೀಷ್ಮ ಸ್ವಯಂವರನ ನೋಡಿಕೆ ಬಂದವತ್ತೇಳಿಕಂಡ್ ಇದ್ದೊ. ಆದರೆ ಭೀಷ್ಮನೂ ಸ್ವಯಂವರಕ್ಕೆ ಭಾಗವಹಿಸಿಕೆ ಬಂದದ್‌ತ ಗೊತ್ತಾದ ಮ್ಯಾಲೆ ಇಂವ ತನ್ನ ಶಪಥನ ಮರ್ತೇ ಬುಟ್ಟಿತ್‌ತ. ಇಂವಂಗೆ ವಯಸ್ಸ್ ಆಗುಟುತ್ತೇಳ್ದರ ಮರ್‌ತ್ ಬುಟ್ಟಿತ್‌ತ್ತೇಳಿ ಗುಸು ಗುಸು ಮಾತಾಡಿಕೊಂಡೊ. ಭೀಷ್ಮ ವಿಚಿತ್ರ ವೀರ್ಯನ ಪರವಾಗಿ ಬಂದಂವತ ಅವುಕೆ ಗೊತ್ತ್‌ಲೆ.

ರಾಜಕುಮಾರಿ ಭೀಷ್ಮಂಗೆ ಹಾರ ಹಾಕಿ ಬೇರೆ ಕಡೆ ತಿರುಗಿದೊ. ಈ ರೀತಿ ಆಕನ ಭೀಷ್ಮಂಗೆ ಸಿಟ್ ಬಂದ್ ಅಲ್ಲಿದ್ದವುಕೆ ನೀವು ಗಂಡ್‌ಸ್‌ತನ ತೋರಿಸಿತ್ತೇಳಿ ಅಲ್ಲಿ ಬಂದಿದ್ದ ರಾಜಕುಮಾರ ಗಳೊಟ್ಟಿಗೆ ಹೋರಾಡಿ ಅವರನೆಲ್ಲಾ ಸೋಲಿಸಿ ಮೂರೂ ರಾಜಕುಮಾರಿಗಳನ್ನು ಹಸ್ತಿನಾಪುರಕ್ಕೆ ತನ್ನ ರಥಲಿ ಕೂರ್‌ಸಿಕಂಡ್ ಹೋತ್. ಅಲ್ಲಿಗೆ ಹೋದ ಮೇಲೆ ಈ ರಾಜಕುಮಾರಿಗಳ ವಿಚಿತ್ರವೀರ್ಯನೊಟ್ಟಿಗೆ ಮದುವೆ ಮಾಡಿಕೆ ಏರ್ಪಾಡ್ ಮಾಡ್ತ್. ಈ ರೀತಿ ಮದುವೆಗೆ ಎಲ್ಲಾ ವ್ಯವಸ್ಥೆ ಮಾಡ್ತ್. ಈ ರೀತಿ ಎಲ್ಲವೂ ಸೇರ್‌ಕನ ಅಂಬಾ ತಮಾಷೆ ಮಾಡ್ದಂಗೆ ನಗಾಡಿ ಗಂಗೆಯ ಮಂಙ್ನಂಗೆ ನಾನ್ ಸಿಲ್ವ ನಾನ್ ಮನಸ್ಸಾರೆ ನನ್ನ ಗಂಡಾಂತ ಒಪ್ಪಿಯೊಳೆ. ನಿಮ್ಗೆ ಗೊತ್ತಿದ್ದಂಗೆ ಶಾಸ್ತ್ರಗಳಲ್ಲಿ ಹೇಳ್ದಂಗೆ ಒಂದು ಹೆಂಣ್ ಇನ್ನೊಬ್ಬನ ಪ್ರೀತಿಸಿರೆ ಅವನ ಬುಟ್ ಬೇರೆಯಂವ ನೊಟ್ಟಿಗೆ ಮದುವೆ ಆಕೆ ಆಗದ್‌ತ ಇರ್‌ಕನ ನೀವು ವಿಚಿತ್ರ ವೀರ್ಯನೊಟ್ಟಿಗೆ ಮದುವೆ ಹೆಂಗೆ ಮಾಡ್‌ರೆತ ಕೇಳ್ತ್. ಭೀಷ್ಮ ಅಂಬಾನ ಮಾತ್ ಒಪ್ಪಿ ಅವಳ್ನ ಸೌಬಲ ರಾಜನಾದ ಸಿಲ್ವನ ಹತ್ತಿರ ಅವಳ್ನ ಕರ್‌ಕಂಡ್ ಹೋಕೆ ಜನರೊಟ್ಟಿಗೆ ಕಳ್ಸಿಕೊಟ್ಟಿತ್.

ಭೀಷ್ಮ ನನ್ನನ್ನ ಸೋಲಿಸಿದರಿಂದ ನೀನ್ ಅವ್ನ ಹತ್ರನೇ ಹೋಗುಂತ್ತೇಳಿ ಕಳ್ಸಿತ್. ಆಗ ಅವುಳು ಪುನಃ ಹಸ್ತಿನಾಪುರಕ್ಕೆ ಬಂದ್ ಭೀಷ್ಮಂಗೆ ಹೇಳ್‌ಕನ ಭೀಷ್ಮ ವಿಚಿತ್ರವೀರ್ಯನ ಅಂಬಾನ ಮದುವೆ ಆಕೆ ಜುಲ್ಮೆ ಮಾಡ್ತ್. ಆದರೂ ವಿಚಿತ್ರ ವೀರ್ಯ ಒಪ್ಪಿತ್‌ಲೆ. ಪುನಃ ಅಂಬಾ ಸಿಲ್ವನ ಹತ್ರ ಹೋಗಿ ದುಃಖಲೆ ಆರ್ ವರ್ಷ ಕಳ್ತ್.

ಅಂಬಾಳ ತಂಗೆಕ ಅಂಬಿಕಾ ಮತ್ತೆ ಅಂಬಾಲಿಕ ವಿಚಿತ್ರವೀರ್ಯನೊಟ್ಟಿಗೆ ಮದ್ವೆ ಆತ್. ಅಂಬಾ ಬಹಳ ದುಃಖ ಮತ್ತೆಕ್ರೋಧ ಎರಡ್ ಸೇರಿ ಭೀಷ್ಮನ ಕೊಲ್ಲಕುತ ಸಂಕಲ್ಪ ಮಾಡಿ ಕಾಡಿಗೆ ಹೋಗಿ ಅಲ್ಲಿ ಶ್ರೀ ಸುಬ್ರಹ್ಮಣ್ಯನ ಕುರ್ತ್ ತಪಸ್ಸ್ ಮಾಡ್ತ್. ಆಗ ಪ್ರತ್ಯಕ್ಷ ಆಗಿ ವಿಷ್ಯ ತಿಳ್ದ ಬಾಡದೇ ಇರುವ ಒಂದು ತಾವರೆ ಹೂ ಮಾಲೆನ ಕೊಟ್ಟಿತ್. ಆ ಮಾಲೆನ ತಕ್ಕಂಡ್ ಸುಮಾರ್ ಜನ್ರ ಹತ್ರ ಹೋಗಿ ಕೇಳ್ರು ಭೀಷ್ಮನ ಕೊಲ್ಲಿಕೆ ಯಾರ್ ಮುಂದೆ ಬಾತ್ಲೆ. ಕಡೆಗೆ ದ್ರುಪನ ಹತ್ರ ಹೋಗಿ ಕೇಳ್ರು ಅಂವ ಒಪ್ಪದೆ ಕಡೆಗೆ ಆ ತಾವರೆ ಮಾಲೆನ ದ್ರುಪನ ಅರಮನೆಲಿ ಗೇಟಿಗೆ ತೂಗಾಕಿ ಅಲ್ಲಿಂದ ಕಾಡಿಗೆ ಹೋಗಿ ಅಲ್ಲಿ ಕೆಲವು ಋಷಿಗಳ ಬುದ್ಧಿವಾದದ ಮ್ಯಾಲೆ ಪರಶುರಾಮನ ಕಂಡತ್. ಕಂಡ್ ತನ್ನ ಕತೆನ್ನೆಲ್ಲಾ ಹೇಳ್ತ್. ಆಗ ಪಶುರಾಮ ಹೇಳ್ತ್. ನೀನ್ ಇನ್ನೊಂದ್ ಜನ್ಮಲಿ ಭೀಷ್ಮನ ಕೊಲ್ಲ್‌ತ್ತೇಳ್ತ್. ಇದರ್ನ ಕೇಳಿ ಅಂಬಾ ಸಿಟ್ಟ್ ಮತ್ತೆ ಬ್ಯಾಜರಲಿ ಭೀಷ್ಮನ ಮ್ಯಾಲೆ ಸೇಡ್ ತೀರಿಸಿಕ್ಕಾಗಿ ಹಿಮಾಲಯಕ್ಕೆ ಹೋಗಿ ಶಿವನ ತಪಸ್ಸ್ ಮಾಡಿ, ಮಾಡಾಕನ ಶಿವ ಅಲ್ಲಿಗೆ ಬಂದ್ ಏನ್ ಬೇಕ್‌ತ ವರ ಕೇಳ್ತ್. ಆಗ ಅಂಬಾ, ಭೀಷ್ಮನ ಇನ್ನೊಂದ್ ಜನ್ಮಲಿ ಕೊಲ್ಲಿಕೆ ವರ ಕೊಡಕುತ ಕೇಳ್ದ್ ಅದೇ ರೀತಿ ವರ ಕೊಟ್ಟಿತ್. ಅಂಬಾ ಒಂದು ಬೆಂಕಿ ಗುಡ್ಡೆ ಮಾಡಿ ಅದರ್ಲಿ ಹಾರಿ ಪ್ರಾಣ ಬುಟ್ಟಿತ್. ಅಂಬಾ ದ್ರುಪದನ ಮಗಳಾಗಿ ಹುಟ್ಟಿ ಸ್ವಲ್ಪ ವರ್ಷ ಅಲ್ಲಿರ್‌ಕಾಕನ ಅವುಳು ಹಿಂದಿನ ಜನ್ಮಲಿ ತೂಗು ಹಾಕಿದ ಹೂಮಾಲೆ ದ್ರುಪದನ ಅರಮನೆ ಗೇಟ್‌ಲೇ ಇತ್ತ್.

ಅದರ್ನ ತನ್ನ ಕುತ್ತಿಗ್ಯೆಗೆ ಹಾಕಿ ಕಂಡತ್. ಇದರ್ನ ನೋಡಿಯ ವಿಷ್ಯ ಭೀಷ್ಮಂಗೆ ಗೊತ್ತಾದರೆ ತನ್‌ಗೆ ಕೇಡ್‌ತ್ತೇಳಿ ಅವುಳು ದ್ರುಪದ ತನ್ನ ರಾಜ್ಯಂದ ಹೊರ್ಗೆ ಕಳ್ಸಿತ್. ಅಂಬಾ ಕಾಡಿಗೆ ಹೋಗಿ ಅಲ್ಲಿ ವೃತ ಆಚರಿಸಿ ಹೆಂಣಿಗೆ ಬದ್‌ಲ ಗಂಡಾಗಿ ಅವನೇ ಶಿಖಂಡಿ ಆತ್. ಕುರುಕ್ಷೇತ್ರ ಯುದ್ಧಲಿ ಅರ್ಜುನನೊಟ್ಟಿಗೆ ಶಿಖಂಡಿ ಯುದ್ಧ ಮಾಡಿಕೆ ಬಂದ ಭೀಷ್ಮ ಶಿಖಂಡಿನ ನೋಡಿ ಯಾವ ಸಂದರ್ಭಲೂ ಯುದ್ಧ ಮಾಡ್ದುಲೆತ್ತೇಳಿ ನಿರ್ಗಮನ ಆಕನ ಅರ್ಜುನನ ಬಾಣ ಭೀಷ್ಮಂಗೆ ತಗಲಿ ಭೀಷ್ಮನ ಕೊನೆ ಆದೆ.

ಪ್ರೊ. ಪೂಜಾರಿ ಮೊಣ್ಣಪ್ಪ

ಪ್ರತಿಯೊಂದು ವಸ್ತುವು ಕೂಡ ಅದರಷ್ಟಕ್ಕೆ ದೊಡ್ಡದೂ ಮಹತ್ವದ್ದೂ ಆಗಿರುತ್ತದೆ.

ವೆನೆರೊ ಫೋಬಿಯಾ ಮತ್ತು ಏಡೋ ಫೋಬಿಯ

ಕೆಳಹೊಟ್ಟೆ ಮತ್ತು ತೊಡೆ (ನಡುವಿನ) ಭಾಗದಲ್ಲಿ ತುರಿಕೆ ಮತ್ತು ಸಣ್ಣ ಸಣ್ಣ ಕಪ್ಪುಗುಳ್ಳೆಗಳಿದ್ದರೆ ಅದು ಪೂರ್‍ರೈಗೋ ಎಂಬ ತುರಿಕೆ ಇರಬಹುದು. ಇದೇ ರೀತಿಯ ಕಪ್ಪು ಗುಳ್ಳೆಗಳು ಎದೆ, ತೋಳಿನಲ್ಲಿಯೂ ಇರಬಹುದು. ಸಾಮಾನ್ಯವಾಗಿ ದನ, ನಾಯಿ, ಬೆಕ್ಕು ಮುಂತಾದ ಸಾಕು ಪ್ರಾಣಿಗಳೊಡನೆ ಒಡನಾಟ ಇರುವವರು, ತೋಟ, ಹೊಲ ಇತ್ಯಾದಿ ಕೃಷಿ ಆಧಾರಿತ ಜೀವನ ಮಾಡುವವರು ಅಥವಾ ಬೆಳಗಿನ ಶೌಚಕಾರ್ಯಕ್ಕೆ ಪಾಯಿಖಾನೆ ಇಲ್ಲದೆ ಗಿಡ, ಪೊದೆಗಳ ಎಡೆಯಲ್ಲಿ ನಿತ್ಯ ವಿಧಿಗಳನ್ನು ಪೂರೈಸುವವರಲ್ಲಿ ಈ ರೋಗ ಹೆಚ್ಚಾಗಿ ಕಂಡು ಬರುತ್ತದೆ.

ಯಾಕೆಂದರೆ ನಿತ್ಯ ವಿಧಿಗಳಿಗಾಗಿ ಪೊದೆಯ ಗಿಡಗಳಲ್ಲಿ ಕುಳಿತುಕೊಳ್ಳುವ ಸಂದರ್ಭದಲ್ಲಿ ಹುಲ್ಲು, ಗಿಡ, ಪ್ರಾಣಿಗಳ ಮೈಮೇಲೆ ಇರುವಂತಹ ಕೆಲವೊಂದು ಕ್ರಿಮಿಕೀಟಗಳು ರಕ್ತ ಹೀರುವ ಸಲುವಾಗಿ ಚರ್ಮದ ಮೇಲೆ ಕುಳಿತುಕೊಳ್ಳುತ್ತವೆ. ಇಂತಹ ಕ್ರಿಮಿಕೀಟಗಳು ಕಚ್ಚುವುದು ಅರಿವಿಗೆ ಬಂದಿರುವುದಿಲ್ಲ. ರಾತ್ರಿ ಹೊತ್ತು ಆ ಜಾಗದಲ್ಲಿ ತುರಿಕೆ ಆರಂಭವಾಗಿ ಸಣ್ಣ ಕೆಂಪು ಬೊಕ್ಕೆಗಳು ಆರಂಭವಾಗಿ ಕ್ರಮೇಣ ಕಪ್ಪು ಬಣ್ಣದಲ್ಲಿ ನೆಲಕಡಲೆಯಷ್ಟು ದೊಡ್ಡದಾಗುತ್ತದೆ. ಈ ತುರಿಕೆಯನ್ನು ಗುಣಪಡಿಸಲು ಅನೇಕ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸ ಬೇಕಾಗುತ್ತದೆ. ದನ, ನಾಯಿ ಮುಂತಾದ ಸಾಕು ಪ್ರಾಣಿಗಳ ಮೈಮೇಲಿನ ಕೀಟಗಳ ಸೋಂಕಿಗೆ ಚಿಕಿತ್ಸೆ,ಪಾಯಿಖಾನೆ ಕಟ್ಟಿಸಿ ಕೊಳ್ಳುವುದು (ಕೇಂದ್ರ ಸರಕಾರದ ಒಂದು ಗ್ರಾಮೀಣ ಯೋಜನೆಯಲ್ಲಿ ರೂ. 400 ಕೊಟ್ಟರೆ ಉಳಿದ ಹಣ ಸಬ್ಸಿಡಿಯಾಗಿ ಸಿಗುತ್ತದೆ). ತೋಟದ ಕೆಲಸ ಮಾಡುವಾಗ ಜಾಗ್ರತೆ ಇರುವುದು ಸರಿಯಾದ ಪರಿಹಾರ.

ಮೇಲೆ ವಿವರಿಸಿದಂತಹ ತುರಿಕೆಗಳಲ್ಲದೆ ಜನನೇಂದ್ರಿಯ ದಲ್ಲಿಕುರು ಅಥವಾ ನೀರುಗುಳ್ಳೆ ರೂಪದ ಚರ್ಮರೋಗಗಳೂ ಕೆಲವೊಮ್ಮೆ ಕಾಣಿಸಿಕೊಳ್ಳುತ್ತವೆ. ನೋವಿನಿಂದ ಕೂಡಿದ ಕುರುಗಳು ಜನನೇಂದ್ರಿಯದಲ್ಲಿ ಬರುವುದುಂಟು. ಸರಿಯಾದ ಚಿಕಿತ್ಸೆ ಆದಲ್ಲಿ ಸಂಪೂರ್ಣವಾಗಿ ಅವು ಗುಣಮುಖವಾಗುತ್ತದೆ. ಕೆಲವೊಮ್ಮೆ ಈ ಕುರುಗಳು ಒಮ್ಮೆ ಒಣಗಿ ಪುನಃ ಇನ್ನೊಂದು ಕಡೆ ಮರುಕಳಿಸಬಹುದು. ಕೆಲವು ಸಲ ಸರಿಯಾದ ಚಿಕಿತ್ಸೆ ಯಾದರೂ ಇವು ಮರುಕಳಿಸಿ ಅಲ್ಲಿ ಸಣ್ಣ ತೂತುಗಳಾಗುವ ಸಾಧ್ಯತೆ ಇದೆ. ಅತಿಯಾದ ನೋವು ಇರುತ್ತದೆ. ಇದನ್ನು ಹೈಡ್ರೆಡಿನೈಟಿಸ್ ಎನ್ನುತ್ತೇವೆ.

ಇದೇ ರೀತಿ ಚರ್ಮದ ಕ್ಷಯ (serofuloderma) ಎಂಬ ರೋಗದಲ್ಲಿಯೂ ಚರ್ಮದಲ್ಲಿ ಕುರುಗಳಾಗಿ ಕ್ರಮೇಣ ಅಲ್ಲಿ ಸದಾ ಕೀವನ್ನು ಸೂಸುವ ರಂಧ್ರಗಳಾಗುತ್ತವೆ. ಇದನ್ನು ತಜ್ಞರಿಗೆ ತೋರಿಸಿ ಚಿಕಿತ್ಸೆ ಮಾಡಿಸುವುದು ಉತ್ತಮ (ಸಾಮಾನ್ಯವಾಗಿ ಯೋನಿಯ ಹೊರಭಾಗದಲ್ಲಿ ತೊಡೆಯ ಸಂದಿನಲ್ಲಿ ಇಂತಹ ರೋಗಗಳು ಕಂಡುಬರುತ್ತದೆ).

ಜನನೇಂದ್ರಿಯದ ಕೂದಲಿನ ಬುಡದಲ್ಲಿ ಆಗುವ ನೋವಿನಿಂದ ಕೂಡಿರುವ ಇನ್ನೊಂದು ಚರ್ಮರೋಗವಿದೆ. ಇದು ಒಂದು ಬ್ಯಾಕ್ಟೀರಿಯಾದಿಂದ ಬರುವ ಫಾಲಿಕ್ಯುಲೈಟಿಸ್. ಇದಕ್ಕೆ ಕಾರಣ ಕೂದಲಿನ ಬೇರಿಗೆ ಆಗುವ ನೋವು. ಹಳೇ ಬ್ಲೇಡಿನಿಂದ ಕೂದಲು ತೆಗೆಯುವುದರಿಂದ ಸಾಮಾನ್ಯವಾಗಿ ಹೀಗೆ ಹುಣ್ಣುಗಳಾಗುತ್ತವೆ. ಚರ್ಮದ ಒಳಗೆ ಕೂದಲಿನ ಬೇರುಗಳು ಒಂದಕ್ಕೊಂದು ಬಹಳ ಹತ್ತಿರದಲ್ಲಿರುತ್ತವೆ. ಹಾಗೆ ಒಂದು ಕೂದಲಿಗೆ ಬಂದ ಹುಣ್ಣು ಇನ್ನೊಂದು ಕೂದಲಿಗೆ ಹರಡುತ್ತದೆ. ಆರಂಭದ ಹಂತದಲ್ಲಾದರೆ ಗುಣಮುಖವಾಗುತ್ತದೆ. ಇಲ್ಲವಾದಲ್ಲಿ ಗುಣವಾಗಲು ತುಂಬಾ ಸಮಯ ತಗಲುತ್ತದೆ. ಹಚ್ಚುವ ಔಷಧಿಗಳನ್ನು ಸದಾ ಉಪಯೋಗಿಸುತ್ತಾ ಕಾಲ ಕಾಲಕ್ಕೆ ಔಷಧಿಗಳನ್ನು ಬದಲಾಯಿಸುತ್ತಾ ಇರಬೇಕಾಗುತ್ತದೆ. ರೋಗಗ್ರಸ್ಥ ಕೂದಲುಗಳನ್ನು ಚಿಮುಟದಿಂದ ಎಳೆದು, ಬೇರುಸಮೇತ ಕೀಳುವುದು ಬಹಳ ನೋವಿನಿಂದ ಕೂಡಿದ ಆದರೆ ಉತ್ತಮ ಫಲಿತಾಂಶ ಕೊಡಬಲ್ಲ ಒಂದು ಚಿಕಿತ್ಸೆ.

ಯೋನಿಯಲ್ಲಿ ಕೆಂಪು ಚರ್ಮ ಮೇಲಕ್ಕೆದ್ದು, ಮುಟ್ಟಿದರೆ ಅತಿಯಾದ ನೋವಿನಿಂದ ಕೂಡಿದ್ದು, ರಕ್ತವನ್ನು ಹೊರ ಸೂಸುವ ರೋಗಕ್ಕೆ ಪಯೋಜನಿಕ್ ಗ್ರಾನ್ಯುಲೋಮೊ ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಹೆರಿಗೆಯಾದ ಒಂದೆರಡು ತಿಂಗಳುಗಳಲ್ಲಿ ಯೋನಿಗೆ ಮಾಡಿದ ಕತ್ತರಿಯ ಗಾಯದಲ್ಲಿ ಅಪರೂಪವಾಗಿ ಬರುವುದಿದೆ. ಇಲ್ಲವೇ ಯೋನಿಯ ಚರ್ಮಕ್ಕೆ ಆಗುವ ಸಣ್ಣ ಪುಟ್ಟ ಗಾಯಗಳಿಂದ ಹೀಗಾಗುತ್ತದೆ. ಇದರಿಂದ ಅಪಾಯವೇನೂ ಇಲ್ಲ. ಈ ರೋಗವನ್ನು ಔಷಧಿಯ ಮೂಲಕ ಸಂಪೂರ್ಣವಾಗಿ ಗುಣಪಡಿಸಬಹುದು.

ಕೆಲವೊಮ್ಮೆ ಯೋನಿಯ ಒಳಗೆ ನೋವಿನಿಂದ ಕೂಡಿದ ಹುಣ್ಣುಗಳ ಜೊತೆಗೆ ಬಾಯಿಯಲ್ಲಿಯೂ ಹುಣ್ಣು ಇರುತ್ತದೆ. ಇದು ಆಫ್ತಸ್ ಅಲ್ಸರ್‌ಇರಬಹುದು. ಇದು ಲೈಂಗಿಕ ರೋಗವಲ್ಲ. ಇದೇ ರೀತಿ ಬೆಸೆಟ್ಸ್ ರೋಗವೂ ಬರಬಹುದು. ಪರಪುರುಷ/ಸ್ತ್ರೀಯ ಸಂಪರ್ಕವಿಲ್ಲದೆ, ಗಂಡ ಹೆಂಡಿರು ಪ್ರಾಮಾಣಿಕರಾಗಿದ್ದಾಗ ಇಂತಹ ನೋವಿನಿಂದ ಕೂಡಿದ ಹುಣ್ಣುಗಳು ಜನನೇಂದ್ರಿಯದಲ್ಲಿ ಬಂದರೆ ಬೆಸೆಟ್ಸ್ ರೋಗವಿರಬಹುದೇ ಎಂದು ಸಂಶಯಪಡಬೇಕು. ಸಾಮಾನ್ಯವಾಗಿ ಈ ರೋಗವನ್ನು ಕಾಂಕ್ರೈಡ್ ಎಂಬ ಲೈಂಗಿಕ ರೋಗವೆಂದು ವೈದ್ಯರು ತಪ್ಪಾಗಿ ಚಿಕಿತ್ಸೆ ಮಾಡುವ ಸಾಧ್ಯತೆ ಇದೆ. ಇಂತಹ ಸಂದರ್ಭಗಳಲ್ಲಿ ವೈದ್ಯರಿಗೆ ದಂಪತಿಗಳ ನಡುವೆ ಪ್ರಾಮಾಣಿಕ ವಾದ ಲೈಂಗಿಕ ಸಂಬಂಧ ಮಾತ್ರವೇ ಇರುವುದು ಎಂಬುದನ್ನು ಪುನರುಚ್ಚರಿಸುತ್ತಿರಬೇಕಾಗುತ್ತದೆ.

ಇಂತಹ ಸಂದರ್ಭಗಳಲ್ಲಿ ಗಂಡಹೆಂಡಿರು ಪರಸ್ಪರ ಅನುಮಾನಪಟ್ಟು ಕುಟುಂಬದ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುವುದು ಒಳ್ಳೆಯದಲ್ಲ. ಗಂಡ-ಹೆಂಡಿರು ಪರಸ್ಪರ ಪ್ರಾಮಾಣಿಕರಾಗಿದ್ದು, ಗಂಡ-ಹೆಂಡಿರ ನಡುವಿನ ನೆಮ್ಮದಿಯನ್ನು ನಂಬಿಕೆಯನ್ನು ಹಾಳಾಗಲು ಬಿಡಬೇಡಿ.

ಯೋನಿಯ ಒಳಗೆ ಉರಿ, ಲೈಂಗಿಕ ಕ್ರಿಯೆಯಲ್ಲಿ ತೊಡಗಿ ದಾಗ ಸಹಿಸಲಾರದ ನೋವು ಇವು ವಲ್ವೋಡೈನಿಯ ಎಂಬ ಲೈಂಗಿಕವಲ್ಲದ ಒಂದು ರೋಗದ ಲಕ್ಷಣಗಳು. ಸಾಮಾನ್ಯವಾಗಿ ಮುಟ್ಟು ನಿಂತ ಹೆಂಗಸರಲ್ಲಿ ಈ ರೀತಿ ಇರುತ್ತದೆ. ಮುಂದೆ ಈ ಅಂಕಣದಲ್ಲೇ ಪ್ರಕಟವಾಗಲಿರುವ 'ಒಣಗುವ ಯೋನಿ' ಎಂಬ ಬರಹದಲ್ಲಿಈ ರೋಗದ ಬಗ್ಗೆ ಹೆಚ್ಚಿನ ವಿವರ ಇರುತ್ತದೆ.

18 ನೇ ಪುಟಕ್ಕೆ

ಬಾಲ ಸಂಗಾತಿ ವಿಭಾಗ : ಜ್ಞಾನ -18

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಮಹಾಭಾರತದಲ್ಲಿರುವ ವೈಜ್ಞಾನಿಕ ಅಂಶ ಭೌತ ಶಾಸ್ತ್ರ

ಚಲಂ ಯಥಾ ದೃಷ್ಟಿಪಥ'ಂ ಪರ್ಯೆತಿ ಸೂಕ್ಷ್ಮಂ ಮಹದ್ರೂಪಮಿವ ಭಿಭಾತಿ। ಸ್ವರೂಪಮಾಲೋಚಯತೇಚ। ರೂಪಂ ಪರಂ ತಥಾ ಬುದ್ಧಿಪಥಂ ಪರ್ಯೆತಿ॥

ಈ ಶ್ಲೋಕದ ಆರಂಭದ ಸಾಲಿನಲ್ಲಿ ಈ ವಿಷಯವೇ ಪ್ರಕಟವಾಗಿ ಉಟ್ಟು. ಸ್ಥಿರ ವಸ್ತ್ ಗತಿಶೀಲ ದೃಷ್ಟಿಯ ಎದ್ರ್‌ಗೆ ಬಾಕಾಕನ ಚಲಿಸುವ ತರ ಕಂಡದೆ (ಚಲಿಸುವ ಹಡಗ್‌ಲಿ ಕುದ್ದವಂಗೆ ಕಾಣುವಂಗೆ)

ಹೆಂಗೆ ಸಣ್ಣ ವಸ್ತುನೂ ಗಾಜಿನ ಮೂಲಕ ನೋಡ್‌ಕಾಕನ ದೊಡ್ಡದರಂಗೆ ಕಂಡದೆಯೋ ಹಂಗೇ ಆತ್ಮವು ಬುದ್ಧಿಯ ಮಾರ್ಗನ ಆಶ್ರಯಿಸುದು.

ಶರೀರಲಿರುವ ನಿರ್ವಿಕಾರಿ ಆತ್ಮವು ಬುದ್ಧಿಯ ವಿಕಾರದ ಕಾರಣವಾಗಿ ವಿಕಾರಿಯಾಗಿ ಕಂಡದೆ. ಈ ಅಂಶನ ನಿರೂಪಿಸಿಕ್ಕಾಗಿ ಚಲಂ ಯಥಾ ದೃಷ್ಟಿ ಪಥಂ ಪರ್ಯೆತಿಯ ಉದಾಹರಣೆನ ವ್ಯಾಸ ಮಹರ್ಷಿಗ ನೀಡ್ಯೋಲೊ. ಅಂದರೆ ಗತಿಶೀಲ ವಸ್ತುಗೆ ಆಧಾರ ಆಗಿ ಇರುವ ಸ್ಥಿರವಸ್ತುನ ನೋಡಿ ಆದರೆ ಚಲನೆಯ ಭ್ರಮೆ ಉಂಟಾಗುವ ವಿಚಾರನ ಕೋಪರ್ನಿಕಸ್ ಪ್ರತಿಪಾದಿಸುದಕಿಂತ ಮೊದಲೇ ಮಹಾಭಾರತಲಿ ಈ ವಿಷಯನ ಉಲ್ಲೇಖಿಸಲಾಗಿತ್. ಈ ವಿಚಾರನ ಕುರಿತ್ ಆರ್ಯಭಟನೂ ತನ್ನ ಗ್ರಂಥಗಳ್‌ಲಿ ಉಲ್ಲೇಖಿಸಿಟ್ಟು. ಹದಿನೈದನೆ ಶತಮಾನಲಿ ಪ್ರಮಾಣಿತ ಆದ ಈ ವಿಷಯ ಭಾರತೀಯರ್‌ಗೆ ಸಹಸ್ರಾರ್ ವರ್ಷಗಳ ಹಿಂದೆನೆ ತಿಳ್‌ದಿತ್.

'ಚಲಂ ಯಥಾ ದೃಷ್ಟಿ ಪಥಂ.....' ಈ ಶ್ಲೋಕಲೇ ಮತ್ತೆರಡ್ ವೈಜ್ಞಾನಿಕ ವಿಷಯಗ ಉಲ್ಲೇಖಿತವಾಗ್ಯುಟ್ಟು. ಮೊದಲನೆದ್ ಗಾಜಿನ ಮೂಲಕ (ಮಸೂರ) ನೋಡ್‌ಕನ ಸಣ್ಣ ವಸ್ತು ದೊಡ್ಡದರಂಗೆ ಕಂಡದೆ ತ ಎರಡನೆದ್ ಸ್ವಚ್ಛ ಕನ್ನಡಿಲಿ ವಸ್ತುನ ನೈಜ ಪ್ರತಿಬಿಂಬನ ನೋಡಕ್‌ತ. ಅದರಂಗೆ

ಮೂಢಾನಾಮ್‌ಅವಲ್ಪಿಪಾಂ ಅಸಾರಂ ಭಾಷಿತಂ ಬಹು
ದರ್ಶಯತ್ಯಂತರೀತ್ಮಾನಮ್ ಅಗ್ನಿರೂಪಮಿ ಪಾಂಶು ಮಾನ್

ಹೆಂಗೆ ಸೂರ್ಯ ತನ್ನ ದಾಹಕಯುಕ್ತ ಆದ ಅಗ್ನಿ ರೂಪನ ಪ್ರಕಟಿಸಿದೆಯೋ ಹಂಗೆ ಮೂರ್ಖರ ಮತ್ತೆ ಅಹಂಕಾರಿಗಳ ಸಾರಹೀನ ಭಾಷೆ ಅವರ ಕುತ್ಸಿತ ಅಂತಃಕರಣನೇ ಪ್ರತಿಬಿಂಬಿಸಿದೆ.

ಮುಂದ್‌ವರ್ದದೆ

ಬಾಲ ಸಂಗಾತಿ ವಿಭಾಗ : ಕಥೆ-18

ಸಂಯಮಲೇ ಶಾಂತಿ ಇರ್ದು

ಒಂದು ಹಳ್ಳಿಲಿ ಒಬ್ಬ ಪಂಡಿತ ಇತ್. ಅವಂಗೆ ಒಂದು ಮಂಜ ಮತ್ತೆ ಹೆಣ್ಣ್ ಇತ್. ಅಂವ ಬಹಳ ಬಡತನಲಿ ಇತ್. ಹೆಣ್ಣ್ ಮಂಜಂಗೆ ಒಂದು ಹೊತ್ತ್‌ನ ಗಂಜಿ ಕೊಡಿಕೆಸನ ಶಕ್ತಿ ಇತ್ತ್‌ಲೆ. ಅಂವ ಕೆಲ್ಸಹೆಣ್ಣ್ ಮಂಜಂಗೆ ಒಂದು ಹೊತ್ತ್‌ನ ಗಂಜಿ ಕೊಡಿಕೆಸನ ಶಕ್ತಿ ಇತ್ತ್‌ಲೆ. ಅಂವ ಕೆಲ್ಸಕ್ಕಾಗಿ ಊರಿಂದ ಊರ್‌ಗೆ ಅಲ್‌ಕಂಡ್‌ಬಹಳ ದೂರ ಹೋಗಿಬುಟ್ಟದೆ. ಕಡೆಗೆ ಉಜ್ಜಯಿನಿ ರಾಜ ಪುರೋಹಿತ ಕೆಲ್ಸ ಸಿಕ್ಕಿತ್. ಇತ್ತ ಹೆಂಣ್, ಕೂಸುನ ಗುರುಕುಲಕ್ಕೆ ಸೇರ್ಸಿತ್. ವಿದ್ಯಾಭ್ಯಾಸ ಮುಗ್ಸಿ ಗುರುಗಳ ಜೊತೆಲಿ ದೇಶ ಪರ್ಯಟನೆಗಾಗಿ ಹೊರಟಿತ್. ಆಗ ಉಜ್ಜಯಿನಿಲಿ ಒಂದು ವಿದ್ವತ್ ಸಭೆ ಏರ್ಪಡಿಸಿದ್ದೋ ಈ ಯುವಕನೂ ಅಲ್ಲಿಗೆ ಬಂದಿತ್. ತುಂಬಾ ಜನ ಪಂಡಿತರೂ ಅಲ್ಲಿಗೆ ಬಂದಿದ್ದೊ. ಪಂಡಿತರ ಸಭೆ ಸೇರುವ ವಿಷಯ ತಿಳ್ದ್ ಅಲ್ಲಿಗೆ ಪಂಡಿತನ ಹೆಣ್ಣ್‌ನೂ ಬಂದಿತ್. ಗುರುಕುಲಲೇ ಬೆಳ್ದ್ ದೊಡ್ಡವನಾದ ಯುವಕಂಗೆ ಅವನ ಅವ್ವ ಅಪ್ಪನ ಬಗ್ಗೆ ಗೊತ್ತಿತ್ತ್‌ಲೆ.

ಸಭೆಲಿ ವಾದ ವಿವಾದ ಶುರು ಆತ್. ಶಾಂತಿ ಹೆಂಗೆ ಸಿಕ್ಕಿದೆತ ವಿಷಯ. ಎಲ್ಲಾ ಧರ್ಮದವು ಅಲ್ಲಿ ಸೇರಿದ್ದೋ. ವಾದ ವಿವಾದನ ಪರಿಶೀಲಿಸಿ ತೀರ್ಪು ಕೊಡುದು ಉಜ್ಜಯಿನಿ ರಾಜ ಪುರೋಹಿತ ಎಲ್ಲರ ವಾದ ವಿವಾದ ವಿಮರ್ಶೆಗಲನ್ನು ಕೇಳಿ ಕೊನೆಗೆ ಜ್ಞಾನವೇ ಶಾಂತಿ ಕೊಡ್ದುತ ತೀರ್ಮಾನ ಮಾಡಿ, ಜ್ಞಾನವೇ ಶಾಂತಿಯ ನೆಲೆತ ತೀರ್ಪು ಕೊಡ್ತ್. ಈ ಪಂಡಿತನ ಮಾತಿಗೆ ಎಲ್ಲವೂ ಒಪ್ಪಿಗೆ ಸೂಚಿಸಿ ತಲೆ ಅಲ್ಲಾಡಿಸಿದೊ. ಆಗ ಈ ಯುವಕ ಎದ್ದ್ ನಿತ್ತ್ ಅಲ್ಲ ಸಂಯಮಲೇ ಶಾಂತಿ ಇರ್ದುತ ಹೇಳ್ತ್. ಪಂಡಿತಂಗೆ ಸಿಟ್ಟ್ ಅವಮಾನ ಆಗಿ, ನಿನ್ನ ಸಭೆಗೆ ಕರ್ದವು ಯಾರ್? ನಿಂಗೆ ಸಭೆಗೆ ಬಾಕೆ ಏನ್ ಹಕ್ಕ್ ಉಟ್ಟುತ ಕೇಳ್ತ್.ಆಗ ಯುವಕಹೇಳ್ತ್ ಹಕ್ಕ್‌ನ ವಿಷಯ ನಂಗೆ ಗೊತ್ತಲೆ. ಆದರೆ ಸಂಯಮಲೇ ಶಾಂತಿ ಇರ್ದಂತು ನಿಜತ ಹೇಳಿ ಹೊರ್ಟ್ ಹೋತ್.

ಈ ಯುವಕನ ಮಾತ್ ಕೇಳಿ ಪಂಡಿತ ತುಂಬಾ ಪರಿತಪಿಸಿಕಂಡ್ ಅತ್ತಂದ ಇತ್ತ ಓಡಾಡಿಕಂಡ್ ಚಡಪಡಿಸಿತ್. ಇತ್ತ ಯುವಕನ ಹಿಂಬಾಲಿಸಿ ಅವನ ತಾಯಿಬಂದ್ ನಿಲ್ಲ್ ನಾನೇ ನಿನ್ನ ತಾಯಿತ ಹೇಳ್ತ್. ನಿಂಗೆ ರಾಜ ಸಭೆಗೆ ಹೋಕೆ ಹಕ್ಕ್ ಉಟ್ಟು. ನೀನ್ ಆ ಪಂಡಿತನ ಮಗನೇತ ಹೇಳ್ತ್. ಆಗ ಯುವಕ ಕೇಳ್ತ್. ಹಂಗಾದರೆ ನೀನ್ ಈ ವಿಷಯನ ಅಲ್ಲೇ ಯಾಕೆ ಹೇಳ್ತ್‌ಲೆತ ಕೇಳ್ತ್. ಆಗ ಅವನ ಅವ್ವ ಹೇಳ್ತ್. ನೀನೆ ಹೇಳ್ದೆ ಸಂಯಮಲೆ ಶಾಂತಿತ. ಅದ್‌ಕೆ ನಾನ್ ನಿಮ್ಮಪ್ಪಂಗೆ ಅವಮಾನ ಮಾಡಿಕೆ ಬೊತ್ತದೆ ಸಂಯಮ ತಾಳ್ದೆ. ಈಗ ಈ ಉಂಗುರನ ತಕಂಡ್ ನಿಮ್ಮ ಅಪ್ಪನ ಹತ್ರ ಹೋಗಿ ನಿಂಗಿರುವ ಹಕ್ಕ್‌ನ ಹೇಳ್‌ತ ಕಳ್ಸಿತ್.

ಮಂಜ ರಾಜ ಪುರೋಹಿತನ ಮನೆಗೆ ಹೋಗಿ ನೆಮ್ಮದಿ ಇಲ್ಲದೆ ಶತಪಥ ತಿರ್‌ಗ್ತಿದ್ದ ಅಪ್ಪನ ನೋಡಿ ಅವ್ವ ಕೊಟ್ಟ ಉಂಗುರನ ತೋರ್ಸಿ ನಂಗೆ ಸಭೆಗೆ ಬರುವ ಹಕ್ಕಿನ ತೋರ್ಸಿಕೆ ಬಂದೆ ಅಷ್ಟೆ. ಈಗ ನೀವು ಅಶಾಂತಿಲಿ ಅತ್ತಿತ್ತ ಅಲೆದು ಜ್ಞಾನಲಿ ಶಾಂತಿ ಸಿಕ್ಕದುಲೆತ ತೋರ್ಸಿದೆ. ಆದ್ದರಿಂದ ಸಂಯಮಲೇ ಶಾಂತಿ ಇರ್ದು ತೇಳಿ, ವಾಪಾಸ್ಸ್ ಹೊರ್ಟದೆ. ಆಗ ಅಪ್ಪ ಮಗನ ತಡ್ದ್ ನಿಲ್ಲಿಸಿ, ಅವನ ಮಾತ್‌ನ ಒಪ್ಪಿದೆ. ಹೆಣ್ಣ್‌ನೂ ಕರ್ಸಿಕಂಡ್ ಮಂಜನೊಟ್ಟಿಗೆ ಸುಖಲಿ ಬಾಳುವೆ.

ಬಿಟ್ಟೀರ ಚೊಂದಮ್ಮ

---

16 ನೇ ಪುಟದಿಂದ

ವೆನೆರೋ ಫೋಬಿಯ

ವೆನೇರಿಯಲ್ ಡಿಸೀಸ್ ಎಂದರೆ ಲೈಂಗಿಕ ರೋಗ, ಫೋಬಿಯ ಎಂಬ ಭಯ. ಲೈಂಗಿಕ ರೋಗ ಇದೆ ಎಂಬ ಭಯ ಕೆಲವರನ್ನು ಕಾಡುತ್ತದೆ. ಇಂತಹವರು ಒಮ್ಮೆಯಾದರೂ ಅನ್ಯರ ಸಂಬಂಧ ಮಾಡಿರುತ್ತಾರೆ. ಆದರೆ ಅಲ್ಲಿ ಲೈಂಗಿಕ ಕ್ರಿಯೆಯೇ ನಡೆದಿರಬೇಕೆಂದೇನಿಲ್ಲ. ಮುತ್ತಿಕ್ಕುವುದು, ಮೈ ಮುಟ್ಟುವುದು ಇತ್ಯಾದಿ ನಡೆದಿರಲೂಬಹುದು. ಆದರೆ ಇದರಿಂದಾಗಿ ಕ್ರಮೇಣ ಬೇರೆ ಯಾವುದೇ ಕಾಯಿಲೆ ಬಂದರೂ ಅವರು ಆ ಅನ್ಯ ಸಂಬಂಧದಿಂದ ಬಂದಂತಹ ಲೈಂಗಿಕ ರೋಗ ಇದಾಗಿರಬಹುದು ಎಂದು ಭಾವಿಸಿ ಭಯ ಪಡುತ್ತಾರೆ. ಈ ತರಹದ ಫೋಬಿಯ ಇರುವವರು ಹಲವಾರು ವರ್ಷಗಳು ಕಳೆದ ಮೇಲೆ ಜನನೇಂದ್ರಿಯದ ಚರ್ಮರೋಗಗಳು ಉಂಟಾದರೂ, ನಿಶ್ಶಕ್ತಿಯಾದರೂ, ತೂಕ ಕಡಿಮೆಯಾದರೂ ಅವುಗಳನ್ನು ಲೈಂಗಿಕ ರೋಗವೆಂದೇ ಭಾವಿಸುತ್ತಾರೆ. ಈ ತರದ ಫೋಬಿಯಾ ರೋಗಿಗಳಲ್ಲಿ ಗಂಡಸರೇ ಹೆಚ್ಚು. ಆದರೆ ಇತ್ತೀಚೆಗೆ ಸ್ವಚ್ಛಂದತೆ, ಗಂಡ ಪರದೇಶದಲ್ಲಿ ಅಥವಾ ದೂರ ಇದ್ದು ಧಾರಾಳ ಹಣ ಕಳಿಸುವುದು ಇತ್ಯಾದಿ ಹೆಚ್ಚಾಗಿರುವುದರಿಂದ ಈ ರೀತಿಯ ಭಯ ಇರುವ ಹೆಂಗಸರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ವೈದ್ಯರು ಇಂತಹ ರೋಗಿಗಳನ್ನು ಪರೀಕ್ಷಿಸಿ, ಅವರಿಗೆ ಯಾವುದೇ ತರದ ಲೈಂಗಿಕ ಕಾಯಿಲೆ ಇಲ್ಲ ಎಂದು ರುಜುವಾತಾದ ಮೇಲೆ (ರಕ್ತ ಪರೀಕ್ಷೆಗಳನ್ನೂ ಮಾಡಿ) ವೆನೆಯೋ ಫೋಬಿಯಾ ಕಾಯಿಲೆಗೆ ಎಂದು ಚಿಕಿತ್ಸೆ ಆರಂಭಿಸುತ್ತಾರೆ. ಇಂತಹ ರೋಗಿಗಳಿಗೆ ಲೈಂಗಿಕ ಕಾಯಿಲೆಯ ಬಗ್ಗೆ ಸಂಪೂರ್ಣ ತಿಳುವಳಿಕೆ ಕೊಟ್ಟು ಅವರ ಮನಸ್ಸಿನಲ್ಲಿ ಧೈರ್ಯ ತುಂಬಬೇಕು. ಈ ಕಾಯಿಲೆ ಅತಿಯಾದಾಗ ಮನೋವೈದ್ಯರ ಚಿಕಿತ್ಸೆಯೂ ಅತೀ ಅಗತ್ಯ. ಇಂತಹ ರೋಗ ಇರುವ ಗಂಡಂದಿರಿಗೆ ಇದ್ದಾಗ, ಮಡದಿಯರು ಅವರಿಗೆ ಧೈರ್ಯ ತುಂಬಬೇಕು. ಆದದ್ದು ಮರೆತು ಹೊಸದಾಗಿ ಜೀವನ ಪ್ರಾರಂಭಿಸುವ ಎಂದು ಪ್ರೇರೇಪಿಸಬೇಕು. ಹೆಂಡತಿಯ ಬೆಂಬಲದಿಂದ ಗಂಡಂದಿರು ಚೇತರಿಸಿಕೊಂಡು ಪ್ರಾಮಾಣಿಕ ಜೀವನ ನಡೆಸಿದ ಅನೇಕ ಸಂದರ್ಭಗಳಿವೆ. ಈಗ ಇಂತಹ ಭಯ ಹೆಚ್ಚಾಗಿ ಏಡ್ಸ್ ರೋಗದ ಬಗ್ಗೆ (ಏಡೋಫೋಬಿಯಾ) ಇರುವುದನ್ನು ನಾವು ಕಾಣುತ್ತೇವೆ. ಅಂತಹ ಜನರು ಒಬ್ಬ ವೈದ್ಯರಿಂದ ಮತ್ತೊಬ್ಬ ವೈದ್ಯ, ನಕಲಿ ವೈದ್ಯರು ಹೀಗೆ ಜೀವಮಾನವಿಡೀ ಅಲೆಯುತ್ತಾ ಮಾನಸಿಕ ಹಾಗೂ ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ. ಇದೇ ಮನೋವ್ಯಥೆಯಿಂದ ಹೊಟ್ಟೆಯಲ್ಲಿ ಜಠರ ರಸ ಅಧಿಕ ಉತ್ಪತ್ತಿಯಾಗಿ ಹೊಟ್ಟೆನೋವು, ಹಸಿವೆ ಇಲ್ಲದಿರುವುದು ಆಗುತ್ತದೆ. ಇದರಿಂದ ಕ್ರಮೇಣ ದೇಹದ ತೂಕ ಕಡಿಮೆಯಾಗುತ್ತದೆ. ಹೀಗೆ ತೂಕ ಕಡಿಮೆಯಾದೊಡನೆ ಪುನಃ ಏಡ್ಸ್‌ನಂತಹ ಕಾಯಿಲೆ ಬಂದಿರಬಹುದು ಎಂದು ಇನ್ನಷ್ಟು ಮಾನಸಿಕವಾಗಿ ಬಳಸುತ್ತಾರೆ. ಹಾಗೆಯೇ ಆರ್ಥಿಕವಾಗಿ ಕುಗ್ಗಿ ಹೋಗುತ್ತಾರೆ.

ಈ ರೀತಿ ಲೈಂಗಿಕ ರೋಗದ ಭಯ ಇರುವವರು (ವೆನೆರೋಫೋಬಿಯಾ) ಹತ್ತಾರು ವೈದ್ಯರುಗಳನ್ನು ಕಾಣದೆ ನಿಮಗೆ ವಿಶ್ವಾಸವಿರುವ ಯಾರಾದರೊಬ್ಬ ವೈದ್ಯರನ್ನು ಬದಲಿಸದೆ, ಒಬ್ಬರೇ ವೈದ್ಯರ ಹತ್ತಿರ ನಿಮ್ಮ ಎಲ್ಲ ಅನುಮಾನಗಳನ್ನು ಚರ್ಚಿಸಿ ಅವರ ಸಲಹೆಯಂತೆ ನಡೆಯುವುದು ಸೂಕ್ತ.

ಡಾ|| ಪ್ರಸನ್ನ ನರಹರಿ.

ಗುಲಾಬಿ

ನಡಿ, ಚಂದ್ರನ ಮಲ್ಲಿಗೆ, ಮೆಲ್ಲೆ ನಡಿ,
ಬಳುಕುವ ಸೊಂಟ ಉಳುಕಿ ಹೋದು ಎಚ್ಚರ ||
ಚಂದ್ರನ ಮುತ್ತಿಗೆ ನೀರಾದ ಎಸಳೇ
ನಾಚಿ-ನಾಚಿ ಮತ್ತೆ ನೀರಾಗಿಬುಟ್ಟಿಯ ಎಚ್ಚರ ||
ನಡಿ, ಚಂದ್ರನ ಮಲ್ಲಿಗೆ, ಮೆಲ್ಲೆ ನಡಿ
ಯಾರೊಟ್ಟಿಗೆ, ಓಡುವ ಕಾತುರ ಎಚ್ಚರ
ಬೆಳ್ಳಗೆ ಇರುದೆಲ್ಲ ಮಲ್ಲಿಗೆ ಅಲ್ಲ, ನೀನ್
ಗ್ಯಾನ ಮಾಡ್ದೆಲ್ಲ ದುಂಬಿಗ ಅಲ್ಲ,
ನಡಿ, ಚಂದ್ರನ ಮಲ್ಲಿಗೆ, ಮೆಲ್ಲೆ ನಡಿ ||
ಹೂವೇ! ಭಾವನೆಗಳ್ನ ಹೇಳಿಕೆ ಅಳ್‌ಕಬೇಡ, ಹೆದ್‌ರಿ
ನಿನ್ನ ನಾಚಿಕೆಗೆ ನಾನಿಲ್ಲಿ ಚಿಮ್ಮುವ ಕಾರಂಜಿ
ಏನುಟ್ಟು?ಏನಿಲ್ಲೆ? ಸುಖಿನಾ? ತೃಪ್ತಿನಾ? ಮಾತಾಡ್
ಗುಲಾಬಿ||
ಯಾರ ಮನ್‌ಸ್‌ನ ಕದಿಯಕೆ ಹೂವಾದ ನೀನ್?
ಯಾರ ಮನ್‌ಸ್‌ನ ಚುಚ್ಚಿತೆ ಮುಳ್ಳ್‌ನ ಪಡ್‌ದ?
ನಡಿ, ಚಂದ್ರನ ಮಲ್ಲಿಗೆ, ಮೆಲ್ಲೆ ನಡಿ || ಮೆಲ್ಲೆ ನಡಿ||

-ಯಾಲದಾಳು ಈ ಚಂದ್ರಕಲಾ,ಮಡಿಕೇರಿ

ನಗೆ ಹನಿ

ಈಸಬೇಕ್, ಇದ್ದ್ ಜೈಸಬೇಕ್ ಎಂದ್
ದಾಸರ ಪದ ಕೇಳಿ
ಪೋಲೀಸ್‌ನ ಮಜ ಹೇಳ್ತ್.
ಕೇಸ್ ಬೇಕ್, ಇದ್ದ್ ಜೈಲ್ ಸೇರೋಕು

ಅಂದ್

ಅಂದ್ ವಾಲ್ಮೀಕಿ ಬರ್ತ್
ಒಂದೇ ರಾಮಾಯಣ
ಇಂದ್ ರಾಜಕಾರಣಿಗ
ದಿನವೂ ಬರ್ದವೆ
ಹಲವಾರ್ ಹಗರಣಗ

ಏರಿಕೆ

ಏರಿಕೆಯಾಗುಟ್ಟ್ ಎಂದ್ ನಾ ಹೇಳ್‌ಕನ
ಸ್ಯಾಲರಿ ಎಂದ್ ಹೆಂಙ್ ಕುಙ್ತ್
ಬೆಲೆಯೇರಿಕೆ ಎಂದ್ ಹೇಳ್‌ಕನ
ತಿಂಗದ ಕಡೇಲಿ "ಸಾಲ-ರೀ"
ಎಂದ್‌ಕುಸ್ದ್ ಬಿತ್ತ್.

-ಸಂಧ್ಯಾ ಪಿಲಿಗುಂಡ, ಪುತ್ತೂರ್

ದೀಪ ಉರಿಯುವಾಗ ಬೆಳಕು ಮೇಲಕ್ಕೆ, ಕತ್ತಲೆ ಕೆಳಗೆ, ನಾವೆಲ್ಲ ಕತ್ತಲೆಯಡಿಯಲ್ಲಿ ಸಿಕ್ಕಿರುವ ಪಾಪಿಗಳು.

ವರದಕ್ಷಿಣೆ

ಹೃದಯವೆಂಬ ಮಂಟಪದಲ್ಲಿ
ಕಂಡಳು ಅವಳ ದೇವರನ್ನ
ಪ್ರೀತಿಯೆಂಬ ಹೂವಲ್ಲಿ
ಆರಾಧಿಸಿ ಪೂಜಿಸಿದಳು
ಪ್ರೀತಿಯೆಂಬ ಬೆಸುಗೆಯಲ್ಲಿ
ಅವಳೇ ಮೈ ಮರೆತಳು
ಪ್ರೀತಿಯೆಂಬ ಹೊನಲು
ಹಣವೆಂಬ ತಿರುಳು
ಬೇರೊಂದು ಹೆಣ್ಣು ಹುಡುಕಿದರು
ಅವನ ತಂದೆ ತಾಯಿಯರು
ಒಲಿದನು ವರದಕ್ಷಿಣೆಗಾಗಿ
ಅವನೊಪ್ಪಿದನು ಹಣಕ್ಕಾಗಿ
ವಂಚಿತಳಾದಳು ಪ್ರೀತಿಯಿಂದ
ದೂರವಾದನು ಅವಳಿಂದ
ದೂರದಲ್ಲಿರುವುದು ಬೆಟ್ಟ
ನುಣ್ಣಗೆ ಕಾಣುವುದು ದಿಟ್ಟ,
ಆಸೆಗಳ ಅಲೆ ಅಲೆಯಾಗಿ
ಕನಸು ಕಾಣುತ್ತಿರುವಳು
ದಿನವಿಡಿ ಪರಿತಪಿಸುವಳು
ಅವಳನ್ನು ಪ್ರೀತಿಸುವರಿಗಾಗಿ
ಮುದುಡಿ ಕುಳಿತಿರುವಳು
ಕಡಲ ತೀರದಲ್ಲಿಂದು,
ಉದಯ ಹಸ್ತವಾಯ್ತು
ಕಡಲ ಮರೆಯಂಚಿನಲ್ಲಿ
ಕನಸು ಕನಸಾಗಿ ಉಳಿಯಿತು
ಪ್ರೀತಿಯೆಂಬ ಕುರುಡು.

-ಆಜಡ್ಕ ರಾಣಿ ಬಾಲಕೃಷ್ಣ
ಕುಶಾಲನಗರ

ಫ್ಯಾಶನ್

ಈ ಫ್ಯಾಶನ್‌ಗಳೆ
ಹೀಂಗೇ ಅಡಿಕೆರೇಟಿನಂಗೆ
ಒಮ್ಮೆ ಐವತ್ತು
ಇನ್ನೊಮ್ಮೆ ನೂರೈವತ್ತು
ಒಮ್ಮೆ ಕೆಳಗೆ ಇನ್ನೊಮ್ಮೆ
ಮ್ಯಾಲೆ ನಡುಲಿದ್ದವೊ
ಅಡಿಮ್ಯಾಲೆ

ರಚನೆ: ಚಂದ್ರಾವತಿ ಬಡ್ಡಡ್ಕ, ಸುಳ್ಯ.

ನಿಮಿಗಾಗಿ ನಾನ್ ಸದಾ ಸಿದ್ಧ

ದುಡ್ಡ್‌ಂದ ಮನೆನ ತಕಣಿಕೆ ಹೊರತು ಮನೆತನನಲ್ಲ
ಹಾಸಿಗೆನನೆ ಹೊರತ್ ನಿದ್ದೆನಲ್ಲ
ಗಡಿಯಾರನನೆ ಹೊರತ್ ಸಮಯನಲ್ಲ
ಪುಸ್ತಕಗಳನನೆ ಹೊರತ್ ಜ್ಞಾನನಲ್ಲ
ಸ್ಥಾನನನೆ ಹೊರತ್ ಗೌರವನಲ್ಲ
ಗುಳಿಗೆಗಳನನೆ ಹೊರತ್ ಆರೋಗ್ಯನಲ್ಲ
ರಕ್ತನನೆ ಹೊರತು ಜೀವನನಲ್ಲ.

ನಾನ್ ಇದನನೆಲ್ಲ ಯಾಕೆ ಹೇಳುದುತ ಹೇಳಿರೆ ದುಡ್ಡ್‌ನ ಇಟ್ಟ್‌ಕಂಡ್ ಶಾಂತಿಂದ ಇರಿಕೆ ಸಾಧ್ಯ ಇಲ್ಲೆ. ಯಾಕೆ ತೆಳಿರೆ ಇದರಿಂದ ಜೀವನಲಿ ಹಲವಾರ್ ಅಡಚಣೆಗಳನ ಎದುರಿಸಿಕಾದೆ. ಇದರ್‌ಂದ ಜೀವನಲಿ ನೆಮ್ಮದಿ ಇರುದುಲೆ. ನೀವೇನ್ ಚಿಂತೆ ಮಾಡುಕುತ್ತಿಲ್ಲೆ.

ನಾನಿರುವೆ ನಿಮಿಗಾಗಿ
ನಮ್ಮ ಜನಾಂಗದ ಶ್ರೇಯಸಿಗಾಗಿ
ಕಣ್ಣೀರ್ ಯಾಕೆ? ಬಿಸಿಯುಸಿರ್ ಯಾಕೆ?
ನಿಮ್ಮಲ್ಲಿರುವ ದುಡ್ಡ್‌ನೆಲ್ಲ ನಂಗೆ ಕೊಟ್ಟ್,
ಬಾಳಿರಿ ನೀವು ಹಾಯಾಗಿ !!

ಆದರಂದ ನೀವು ನಿಮ್ಮಲ್ಲಿರುವ ದುಡ್ಡ್‌ನೆಲ್ಲಾ ನಂಗೆ ಕಳ್ಸಿ ಕೊಟ್ಟರೆ ಅದರಂದ ಆಗುವಂತ ಮಾನಸಿಕ ಅಶಾಂತಿನ ನಿಮಿಗೋಸ್ಕರ ತಡ್‌ಕಣಿಕೆ ನಾನ್ ಸದಾ ಸಿದ್ಧ.

ಇತಿ ನಿಮ್ಮ ಶ್ರೇಯೋಭಿಲಾಷಿ

-ಚೇಯಪನ ಚರಣ್ ಮೋಟಯ್ಯ,ಬಲಮುರಿ

ನವೀನ್ ಡಾಕ್ಟೋರೇಟ್



ಬೆಂಗಳೂರಿನ ಭಾರತೀಯ ವಿಜ್ಞಾನ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನೆ ನಡೆಸುತ್ತಿರುವ ಮಡಿಕೇರಿಯ ಕೂಡಕಂಡಿ ನವೀನ್ ಸೋಮಣ್ಣ ಅವರು ಮೈಸೂರು ಕಾಫಿ ಮಂಡಳಿಯ ಜೈವಿಕ ತಂತ್ರ ಜ್ಞಾನ ವಿಭಾಗದಲ್ಲಿ "ಭಾರತೀಯ ಕಾಫಿ ಗಿಡದ ಮೇಲೆ ಕ್ಯೂರಿಂಗ್" ಎಂಬ ವಿಷಯದ ಬಗ್ಗೆ ನಡೆಸಿದ ಸಂಶೋಧನೆಗೆ ಮೈಸೂರು ವಿವಿಯ ಡಾಕ್ಟೋರೇಟ್ ಪದವಿ ಲಭಿಸಿದೆ. ಮೈಸೂರಿನ ಕಾಫಿ ಮಂಡಳಿಯ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಡಾ. ಹೆಚ್. ಎಲ್. ಶ್ರೀನಾಥ್ ಅವರ ಮಾರ್ಗದರ್ಶನದಡಿಯಲ್ಲಿ ಈ ಸಂಶೋಧನೆ ಕೈಗೊಂಡಿದ್ದರು. ನವೀನ್ ಮಡಿಕೇರಿ ಪುರಸಭಾ ಅಧ್ಯಕ್ಷೆ ಕಾವೇರಮ್ಮ ಸೋಮಣ್ಣ ಅವರ ಪುತ್ರರಾಗಿದ್ದಾರೆ.

ಶುಭ ವಿವಾಹ

1. ಮೂಲತ ಕುಂಬಳದಾಳು ಗ್ರಾಮದ ಹಾಲಿ ಕುಶಾಲನಗರ ನಿವಾಸಿ ಪೋರೆಯನ ರಮೇಶ್ ಮತ್ತು ಕಾವೇರಮ್ಮ ದಂಪತಿಗಳ ಪುತ್ರಿ ಕಾವ್ಯ ಎಂಬ ವಧುವಿಗೂ ಕುಶಾಲನಗರ ಗುಮ್ಮನ ಕೊಲ್ಲಿ ನಿವಾಸಿ ಬಿ. ವಿ. ಮೀನಾಕ್ಷಿ ಮತ್ತು ಟಿ. ಪಿ. ತಿಮ್ಮಯ್ಯ ದಂಪತಿಗಳ ಪುತ್ರ ವಿನಯ್ ಎಂಬ ವರನಿಗೂ ದಿನಾಂಕ 26-1-2004 ರಂದು ಕುಶಾಲನಗರ ಗೌಡ ಸಮಾಜದಲ್ಲಿ ಬಾರಿ ವಿಜೃಂಭಣೆಯಿಂದ ನಡೆಯಿತು.

2. ಹಾಸನ ನಿವಾಸಿ ಜೈನೀರ ಲೇಟ್ ಚಂದ್ರಪ್ಪ ಮತ್ತು ಪಾರ್ವತಿ ದಂಪತಿಗಳ ಪುತ್ರ ಲೋಕೇಶ್ (ಲೋಕಿ) ಎಂಬ ವರನಿಗೂ ಕೊಳಗದಾಳು ಗ್ರಾಮದ ಕೂರನ ಕುಂಞ್ಞಪ್ಪನವರ ಪುತ್ರಿ ವಿಮಲ (ವೀಣಾ) ಳಿಗೂ ದಿನಾಂಕ 4-2-2004 ನೇ ಗುರುವಾರ ಚೇರಂಬಾಣೆ ಕೊಡವ ಸಮಾಜದಲ್ಲಿ ವೈಭವದಿಂದ ನೆರವೇರಿತು.

ಬ್ರಿಗೇಡಿಯರ್ ಮಾದಪ್ಪನವರಿಗೆ ವಿಶಿಷ್ಟ ಸೇವಾ ಪದಕ



ನಾಗಲ್ಯಾಂಡ್ ಸೇನಾ ಪಡೆಯ ಕಮಾಂಡರ್ ಆಗಿರುವ ಬ್ರಿಗೇಡಿಯರ್ ನೆಲ್ಲಮಕ್ಕಡ ಮಾದಪ್ಪ ಅವರು ಜನವರಿ ೨೬ ರಂದು ನವದೆಹಲಿಯಲ್ಲಿ ಜರುಗಿದ ಗಣರಾಜ್ಯೋತ್ಸವ ಸಮಾರಂಭ ದಲ್ಲಿ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರಿಂದ ವಿಶಿಷ್ಟ ಸೇವಾ ಪದಕ ಸ್ವೀಕರಿಸಿದರು.

ಮಾದಪ್ಪ ಅವರು ನಾಗಲ್ಯಾಂಡ್‌ನಲ್ಲಿ 'ಆರ್ಚಡ್' ಕಾರ್ಯಾಚರಣೆಯಲ್ಲಿ ತೋರಿದ ಸಾಧನೆಗಾಗಿ ಈ ಪದಕ ಲಭ್ಯವಾಗಿದೆ.

ನೆಲ್ಲಮಕ್ಕಡ ನಂಜಪ್ಪ ಅವರ ಪುತ್ರ ಬ್ರಿಗೇಡಿಯರ್ ಮಾದಪ್ಪ ಅವರು ವೆಲ್ಲಿಂಗ್ಟನ್ ಸೇನಾ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ೧೯೭೦ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಗೊಂಡು ಬಾಂಗ್ಲಾದೇಶ, ಶ್ರೀಲಂಕಾ, ಸಿಯಾಚಿನ್, ಗ್ಲೇಸಿಯರ್, ಪಂಜಾಬ್, ಮಣಿಪುರ, ನಾಗಲ್ಯಾಂಡ್, ಅಸ್ಸಾಂ ಮತ್ತು ತ್ರಿಪುರಾಗಳಲ್ಲಿ ವಿವಿಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

-ಸಂಗಾತಿ

ಒಂದಾಗಿ ಬನ್ನಿ

ನಮ್ಮವರೇ ನಮ್ಮವರೇ ಒಂದಾಗಿ ಬನ್ನಿ।
ಒಂದಾಗಿ ಬಂದು ಸೇರೋಣಾ ಇಲ್ಲಿ॥
ಹತ್ತು ಕುಟುಂಬ ಹದಿನೆಂಟು ಗೋತ್ರ ಒಂದಾಗಿ ಬನ್ನಿ।
ಒಂದಾಗಿ ಬಂದು ಬೆರೆಯೋಣಾ ಇಲ್ಲಿ॥
ಕೊಡಗು ನಾಡಿನ ಗೌಡರೆಲ್ಲಾ ಒಂದಾಗಿ ಬನ್ನಿ।
ಒಂದಾಗಿ ಬಂದು ಕೂಡೋಣಾ ಇಲ್ಲಿ॥
ಸುಳ್ಯದ ಗೌಡರೆಲ್ಲಾ ಒಂದಾಗಿ ಬನ್ನಿ।
ಒಂದಾಗಿ ಬಂದು ಕಲೆಯೋಣಾ ಇಲ್ಲಿ॥
ಅಮರ-ಸುಳ್ಯ ಮಕ್ಕಳೆಲ್ಲಾ ಒಂದಾಗಿ ಬನ್ನಿ।
ಒಂದಾಗಿ ಬಂದು ನಲಿಯೋಣಾ ಇಲ್ಲಿ॥
ಅರೆಭಾಷೆಯ ಮಕ್ಕಳೆಲ್ಲಾ ಒಂದಾಗಿ ಬನ್ನಿ।
ಒಂದಾಗಿ ಬಂದು ಕುಣಿಯೋಣಾ ಇಲ್ಲಿ॥
ದಟ್ಟಿ ಕುಪ್ಪಸ ಕಟ್ಟಿ, ಕೋವಿ ವಡಿಕತ್ತಿ ಹಿಡಿದು
ಒಂದಾಗಿ ಬನ್ನಿ।
ಒಂದಾಗಿ ಬಂದು ಆಡೋಣಾ ಇಲ್ಲಿ॥
ಹುಟ್ಟಿದ ನಾಡನ್ನು ಮರೆಯದೆ, ಅದಕ್ಕಾಗಿ ದುಡಿಯುತ್ತಾ ಬನ್ನಿ।
ಒಂದಾಗಿ ಬಂದು ಬಾಳೋಣಾ ಇಲ್ಲಿ॥
ತನ್ನ ಸ್ವಂತಿಕೆಯ ತನ್ನತನವ ತೋರುತ್ತಾ ಒಂದಾಗಿ ಬನ್ನಿ।
ಒಂದಾಗಿ ಬಂದು ಮೆರೆಯೋಣಾ ಇಲ್ಲಿ॥
ನಮ್ಮವರೇ ನಮ್ಮವರೇ ಒಂದಾಗಿ ಬನ್ನಿ।
ಒಂದಾಗಿ ಬಂದು ಸೇರೋಣಾ ಇಲ್ಲಿ॥

ರಚನೆ: ಪಟ್ಟಡ ಮುತ್ತಣ್ಣ ಪ್ರಭಾಕರ

ತಿದ್ದುಪಡಿ

1. ಕೊಡಗು ಸಂಗಾತಿ ಸಂಪುಟ 7, ಸಂಚಿಕೆ 19-20 ಪುಟ 6 ರಲ್ಲಿ ಡಾ॥ ಕುರುಂಜಿ ವೆಂಕಟ್ರಮಣಗೌಡರ ಜನ್ಮ ಜಯಂತಿಯ ವಜ್ರ ಮಹೋತ್ಸವ ಎಂಬುದನ್ನು ಡಾ॥ ಕುರುಂಜಿ ವೆಂಕಟ್ರಮಣ ಗೌಡರ ಜನ್ಮ ವರ್ಧಂತಿ ಉತ್ಸವ ಎಂಬುದಾಗಿ ಸಹ ಓದುಗರು ಓದಿಕೊಳ್ಳುವುದು. ಆದ ಪ್ರಮಾದಕ್ಕೆ ಸಂಗಾತಿ ವಿಷಾದಿಸುತ್ತದೆ.


-ಸಂ-

2. ಸಂಪುಟ 7, ಸಂಚಿಕೆ 19-20 ಪುಟ 17 ರಲ್ಲಿ ಕೊನೆಪ್ಯಾರ ದುಗಲೋಚನೆಗೆ ಬದಲಾಗಿ ದೂರಾಲೋಚನೆ ತುಂಬಿಕೊಂಡರೆ ಎಂಬುದಕ್ಕೆ ಬದಲಾಗಿ ದೂರಾಲೋಚನೆಗೆ ಬದಲಾಗಿ ದುಗಲೋಚನೆ ತುಂಬಿಕೊಂಡರೆ ಎಂಬುದಾಗಿ ಓದುಗರು ಓದಿಕೊಳ್ಳುವುದು, ಮುದ್ರಣ ದೋಷಕ್ಕೆ ವಿಷಾದವಿದೆ.

-ಸಂಪಾದಕಿ.

ಆಳವಾದ ಬಾವಿಗಳಿಗೇನೂ ಕೊರತೆ ಇಲ್ಲ, ಕೊರತೆಯಿರುವುದು ನೀರೆತ್ತುವ ಬಿಂದಿಗೆಗಳಿಗೆ.

ಮೈಸೂರು ವಿಶ್ವವಿದ್ಯಾಲಯದ ಚರಿತ್ರಾರ್ಹ ವಿಜಯ



ನಿಂತವರು : ಎಡದಿಂದ ಬಲಕ್ಕೆ ಶರತ್‌ಬಾಬು, ಸಂದಿಪ್ ಎಸ್. ಯೋಗೇಶ್, ವೇಣುಗೋಪಾಲ, ಅಮಿತ್, ಕುಮಾರ್, ದೀಪಕ್ ಪಟ್ಟಡ, ಪ್ರಶಾಂತ್,ಕಫಿಲ್ ಅಹಮ್ಮದ್, ಧನಂಜಯ, ಚಂದನ್ ಕೊಡಗನ, ಮಂಜುನಾಥ್, ನವೀನ್.
ಕುಳಿತವರು : ವಿನಯ್‌ಸಿಂಗ್, ಆನಂದ್, (ನಾಯಕ) ಮನ್ಸೂರ್ ಅಹಮ್ಮದ್ (ಕೋಚ್) ಕೃಷ್ಣ, ಫಿಸಿಕಲ್ ಎಜುಕೇಷನ್ಸ್ ಡೈರೆಕ್ಟರ್, ಮೈಸೂರು ವಿವಿ ಮಹದೇವಪ್ಪ, ಮ್ಯಾನೇಜರ್, ಪ್ರಶಾಂತ್ ಶಾನ್‌ಬಾಳ್, ಯೋಗಾನಂದ.



ಪಟ್ಟಡ ದೀಪಕ್



ಕೊಡಗನ ಚಂದನ್

ಇತ್ತೀಚೆಗೆ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆದ ವಿಶ್ವ ವಿದ್ಯಾನಿಲಯಗಳ ರಾಷ್ಟ್ರೀಯ ಕ್ರಿಕೆಟ್‌ಪಂದ್ಯಾಟವು ನಡೆಯಿತು. ಈ ಪಂದ್ಯಾಟದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯ ತಂಡವು ತೃತೀಯ ಸ್ಥಾನವನ್ನು ಗಳಿಸಿ ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯನ್ನು ತಂದಿರುವ ಸಾಧನೆ ಶ್ಲಾಘನೀಯವಾಗಿದೆ.

ದಿನಾಂಕ 31-12-2003 ರಿಂದ 12-1-2004 ರ ತನಕ ನಡೆದ ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ದೇಶದ ಒಟ್ಟು ಎಂಟು ತಂಡಗಳು ಭಾಗವಹಿಸಿದ್ದವು. ದಕ್ಷಿಣ ವಲಯದಿಂದ ಮೈಸೂರು ವಿವಿ ಹಾಗೂ ವಿಶ್ವೇಶ್ವರ ಟೆಕ್ನಾಲಜಿ ವಿವಿ ಬೆಳಗಾಂ ತಂಡ ಅರ್ಹತೆಗಳಿಸಿದ್ದವು. ಉತ್ತರ ವಲಯದಿಂದ ಪಂಜಾಬ್ ವಿವಿ ಹಾಗೂ ಡಿಲ್ಲಿ ವಿವಿ, ಪೂರ್ವವಲಯದಿಂದ ರಾಂಚಿ ವಿವಿ ಹಾಗೂ ರಾಯ್‌ಪುರ ವಿವಿ ತಂಡಗಳು, ಪಶ್ಚಿಮ ವಲಯದಿಂದ ಗುಜರಾತ್ (ದಕ್ಷಿಣ) ವಿವಿ ಹಾಗೂ ಸೌರಾಷ್ಟ್ರ ವಿವಿ ತಂಡಗಳು ಭಾಗವಹಿಸಿದ್ದವು.

ಫೈನಲ್ ಪಂದ್ಯಾಟದಲ್ಲಿ ಗುಜರಾತ್ (ದಕ್ಷಿಣ) ವಿ. ವಿ. ತಂಡವು ಸೌರಾಷ್ಟ್ರ ವಿವಿ ತಂಡವನ್ನು ಸೋಲಿಸುವುದರ ಮೂಲಕ ಪ್ರಥಮ ಸ್ಥಾನವನ್ನು ಪಡೆದರೆ, ಸೌರಾಷ್ಟ್ರ ವಿವಿ ದ್ವಿತೀಯ ಸ್ಥಾನವನ್ನು ಪಡೆಯಿತು. ಮೂರನೆ ಸ್ಥಾನಕ್ಕಾಗಿ ನಡೆದ ಅತ್ಯಾಕರ್ಷಕ ಪಂದ್ಯಾಟದಲ್ಲಿ ಮೈಸೂರು ವಿವಿ ತಂಡವು ರಾಯ್‌ಪುರ ವಿವಿಯನ್ನು ಸುಲಭದಲ್ಲಿ ಮಣಿಸಿ ತೃತೀಯ ಸ್ಥಾನವನ್ನು ಪಡೆಯಿತು.

2003-2004 ರ ಸಾಲಿನಲ್ಲಿ ಮೈಸೂರು ವಿವಿ ತನ್ನ ಅಪ್ರತಿಮ ಶ್ರೇಷ್ಠ ಮಟ್ಟದ ಆಟವನ್ನು ಪ್ರದರ್ಶಿಸಿ ದಕ್ಷಿಣ ವಲಯ ಕ್ರಿಕೆಟ್‌ನಲ್ಲಿ ಪ್ರಥಮ ತಂಡವಾಗಿ ಹೊರ ಹೊಮ್ಮಿ ಸೆಮಿ ಫೈನಲ್‌ನಲ್ಲಿ ಸೌರಾಷ್ಟ್ರ ವಿವಿಗೆ ಮೊದಲ ಇನ್ನಿಂಗ್ಸ್‌ನ ಆಧಾರದ ಮೇಲೆ ಹಾಗೂ ಕೆಟ್ಟ ಅಂಪೈರಿಂಗ್‌ನಿಂದ ಅನಿವಾರ್ಯವಾಗಿ ಸೋತರೂ ಸಹ ತೃತೀಯ ಸ್ಥಾನಕ್ಕಾಗಿ ನಡೆದ ಈ ಪಂದ್ಯಾಟದಲ್ಲಿ ರಾಯ್‌ಪುರ್ ವಿವಿ ಗಳಿಸಿದ್ದ 50 ಓವರ್ಸ್‌ನ 280 ರನ್ಸ್‌ಗಳಿಗೆ ಉತ್ತರವಾಗಿ ಮೈಸೂರು ವಿವಿ ತಂಡವು ಕೇವಲ 40 ಓವರ್ಸ್‌ನಲ್ಲಿ 282 ರನ್ಸ್‌ಗಳನ್ನೂ ಬಾರಿಸುವ ಮೂಲಕ ಅದ್ಭುತ ಜಯಭೇರಿ ಗಳಿಸಿತು.

ಮೈಸೂರು ವಿವಿ ತಂಡವು ದಕ್ಷಿಣ ವಲಯ ಹಾಗೂ ರಾಷ್ಟ್ರ ಮಟ್ಟದಲ್ಲೂ ಸಹ ಇಂತಹ ಅಮೋಘ ಸಾಧನೆಯನ್ನು ಈ ಹಿಂದೆ ಮಾಡಿರಲಿಲ್ಲ. ರಾಷ್ಟ್ರ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ ಕೀರ್ತಿ ತಂದಿದ್ದರು ಸಹ ಪಂದ್ಯಾಟದಲ್ಲಿನ ಕೆಲವು ತಪ್ಪು ಅಂಪೈರಿಂಗ್, ಕನಿಷ್ಟ ಸೌಲಭ್ಯದ ಕೊರತೆ, ಆಹಾರ ವ್ಯತ್ಯಾಸ, ಹವಮಾನ ಬದಲಾವಣೆಗಳು ತಮ್ಮ ಸೋಲಿಗೆ ಕಾರಣಗಳಾಗಿದ್ದವು ಅನ್ನುವುದನ್ನು ಕ್ರೀಡಾಪಟುಗಳಿಬ್ಬರು ಒಪ್ಪಿಕೊಳ್ಳುತ್ತಾರೆ.

ಮೈಸೂರು ವಿವಿ ಪರವಾಗಿ ಮೂಲತ ಕೊಡಗಿನ ಅವಂದೂರು ಗ್ರಾಮದ ಪಟ್ಟಡ ದೀಪಕ್ ಪ್ರಭಾಕರ ಹಾಗೂ ಶೀಲಾಮಣಿ ದಂಪತಿಗಳ ಪುತ್ರ ಪಟ್ಟಡ ದೀಪಕ್ ಮತ್ತು ಕಾರುಗುಂದ ಗ್ರಾಮದ ಕೊಡಗನ ಬಾಲಕೃಷ್ಣ ಹಾಗೂ ಲಲಿತ ದಂಪತಿಗಳ ಪುತ್ರ ಕೊಡಗನ ಚಂದನ್‌ನವರು ಭಾಗವಹಿಸಿದ್ದರು. ಮುಂದಿನ ಉತ್ತಮ ಭವಿಷ್ಯಕ್ಕೆ ಶುಭವಾಗಲಿ.

-ಸಂಗಾತಿ

Reg. No. KA/SK/MYS/88/2003 - 05 RNI No. : 10-01-96 TCI Kar. 09592

ವಿವಿಧ ಪುರಸ್ಕಾರ ಪ್ರಶಸ್ತಿಯೊಂದಿಗೆ ಪುಟ್ಟ ಪ್ರತಿಭೆ ಸಹನಾ



Statement about owner ship and other particulars about news paper Kodagu Sangathi, fortnight Magazine Form IV (See Rule - 8)

1.	Place of Publication	: Mysore, Karnataka State
2.	Periodicity of its Publication	: Fort Night
3.	Printers Name	: Smt. Pattada P. Sheelamani
4.	Whether Citizen of India	Yes / Indian
	(If foreigns, state of the country of origin)	: NA
	Address	: 12058, Sangathi Nilaya, Vijayanagar IV Stage
5.	Publishers Name	: Smt. Pattada P. Sheelamani
5.	Editors Name	Smt. Pattada P. Sheelamani
6.	Name & Address of individuals who the news paper & partners or share Holders holding more than one present of the total capital	Smt. Pattade P. Sheelamani hole proprietor 12058 Sangathi Nilaya, Vijayanagar IV Stage, II Phase, Hinkal Post, Mysore - 17

I Smt. Pattada P. Sheelamani hereby declare that the particulars are given above to the best of my knowledge.

Place : Mysore, Date 1-2-2004

Sd/-

Pattada Sheelamani, Editor

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/2404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.